ಬುಧವಾರ, ಡಿಸೆಂಬರ್ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 337 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,626	18,642	₹55,200 (ಬೆಂಗಳೂರು)	₹66,500 (ಬೆಂಗಳೂರು)	82.50

ತಾರಕಕ್ಕೇರಿದ ಗಡಿ ತಂಟೆ • ಕರವೇ ಕಾರ್ಯಕರ್ತರು, ಎಂಇಎಸ್ ಮುಖಂಡರು ವಶಕ್ಕೆ

ಬೆಳಗಾವಿ ಪ್ರವೇಶ ವಿಫಲ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಒಂದೆಡೆ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರ ಪ್ರತಿಭಟನೆ, ಇನ್ನೊಂದೆಡೆ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮೊಂಡಾಟದಿಂದಾಗಿ ಮಂಗಳವಾರ ಜಿಲ್ಲೆಯ ಜನಜೀವನ ಗಡಿ ಗದ್ದಲದಲ್ಲೇ ಕಳೆಯಿತು.

ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ 21 ಮಾರ್ಗಗಳಲ್ಲೂ ಪೊಲೀಸ್ ಚೆಕ್ ಪೋಸ್ಟ್ ನಿರ್ಮಿಸಿ, ಬಿಗಿ ಭದ್ರತೆ ಒದಗಿಸಲಾಯಿತು. ಪ್ರತಿಯೊಂದು ವಾಹನವನ್ನೂ ಕೂಲಂಕಶವಾಗಿ ತಪಾಸಣೆ ಮಾಡಿ ಬಿಡಲಾಯಿತು.

ಮಹಾರಾಷ್ಟ್ರ ಗಡಿ ಉಸ್ತುವಾರಿ ಸಚಿವರಾದ ಚಂದ್ರಕಾಂತ ಪಾಟೀಲ, ಶಂಭುರಾಜ್ ದೇಸಾಯಿ ಹಾಗೂ ಮಹಾರಾಷ್ಟ್ರ ಗಡಿ ಸಲಹಾ ಸಮಿತಿ ಅಧ್ಯಕ್ಷ ಧೈರ್ಯಶೀಲ ಮಾನೆ ಅವರ ಮೇಲೆ ಬೆಳಗಾವಿ ಗಡಿ ಪ್ರವೇಶಿಸದಂತೆ, ಜಿಲ್ಲಾಧಿಕಾರಿ ನಿಷೇಧಾಜ್ಞೆ ಹೊರಡಿಸಿದ್ದರು. ಹೀಗಾಗಿ ಅವರು ಬೆಳಗಾವಿಗೆ ಬರಲಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಮಹಾರಾಷ್ಟ್ರದಿಂದ ಬರುವ ಎಲ್ಲ ವಾಹನಗಳನ್ನೂ ತಪಾಸಣೆ ಮಾಡಲಾಯಿತು.

ಕರವೇ ಕಾರ್ಯಕರ್ತರ ವಶ: ಗಡಿ ವಿಚಾರವಾಗಿ ಮಹಾರಾಷ್ಟ್ರದ ನಿಲುವು ಖಂಡಿಸಿ ಪ್ರತಿಭಟನೆಗೆ ಬೆಳಗಾವಿಗೆ ಬರುತ್ತಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣ ಗೌಡ ಬಣದ ಹಲವು ಕಾರ್ಯಕರ್ತರನ್ನು, ಹಿರೇಬಾಗೇವಾಡಿಯ ಬಳಿ ಪೊಲೀಸರು ವಶಕ್ಕೆ ಪಡೆದರು.

ರೊಚ್ಚಿಗೆದ್ದ ಪ್ರತಿಭಟನಕಾರರು 16 ವಾಹನಗಳ ಮೇಲೆ ಕಲ್ಲು ತೂರಿ ಗಾಜು ಒಡೆದರು. ಮಹಾರಾಷ್ಟ್ರದ ನೋಂದಣಿ ಸಂಖ್ಯೆ ಹೊಂದಿರುವ ವಾಹನಗಳ ಮೇಲೆ ಹತ್ತಿನಿಂತು ಕನ್ನಡಧ್ವಜ ಪ್ರದರ್ಶಿಸಿದರು. ಹಲವು ವಾಹನಗಳ ನಂಬರ್ ಪ್ಲೇಟ್ ಕಿತ್ತರು, ಮಸಿ ಬಳಿದರು.

'ಬೆಳಗಾವಿ ನಮ್ಮ ನಮ್ಮೂರು, ನಮ್ಮ ಉಸಿರು. ನಮ್ಮೂರಿಗೇ ನಮ್ಮನ್ನು ಬಿಡದಿರುವ ಪೊಲೀಸರಿಗೆ ಧಿಕ್ಕಾರ' ಎಂದು ಘೋಷಣೆ ಕೂಗಿದರು.

ಈ ಸಂದರ್ಭದಲ್ಲಿ ನಾರಾಯಣ ಗೌಡ, 'ಗಡಿ ವಿವಾದ ನಿರ್ಧಾರ ಆಗುವವರೆಗೆ ಮಹಾರಾಷ್ಟ್ರ ಸಚಿವರು ಬಾಯಿ ಮುಚ್ಚಿಕೊಂಡಿರಬೇಕು. ಅದನ್ನು ಬಿಟ್ಟು ಹೇಡಿಗಳಂತೆ ಧಮ್ಕಿ ಹಾಕುತ್ತಾರೆ. ಒಕ್ಕೂಟ ವ್ಯವಸ್ಥೆಗೆ ಕಪ್ಪುಚುಕ್ಕೆ ತಂದ ದ್ರೋಹಿಗಳು' ಎಂದು ಕಿಡಿ ಕಾರಿದರು.

4ನೇ ಪುಟ ನೋಡಿ



ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ ಬಳಿ ಮಂಗಳವಾರ ಕರವೇ ನಾರಾಯಣ ಗೌಡ ಬಣದ ಕಾರ್ಯಕರ್ತರು, ಮಹಾರಾಷ್ಟ್ರ ನೋಂದಣಿಯ ಲಾರಿಗಳ ಮೇಲೆ ಹತ್ತಿ ನಾಡಧ್ವಜ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ: ಶಿವಕುಮಾರ ಪಾಟೀಲ

ಬಸ್‌ಗಳ ಮೇಲೆ 'ಜೈ ಮಹಾರಾಷ್ಟ್ರ'

ಪುಣೆ/ಮುಂಬೈ (ಪಿಟಿಐ): ಉಭಯ ರಾಜ್ಯಗಳ ನಡುವಿನ ಗಡಿ ವಿವಾದದ ಹಿನ್ನೆಲೆಯಲ್ಲಿ ನಗರದಲ್ಲಿಯೂ ಪ್ರತಿಭಟನೆಗಳು ನಡೆದಿದ್ದು, ಸ್ವಾರ್‌ಗೇಟ್ ಪ್ರದೇಶದ ಸಮೀಪ ಶಿವಸೇನಾ (ಉದ್ಧವ್ ಠಾಕ್ರೆ) ಕಾರ್ಯಕರ್ತರು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಕನಿಷ್ಠ ಮೂರು ಬಸ್‌ಗಳ ಮೇಲೆ 'ಜೈ ಮಹಾರಾಷ್ಟ್ರ' ಎಂದು ಬರೆದಿದ್ದಾರೆ.

ಪ್ರತಿಭಟನಕಾರರು, ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್‌ಗಳ ಮೇಲೆ ಕಪ್ಪು ಬಣ್ಣ ಸಿಂಪಡಿಸಿ, ಅದರ ಮೇಲೆ ಕಿತ್ತಳೆ ಬಣ್ಣದಿಂದ 'ಜೈ ಮಹಾರಾಷ್ಟ್ರ' ಎಂಬ ಘೋಷಣೆಗಳನ್ನು ಬರೆದಿದ್ದಾರೆ.ಈ ಪ್ರಕರಣಕ್ಕೆ ಸಂಬಂಧಿಸಿ ನಾಲ್ಕೈದು ಜನರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

4ನೇ ಪುಟ ನೋಡಿ

24 ಗಂಟೆಯೊಳಗೆ ದಾಳಿ ತಡೆಯಿರಿ: ಪವಾರ್

ಮುಂಬೈ: 'ಮಹಾರಾಷ್ಟ್ರದಿಂದ ಕರ್ನಾಟಕವನ್ನು ಪ್ರವೇಶಿಸುವ ವಾಹನಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು 24 ಗಂಟೆಗಳ ಒಳಗಾಗಿ ತಡೆಯಬೇಕು. ಇಲ್ಲದಿದ್ದರೆ, ರಾಜ್ಯದ ಸಹನೆಯ ಕಟ್ಟೆಯೊಡೆಯಲಿದ್ದು, ಬೇರೆಯೇ ಸ್ವರೂಪ ಪಡೆಯಲಿದೆ' ಎಂದು ಎನ್‌ಸಿಪಿ ವರಿಷ್ಠ ಶರದ್ ಪವಾರ್ ಮಂಗಳವಾರ ಎಚ್ಚರಿಸಿದ್ದಾರೆ.

'ಗಡಿ ಭಾಗದಲ್ಲಿನ ಪರಿಸ್ಥಿತಿ ಕಳವಳಕಾರಿಯಾಗಿದೆ. ಇಂಥ ಪರಿಸ್ಥಿತಿ ನಿರ್ಮಾಣವಾಗಲು ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಕಾರಣ' ಎಂದೂ ಅವರು ದೂರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾದಲ್ಲಿ ಅದಕ್ಕೆ ಕರ್ನಾಟಕ ಸರ್ಕಾರ ಹಾಗೂ ಕೇಂದ್ರವೇ ಹೊಣೆ' ಎಂದರು.

4ನೇ ಪುಟ ನೋಡಿ



'ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ' ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮಂಗಳವಾರ ಆಯೋಜಿಸಿದ್ದ ದಲಿತರ ಸಾಂಸ್ಕೃತಿಕ ಪ್ರತಿರೋಧ– ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ – ಪ್ರಜಾವಾಣಿ ಚಿತ್ರ/ ರಂಜು ಪಿ.

ನೀಲಿ ಬಾವುಟದ ಅಬ್ಬರ – ಜೈ ಭೀಮ್ ಗರ್ಜನೆ

ದಲಿತರ ಒಗ್ಗಟ್ಟು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಿನ್ನಾಭಿಪ್ರಾಯಗಳ ಕಾರಣದಿಂದ ಎರಡೂವರೆ ದಶಕಗಳಿಂದಲೂ ಚದುರಿಹೋಗಿದ್ದ ರಾಜ್ಯದ ವಿವಿಧ ದಲಿತ ಸಂಘಟನೆಗಳು, ಸೈದ್ಧಾಂತಿಕ ಚೌಕಟ್ಟಿನ ಆಧಾರದಲ್ಲಿ ಒಗ್ಗೂಡಿ ಹೋರಾಟ ನಡೆಸುವ ನಿರ್ಧಾರ ಕೈಗೊಂಡಿವೆ. ಕೋಮುವಾದಿ ಶಕ್ತಿಗಳು ಹಾಗೂ ರಾಜಕೀಯ ಪಕ್ಷಗಳ ಜತೆ ನಂಟು ಹೊಂದಿರುವವರನ್ನು ಹೊರಗಿಟ್ಟು ಸಮಾನಮನಸ್ಕ ದಲಿತ ಸಂಘಟನೆಗಳು ಹೋರಾಟದಲ್ಲಿ ಏಕತೆ ಪ್ರದರ್ಶಿಸುವ ತೀರ್ಮಾನಕ್ಕೆ ಬಂದಿವೆ.

ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯು ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನವಾದ ಮಂಗಳವಾರ ನಗರದ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ 'ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಣೆಗಾಗಿ ದಲಿತರ ಸಾಂಸ್ಕೃತಿಕ ಪ್ರತಿರೋಧ– ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ'ದಲ್ಲಿ ಈ ನಿರ್ಧಾರ ಪ್ರಕಟಿಸಿವೆ. ಗ್ರಾಮಗಳಿಂದ ರಾಜ್ಯ ಮಟ್ಟದವರೆಗೂ ಏಕತೆ ಕಾಯ್ದುಕೊಳ್ಳುವ ಘೋಷಣೆ ಮಾಡಿವೆ.

ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯ ಪ್ರಮುಖರಲ್ಲಿ ಒಬ್ಬರಾದ ಇಂದೂಧರ ಹೊನ್ನಾಪುರ ಅವರು, ರಾಜ್ಯದ ವಿವಿಧೆಡೆಯಿಂದ ಸಮಾವೇಶಕ್ಕೆ ಬಂದಿದ್ದ ಸಾವಿರಾರು ಜನರ ಸಮ್ಮುಖದಲ್ಲಿ ಹೋರಾಟದಲ್ಲಿ ಏಕತೆ ಪ್ರದರ್ಶಿಸುವ ನಿರ್ಣಯವನ್ನು ಘೋಷಿಸಿದರು.

4ನೇ ಪುಟ ನೋಡಿ

'ಹೋರಾಟದ ಮೂಲಕ ಗೌರವ ಸಲ್ಲಿಸಿ'

'ಸಂವಿಧಾನದ ಮೂಲಕ ನಮಗೆ ಲಭ್ಯವಾಗಿರುವ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಎಲ್ಲರೂ ಹೋರಾಟಕ್ಕೆ ಇಳಿಯಬೇಕು. ಆ ಮೂಲಕವೇ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಬೇಕು' ಎಂದು ಅಂಬೇಡ್ಕರ್ ಅವರ ಮೊಮ್ಮಗಳು ರಮಾಬಾಯಿ ಆನಂದ್ ತೇಲ್ತುಂಬ್ಡೆ ಹೇಳಿದರು.

'ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ನ್ಯಾಯ ಪಡೆಯಬೇಕು ಎಂದು ಅಂಬೇಡ್ಕರ್ ಹೇಳಿದ್ದರು. ಸಂಘರ್ಷ ಇಲ್ಲದೆ ಯಾವ ಅಧಿಕಾರ ಮತ್ತು ಹಕ್ಕುಗಳು ನಮಗೆ ಸಿಗುವುದಿಲ್ಲ. ನೀವು ಉತ್ತಮ ನಾಯಕರನ್ನು ಆಯ್ಕೆ ಮಾಡಿಕೊಂಡು, ಸಂಘಟನೆ ಕಟ್ಟಿಕೊಂಡು ಹೋರಾಟ ನಡೆಸಬೇಕು' ಎಂದರು.

ಎಲ್ಲರಿಗೂ ಸಮಾನವಾದ ಮತದಾನದ ಹಕ್ಕನ್ನು ನೀಡುವ ಮೂಲಕ ಅಂಬೇಡ್ಕರ್ ಅವರು, ದೇಶದಲ್ಲಿನ ಅಸಮಾನತೆ ತೊಲಗಿಸಲು ಪ್ರಯತ್ನಿಸಿದ್ದರು. ಮಹಿಳೆಯರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಂತಹ ಕ್ರಮಗಳನ್ನು ಕೈಗೊಂಡಿದ್ದರು. ಈ ಎರಡೂ ಅವಕಾಶಗಳನ್ನು ಬಳಸಿಕೊಂಡು ದಲಿತರು, ವಂಚಿತರು ಮತ್ತು ಬಹುಜನರು ನ್ಯಾಯ ಪಡೆಯಬೇಕು ಎಂದು ಹೇಳಿದರು.

4ನೇ ಪುಟ ನೋಡಿ

ಶಾಂತಿ ಕಾಪಾಡಲು ಬೊಮ್ಮಾಯಿ–ಶಿಂದೆ ಒಪ್ಪಿಗೆ

ಬೆಂಗಳೂರು: ಬೆಳಗಾವಿ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಹಾರಾಷ್ಟ್ರ ಸಿ.ಎಂ ಏಕನಾಥ ಶಿಂದೆ ಜತೆಗೆ ಮಂಗಳವಾರ ರಾತ್ರಿ ದೂರವಾಣಿಯಲ್ಲಿ ಮಾತುಕತೆ ನಡೆಸಿದ್ದು, ಶಾಂತಿ ಕಾಪಾಡುವುದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ.

'ಗಡಿ ವಿಚಾರದಲ್ಲಿ ರಾಜ್ಯದ ನಿಲುವಿನಲ್ಲಿ ಬದಲಾವಣೆ ಇಲ್ಲ. ಆದರೆ ಎರಡೂ ರಾಜ್ಯಗಳಲ್ಲಿ ಶಾಂತಿ ಸ್ಥಾಪನೆಗೆ ನಾವು ಒಪ್ಪಿಕೊಂಡಿದ್ದೇವೆ' ಎಂದು ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.



'ಗರ್ಭಪಾತ: ಮಹಿಳೆಯ ಆಯ್ಕೆಯೇ ಅಂತಿಮ'

ನವದೆಹಲಿ (ಪಿಟಿಐ): 'ಗರ್ಭಪಾತದ ಹಕ್ಕು ಮಹಿಳೆಯದ್ದೋ ಇಲ್ಲವೋ ಎನ್ನುವ ಚರ್ಚೆ ಜಗತ್ತಿನೆಲ್ಲೆಡೆ ಇದೆ. ಆದರೆ, ಭಾರತದ ಕಾನೂನು ಗರ್ಭಪಾತದ ಹಕ್ಕನ್ನು ಮಹಿಳೆಗೇ ನೀಡುತ್ತದೆ' ಎಂದು ದೆಹಲಿ ನ್ಯಾಯಾಲಯ ಮಂಗಳವಾರ ಹೇಳಿದೆ.

ಮಗುವಿಗೆ ಜನ್ಮ ನೀಡುವುದು ಮತ್ತು ಇನ್ನೂ ಜನ್ಮತಾಳದ ಮಗುವಿನ ಘನತೆಯ ಬದುಕಿನ ಸಾಧ್ಯತೆಯ ಕುರಿತು 'ಅಂತಿಮ ನಿರ್ಧಾರ' ತೆಗೆದುಕೊಳ್ಳುವ ಹಕ್ಕು ತಾಯಿಯದ್ದು ಎಂದು ಅಭಿಪ್ರಾಯಪಟ್ಟ ನ್ಯಾಯಾಲಯವು, 33 ವಾರಗಳ ಭ್ರೂಣದ ವೈದ್ಯಕೀಯ ಗರ್ಭಪಾತ ಮಾಡಿಸಿಕೊಳ್ಳಲು 26 ವರ್ಷದ ವಿವಾಹಿತೆಗೆ ಅನುಮತಿ ನೀಡಿತು.

ಜಿಟಿಬಿ ಆಸ್ಪತ್ರೆಯು ಗರ್ಭಪಾತಕ್ಕೆ ನಿರಾಕರಿಸಿದ ಬಳಿಕ ಮಹಿಳೆಯು, ಕಳೆದ ವಾರದೆಹಲಿನ್ಯಾಯಾಲಯದಮೆಟ್ಟಿಲೇರಿದ್ದರು. ವೈದ್ಯಕೀಯ ಗರ್ಭಪಾತ ಕಾಯ್ದೆಯ ಪ್ರಕಾರ ಗರ್ಭಪಾತ ಮಾಡಿಸಿಕೊಳ್ಳಲು ಭ್ರೂಣಕ್ಕೆ 24 ವಾರ ತುಂಬುವುದರೊಳಗೆ ಮಾತ್ರ ಅವಕಾಶ ಇದೆ. ಆದರೆ, ಈ ಪ್ರಕರಣದಲ್ಲಿ ಭ್ರೂಣಕ್ಕೆ 33 ವಾರಗಳಾಗಿತ್ತು. ಈ ಕಾರಣದಿಂದಾಗಿ ಆಸ್ಪತ್ರೆಯು ಗರ್ಭಪಾತ ಮಾಡಲು ನಿರಾಕರಿಸಿತ್ತು.

16 ವಾರದವರೆಗೂ ಭ್ರೂಣದಲ್ಲಿ ಯಾವುದೇ ಅಸಹಜತೆ ಕಂಡುಬಂದಿರಲಿಲ್ಲ. ಆದರೆ, ನ.12ರಂದು ಸ್ಕ್ಯಾನ್ ಮಾಡಿಸಿದಾಗ ಭ್ರೂಣದಲ್ಲಿ ಅಸಹಜತೆ ಕಂಡುಬಂದಿತು. ಆದ್ದರಿಂದ ಗರ್ಭಪಾತಕ್ಕೆ ಅನುಮತಿ ನೀಡಬೇಕು ಎಂದು ಮಹಿಳೆಯು ಅರ್ಜಿಯಲ್ಲಿ ಕೋರಿದ್ದರು.

'ಜನ್ಮ ತಾಳಿದ ಬಳಿಕ ಮಗುವಿನಲ್ಲಿ ಯಾವ ಪ್ರಮಾಣದ ಅಂಗವೈಕಲ್ಯ ಇರಲಿದೆ, ಮಗುವಿನ ಭವಿಷ್ಯ ಯಾವ ರೀತಿ ಇರಲಿದೆ ಎನ್ನುವ ಕುರಿತು ವೈದ್ಯಕೀಯ ಮಂಡಳಿಯು ತನ್ನ ಅಭಿಪ್ರಾಯವನ್ನು ನೀಡಿಲ್ಲ. ಆದ್ದರಿಂದ ಇಂಥ ಸಮಯದಲ್ಲಿ ಮಹಿಳೆಯ ಅಭಿಪ್ರಾಯವೇ ಮುಖ್ಯವಾಗಬೇಕು' ಎಂದು ನ್ಯಾಯಮೂರ್ತಿ ಪ್ರತಿಭಾ ಎಂ. ಸಿಂಗ್ ಅಭಿಪ್ರಾಯಪಟ್ಟರು.

'ನೈತಿಕತೆಯ ಕಣ್ಣಿನಿಂದಲೂ ನೋಡಿ'

'ಅಸಹಜತೆಯಿಂದ ಕೂಡಿದ ಮಗುವು ಹುಟ್ಟಿದ ಬಳಿಕ ಪೋಷಕರಿಗೆ ಆಗಬಹುದಾದ ಮಾನಸಿಕ ಹಿಂಸೆ, ಅವರು ಎದುರಿಸಬಹುದಾದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ನಾವು ಅಂದಾಜು ಮಾಡಬಲ್ಲೆವು. ಈ ಎಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡೇ ಅರ್ಜಿದಾರರು ಗರ್ಭಪಾತಕ್ಕೆ ಅನುಮತಿ ಕೋರಿ ಅರ್ಜಿಸಲ್ಲಿಸಿದ್ದಾರೆ' ಎಂದು ನ್ಯಾಯಮೂರ್ತಿ ಪ್ರತಿಭಾ ಸಿಂಗ್ ಹೇಳಿದರು.

'ಗರ್ಭಪಾತದಂಥ ನಿರ್ಧಾರ ತೆಗೆದುಕೊಳ್ಳುವ ಮಹಿಳೆಯೊಬ್ಬಳು ಎಂಥ ತೀವ್ರತರವಾದ ಸಂದಿಗ್ಧದಲ್ಲಿ ಇರುತ್ತಾಳೆ ಎನ್ನುವುದು ತಿಳಿದಿದೆ. ಇಂಥ ಪ್ರಕರಣಗಳ ವಿಚಾರಣೆ ನಡೆಸುವ ನ್ಯಾಯಾಧೀಶರು, ಪ್ರಕರಣವನ್ನು ಕೇವಲ ವಾಸ್ತವ ಅಥವಾ ಕಾನೂನು ಪರಿಭಾಷೆಯಲ್ಲೇ ನೋಡಬೇಕಾಗಿಲ್ಲ. ಬದಲಿಗೆ ನೈತಿಕತೆಯ ಕಣ್ಣಿನಿಂದಲೂ ನೋಡಬೇಕು' ಎಂದರು.

ಸಂಸತ್ ಅಧಿವೇಶನ ಇಂದಿನಿಂದ

ನವದೆಹಲಿ (ಪಿಟಿಐ): ಬುಧವಾರ ಆರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಬೆಲೆ ಏರಿಕೆ, ನಿರುದ್ಯೋಗ, ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಮೀಸಲಾತಿ ಮತ್ತು ಭಾರತ–ಚೀನಾ ಗಡಿ ಸಂಘರ್ಷ ಕುರಿತು ಚರ್ಚೆ ನಡೆಸಲು ವಿರೋಧ ಪಕ್ಷಗಳು ಸಿದ್ಧತೆ ನಡೆಸಿವೆ. ಈ ಅಧಿವೇಶನದಲ್ಲಿ ಈ ವಿಚಾರಗಳನ್ನು ಚರ್ಚೆಗೆ ಎತ್ತಿಕೊಳ್ಳಬೇಕು ಎಂದು ವಿರೋಧ ಪಕ್ಷಗಳು ಮಂಗಳವಾರ ನಡೆದ ಸರ್ವಪಕ್ಷ ಸಭೆಯಲ್ಲಿ ಹೇಳಿವೆ.

11

ಚಿನಕುರಳಿ

ಪ್ರಕಾಶ್ ಶೆಟ್ಟಿ



'₹ 1 ಲಕ್ಷಕ್ಕೆ ಪದವಿ, ₹ 20 ಲಕ್ಷಕ್ಕೆ ಪಿಎಚ್‌ಡಿ ಮಾರಾಟ'

ಬೆಂಗಳೂರು: ದೂರ ಶಿಕ್ಷಣ ಹೆಸರಿನಲ್ಲಿ ವಿದ್ಯಾರ್ಥಿಗಳಿಂದ ಲಕ್ಷಾಂತರ ರೂಪಾಯಿ ಪಡೆದು ನಕಲಿ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ನೀಡಿ ವಂಚಿಸುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ನಕಲಿ ಅಂಕಪಟ್ಟಿ ಮಾರುತ್ತಿದ್ದ ಆರೋಪದಡಿ ನಗರದಲ್ಲಿರುವ ವೆಂಕಟೇಶ್ವರ ಇನ್‌ಸ್ಟಿಟ್ಯೂಟ್ ಕಚೇರಿಗಳ ಮೇಲೆ ದಾಳಿ ಮಾಡಲಾಯಿತು. ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಕಿಶೋರ್, ರಾಜಣ್ಣ, ಶಾರದಾ ಹಾಗೂ ಶಿಲ್ಪಾ ಎಂಬುವರನ್ನು ಬಂಧಿಸಲಾಗಿದೆ. ದೇಶದ ವಿವಿಧ ವಿಶ್ವವಿದ್ಯಾಲಯಗಳ ಹೆಸರಿನಲ್ಲಿರುವ 1023 ನಕಲಿ ಅಂಕಪಟ್ಟಿಗಳು, 5 ಪಿಎಚ್‌ಡಿ ಪ್ರಬಂಧಗಳು, 74 ಮುದ್ರೆಗಳು, 8 ಮೊಬೈಲ್, 5 ಹಾರ್ಡ್‌ಡಿಸ್ಕ್ ಜಪ್ತಿ ಮಾಡಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

5ನೇ ಪುಟ ನೋಡಿ

'ಕ್ರೀಡಾಪಟುಗಳಿಗೆ ನೇರ ನೇಮಕಾತಿಯಡಿ ಉದ್ಯೋಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೀಡಾಪಟುಗಳಿಗೆ ನೇರ ನೇಮಕಾತಿ ಮೂಲಕ ಸರ್ಕಾರಿ ಉದ್ಯೋಗ ನೀಡುವ ಪ್ರಸ್ತಾವನೆಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಜಭವನದಲ್ಲಿ ಮಂಗಳವಾರ ಏಕಲವ್ಯ ಕ್ರೀಡಾ ಪ್ರಶಸ್ತಿ ಮತ್ತು ಇತರ ಕ್ರೀಡಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿ ಅವರು ಮಾತನಾಡಿದರು.

ಕ್ರೀಡಾ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳ ನೇತೃತ್ವದ ಆಯ್ಕೆ ಸಮಿತಿ ಮೂಲಕ ಕ್ರೀಡಾಪಟುಗಳಿಗೆ ಸರ್ಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲಾಗುವುದು. ಒಲಿಂಪಿಕ್ಸ್ ಹಾಗೂ ಪ್ಯಾರಾಲಿಂಪಿಕ್ಸ್ ಪದಕ ವಿಜೇತರಾದ ಪದವೀಧರರಿಗೆ ಗ್ರೂಪ್ 'ಎ' ಉದ್ಯೋಗ ನೀಡಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

4ನೇ ಪುಟ ನೋಡಿ

ಕೆಲ ಸಂಘ–ಸಂಸ್ಥೆಗಳಿಗೆ ಸರ್ಕಾರದಿಂದ ನೇರವಾಗಿ ಲಕ್ಷಾಂತರ ರೂಪಾಯಿ ಆರ್ಥಿಕ ನೆರವು

ಅರ್ಜಿ ಸಲ್ಲಿಸದಿದ್ದರೂ ಸಿಕ್ಕಿತು ಅನುದಾನ!

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕನ್ನಡದ ಸಂಸ್ಕೃತಿಯನ್ನು ಕಟ್ಟಿ, ಬೆಳೆಸುವ ಕಾಯಕದಲ್ಲಿ ನಿರತವಾಗಿರುವ ಸಂಘ–ಸಂಸ್ಥೆಗಳಿಗೆ ಅಲ್ಪ ಆರ್ಥಿಕ ನೆರವಿಗೂ ಹತ್ತಾರು ನಿರ್ಬಂಧ ವಿಧಿಸಿರುವ ಸರ್ಕಾರ, 'ಪ್ರಭಾವಿ' ಸಂಘ–ಸಂಸ್ಥೆಗಳಿಗೆ ನೇರವಾಗಿ ಲಕ್ಷಾಂತರ ರೂಪಾಯಿ ಅನುದಾನ ಬಿಡುಗಡೆ ಮಾಡಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಧನಸಹಾಯ' ಯೋಜನೆಯಡಿ ಆಯ್ಕೆಯಾದ ಸಂಘ–ಸಂಸ್ಥೆಗಳಿಗೆ ಈ ವರ್ಷ ಅನುದಾನದ ಗರಿಷ್ಠ ಮಿತಿಯನ್ನು ₹ 2 ಲಕ್ಷಕ್ಕೆ ಸೀಮಿತಗೊಳಿಸಿದೆ. ಅದೇ ರೀತಿ, ಡಿಸೆಂಬರ್ ಅಂತ್ಯದೊಳಗೆ ಕನಿಷ್ಠ 3 ಕಾರ್ಯಕ್ರಮಗಳನ್ನು ನಡೆಸಿ, ದಾಖಲೆಗಳನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ಸಲ್ಲಿಸುವಂತೆ ಸೂಚಿಸಿದೆ. ಇಲಾಖೆಯ ಈ ಕ್ರಮಕ್ಕೆ ಸಾಂಸ್ಕೃತಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದ್ದು, ಕಲಾವಿದರು ಪ್ರತಿಭಟನೆಯ ಎಚ್ಚರಿಕೆ ನೀಡಿದ್ದಾರೆ. ಈ ನಡುವೆ ಕೆಲವು ಸಂಘ–ಸಂಸ್ಥೆಗಳು ತಮ್ಮ ಪ್ರಭಾವ ಬಳಸಿ, ಅರ್ಜಿ ಸಲ್ಲಿಸದೆಯೇ ಸರ್ಕಾರದಿಂದ ನೇರವಾಗಿ ಆರ್ಥಿಕ ನೆರವು ಪಡೆದಿವೆ. ಈ ಬಗ್ಗೆ ದಾಖಲಾತಿಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಅಧಿಕ ನೆರವು ಪಡೆದ ಸಂಸ್ಥೆಗಳು

ಸಂಸ್ಥೆ	ಆರ್ಥಿಕ ನೆರವು
ತರಳಬಾಳು ಜಗದ್ಗುರು ಶಾಖಾ ಮಠ	₹ 2 ಕೋಟಿ
ರಾಮಸೇವಾ ಮಂಡಳಿ, ರಾಮಸೇವಾ ಸೆಲೆಬ್ರೇಷನ್ ಟ್ರಸ್ಟ್	₹ 2 ಕೋಟಿ
ಕರ್ನಾಟಕ ರಕ್ಷಣಾ ವೇದಿಕೆ, ಬೆಂಗಳೂರು	₹ 1 ಕೋಟಿ
ಕರ್ನಾಟಕ ರಾಜ್ಯೋತ್ಸವ ಸಮಿತಿ (ಖಾಸಗಿ)	₹ 75 ಲಕ್ಷ
ವಿದ್ಯಾರಣ್ಯ ಯುವಕ ಸಂಘ	₹ 25 ಲಕ್ಷ
ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ	₹ 10 ಲಕ್ಷ
ವಿಶ್ವಸಂಕೇತಿ ಭಾರತಿ, ಶಿವಮೊಗ್ಗ	₹ 5 ಲಕ್ಷ

ವಿವೇಚನಾ ಅಧಿಕಾರದ ಅನುಸಾರ ಕೆಲ ಸಂಘ–ಸಂಸ್ಥೆಗಳಿಗೆ ಸರ್ಕಾರ ಅನುದಾನ ಬಿಡುಗಡೆ ಮಾಡಬಹುದು. ಧನಸಹಾಯದ ಮಾರ್ಗಸೂಚಿಯಲ್ಲಿ ಇದಕ್ಕೆ ಅವಕಾಶ ಇದೆ

ಪ್ರಕಾಶ್ ನಿಟ್ಟಾಲಿ, ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

5ನೇ ಪುಟ ನೋಡಿ

'ಧನಸಹಾಯ ನಿರ್ಬಂಧ ಸಡಿಲಿಕೆ'

'ಧನಸಹಾಯಕ್ಕೆ ಸಂಬಂಧಿಸಿದಂತೆ ಡಿಸೆಂಬರ್ ಅಂತ್ಯದೊಳಗೆ ಮೂರು ಕಾರ್ಯಕ್ರಮಗಳನ್ನು ನಡೆಸಿ, ದಾಖಲಾತಿ ಸಲ್ಲಿಸಲು ಸಂಘ–ಸಂಸ್ಥೆಗಳಿಗೆ ಸೂಚಿಸಲಾಗಿತ್ತು. ಇದಕ್ಕೆ ಕೆಲವರಿಂದ ವಿರೋಧ ವ್ಯಕ್ತವಾಗಿದ್ದರಿಂದ ಇಲಾಖೆ ಸಚಿವರ ಗಮನಕ್ಕೆ ತಂದು, ಚರ್ಚಿಸಲಾಗಿದೆ. ಮೂರು ಕಾರ್ಯಕ್ರಮದ ನಿರ್ಬಂಧ ಸಡಿಲಿಸಿ, ಒಂದು ಕಾರ್ಯಕ್ರಮ ನಡೆಸಿದವರನ್ನೂ ಧನಸಹಾಯಕ್ಕೆ ಪರಿಗಣಿಸಬಹುದು ಎಂಬ ನಿರ್ಧಾರಕ್ಕೆ ಬರಲಾಗಿದೆ' ಎಂದು ಇಲಾಖೆ ನಿರ್ದೇಶಕ ಪ್ರಕಾಶ್ ನಿಟ್ಟಾಲಿ ತಿಳಿಸಿದರು.

ಅರಣ್ಯ ಘಟಕದಿಂದ ಅನುಮತಿ ಪಡೆದಿಲ್ಲ, ಆಕ್ಷೇಪಣೆಗೂ ಅವಕಾಶ ನೀಡಿಲ್ಲ: ಆಕ್ರೋಶ

ಬಿಬಿಎಂಪಿಯಿಂದಲೇ ಮರಗಳಿಗೆ ಕೊಡಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೆರೆಹಳ್ಳಿಯಲ್ಲಿ ಕೆರೆ ಏರಿ ಮೇಲೆ ರಸ್ತೆ ವಿಸ್ತರಣೆ ಮಾಡುವ ಸಂದರ್ಭದಲ್ಲಿ ಬಿಬಿಎಂಪಿಯು ನೂರಾರು ವರ್ಷಗಳ ಹಳೆಯ ಬೃಹತ್ ಮರಗಳನ್ನು ಯಾವುದೇ ಅನುಮತಿ ಇಲ್ಲದೆ ಏಕಾಏಕಿ ಕಡಿದು ಹಾಕಿರುವುದಕ್ಕೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ಹೊಸಕೆರೆಹಳ್ಳಿಯಲ್ಲಿ ರಸ್ತೆ ವಿಸ್ತರಣೆ ಕಾಮಗಾರಿ ನಡೆಯುತ್ತಿರುವ ಬಗ್ಗೆ ಬಿಬಿಎಂಪಿಯ ಹಿರಿಯ ಎಂಜಿನಿಯರ್‌ಗಳಿಗೇ ಮಾಹಿತಿ ಇಲ್ಲ. ಕಿರಿಯ ಎಂಜಿನಿಯರ್‌ಗಳಲ್ಲಿ ವಿವರ ಕೇಳಬೇಕು ಎಂದು ಸಬೂಬು ನೀಡುತ್ತಿದ್ದಾರೆ. ಮರಗಳನ್ನು ಕಡಿಯುವ ಬಗ್ಗೆ ಅನುಮತಿ ಪಡೆದಿರುವ ಬಗ್ಗೆ ಯಾರಲ್ಲೂ ಮಾಹಿತಿ ಇಲ್ಲ.

ಹೊಸಕೆರೆ ಏರಿ ಮೇಲೆ ಈಗಾಗಲೇ ರಸ್ತೆ ಇದ್ದು, ಅದನ್ನು ವಿಸ್ತರಣೆ ಮಾಡುವ ಕಾಮಗಾರಿಯನ್ನು ಬಿಬಿಎಂಪಿಯ ರಸ್ತೆ ಮೂಲಸೌಕರ್ಯ ವಿಭಾಗ ನಡೆಸುತ್ತಿದೆ. ಇಲ್ಲಿ ನೂರಾರು ಬೃಹತ್ ಮರಗಳಿದ್ದು, ಅವುಗಳಲ್ಲಿ ಹತ್ತಾರು ಮರಗಳನ್ನು ಯಾವುದೇ ಅನುಮತಿ ಇಲ್ಲದೆ ಸ್ಥಳೀಯ ಮುಖಂಡರ ಆಣತಿ ಮೇರೆಗೆ ಬಿಬಿಎಂಪಿ ಅಧಿಕಾರಿಗಳು ನೆಲಕ್ಕೆ ಉರುಳಿಸಿದ್ದಾರೆ ಎಂದು ಸ್ಥಳೀಯರು ದೂರಿದರು.

'ಬಿಬಿಎಂಪಿಯ ಅರಣ್ಯ ಘಟಕದವರಿಗೆ ನಾಲ್ಕೈದು ಬಾರಿ ದೂರು ನೀಡಿದ್ದರೂ ಅವರು ಕ್ರಮ ಕೈಗೊಂಡಿಲ್ಲ. ಈ ಮರಗಳನ್ನು ಕಡಿಯುವ ಮುನ್ನ ಸಾರ್ವಜನಿಕ ಪ್ರಕಟಣೆ ನೀಡಿ ಅಭಿಪ್ರಾಯವನ್ನು ಪಡೆಯಬೇಕಿತ್ತು. ಇದ್ಯಾವುದೂ ಆಗದೆ, ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ' ಎಂದು ರವಿನಾರಾಯಣ್ ಆಕ್ರೋಶ ವ್ಯಕ್ತಪಡಿಸಿದರು.

'ಮರಗಳನ್ನು ಕಡಿಯುವ ಬಗ್ಗೆ ಯಾವುದೇ ರೀತಿಯ ಸಲಹೆ ಅಥವಾ ಆಕ್ಷೇಪಣೆಗೆ ಅವಕಾಶವನ್ನು ನೀಡಿಲ್ಲ. ಇಂತಹ ಬೃಹತ್ ಮರಗಳನ್ನು ಕಡಿದಿರುವುದರಿಂದ ಅದಕ್ಕೆ ಯಾವ ರೀತಿಯ ಬದಲಿ ವ್ಯವಸ್ಥೆ ಮಾಡಲಾಗುತ್ತದೆ ಎಂಬುದನ್ನು ಹೇಳಿಲ್ಲ. ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸಿದ ಮೇಲೆ ಇದೀಗ ಮರಗಳನ್ನು ಕಡಿಯುವುದನ್ನು ನಿಲ್ಲಿಸಲಾಗಿದೆ. ಬಿಬಿಎಂಪಿ ಮಾಜಿ ಸದಸ್ಯ ಎಂದು ಹೇಳಿಕೊಳ್ಳುವ ಚಂದ್ರ ಎಂಬುವವರು ನಾಗರಿಕರ ಮೇಲೆ ದಬ್ಬಾಳಿಕೆ ನಡೆಸಿ, ಮರ ಕಡಿಯಲು ಹೇಳುತ್ತಿದ್ದಾರೆ. ಇವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಲಾಗುತ್ತದೆ.

'ರಸ್ತೆ ಮೂಲಸೌಕರ್ಯದಿಂದ ರಸ್ತೆ ವಿಸ್ತರಣೆ ಕಾಮಗಾರಿ ನಡೆಯುತ್ತಿದೆ. ಅನುಮತಿ ಇಲ್ಲದೆ ಮರಗಳನ್ನು ಕಡಿದಿರುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಸಹಾಯಕ ಎಂಜಿನಿಯರ್‌ಗಳನ್ನು ವಿಚಾರಿಸುತ್ತೇನೆ' ಎಂದು ರಸ್ತೆ ಮೂಲಸೌಕರ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಆರೀಫ್ ಹೇಳಿದರು.



ಹೊಸಕೆರೆಹಳ್ಳಿಯಲ್ಲಿ ಮರಗಳನ್ನು ಕಡಿದು ಸಾಗಿಸಿದ ಬಿಬಿಎಂಪಿ ಸಿಬ್ಬಂದಿ

ಗಮನಕ್ಕೆ ಬಂದಿಲ್ಲ: ಅರಣ್ಯ ಘಟಕ

'ಹೊಸಕೆರೆಹಳ್ಳಿ ಕೆರೆಯ ಸಮೀಪ ರಸ್ತೆಗಾಗಿ ಮರಗಳನ್ನು ಕಡಿಯುತ್ತಿರುವುದು ನಮ್ಮ ಇಲಾಖೆಯ ಗಮನಕ್ಕೆ ಬಂದಿಲ್ಲ. ಸ್ಥಳೀಯರು ಈ ಬಗ್ಗೆ ಕರೆ ಮಾಡಿದ್ದರು. ಈ ಬಗ್ಗೆ ವಿಚಾರಿಸಲು ಅಧಿಕಾರಿಗಳಿಗೆ ಹೇಳಿದ್ದೇನೆ. ಅನುಮತಿ ಇಲ್ಲದೆ, ಆಕ್ಷೇಪಣೆಗೆ ಅವಕಾಶ ಮಾಡಿಕೊಡದೆ ಮರಗಳನ್ನು ಕಡಿದಿದ್ದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಬಿಎಂಪಿ ಅರಣ್ಯ ಘಟಕದ ಉಪ ಅರಣ್ಯ ಸಂರಕ್ಷಣಾಧಿಕಾರಿ ಗೋವಿಂದರಾಜು ತಿಳಿಸಿದರು.

ಮತದಾರರ ಪಟ್ಟಿ: ಆಕ್ಷೇಪಣೆಗೆ ಅವಕಾಶ

ಬೆಂಗಳೂರು: ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಾಜಕೀಯ ಪಕ್ಷಗಳ ಪದಾಧಿಕಾರಿಗಳು ಮತದಾರರ ಪಟ್ಟಿಯ ಬಗ್ಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

ಅಜಯ್ ನಾಗಭೂಷಣ್ ಅಧ್ಯಕ್ಷತೆಯಲ್ಲಿ ಡಿ.7ರಂದು ಮಧ್ಯಾಹ್ನ 12ಕ್ಕೆ ವೈಟ್‌ಫೀಲ್ಡ್ ಮುಖ್ಯರಸ್ತೆಯಲ್ಲಿರುವ ಮಹದೇವಪುರ ವಲಯದ ಜಂಟಿ ಆಯುಕ್ತರವರ ಕಚೇರಿಯಲ್ಲಿ ಸಭೆ ನಡೆಯಲಿದೆ.

ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ ಡಿ.8ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯ ವರೆಗೆ ಅದಾಲತ್ ನಡೆಯಲಿದೆ. ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಚಿಲುಮೆ' ಹಗರಣ: ರಾಜ್ಯ ಸರ್ಕಾರಕ್ಕೆ ನೋಟಿಸ್

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಮತದಾರರ ಮಾಹಿತಿಯನ್ನು ಅಕ್ರಮವಾಗಿ ಸಂಗ್ರಹಿಸಿ ದುರುಪಯೋಗ ಮಾಡಿಕೊಳ್ಳಲಾಗಿದೆ' ಎಂಬ ಆರೋಪದಡಿ ತಮ್ಮನ್ನು ಅಮಾನತುಗೊಳಿಸಿರುವ ಆದೇಶ ಪ್ರಶ್ನಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಕೆ.ಶ್ರೀನಿವಾಸ್ ಸಲ್ಲಿಸಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ನನ್ನನ್ನು ಸೇವೆಯಿಂದ ಅಮಾನತುಗೊಳಿಸಿ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಕೆ.ಶ್ರೀನಿವಾಸ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಪಿ.ಎಸ್. ರಾಜಗೋಪಾಲ್ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಕೇಂದ್ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯದ ಕಾರ್ಯದರ್ಶಿ, ರಾಜ್ಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಹಾಗೂ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದೆ.



ಎರಡನೇ ನೋಟಿಸ್: ಐಎಎಸ್ ಅಧಿಕಾರಿಗಳ ವಿಚಾರಣೆ ಇಂದು

ಬೆಂಗಳೂರು: ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಆರೋಪದಡಿ ದಾಖಲಾಗಿರುವ ಪ್ರಕರಣದಲ್ಲಿ ಐಎಎಸ್ ಅಧಿಕಾರಿಗಳಾದ ಕೆ. ಶ್ರೀನಿವಾಸ್ ಹಾಗೂ ಎಸ್. ರಂಗಪ್ಪ ಅವರಿಗೆ ಎರಡನೇ ಬಾರಿ ನೋಟಿಸ್ ನೀಡಲಾಗಿದ್ದು, ಅವರಿಬ್ಬರು ಬುಧವಾರ ವಿಚಾರಣೆಗೆ ಹಾಜರಾಗುವ ಸಾಧ್ಯತೆ ಇದೆ.

ಚಿಲುಮೆ ಸಂಸ್ಥೆ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಹಲಸೂರು ಗೇಟ್ ಠಾಣೆ ಪೊಲೀಸರು, ಇಬ್ಬರೂ ಅಧಿಕಾರಿಗಳನ್ನು ಶನಿವಾರ (ಡಿ. 3) ಒಂದು ಸುತ್ತಿನ ವಿಚಾರಣೆ ನಡೆಸಿದ್ದರು. ಕೆಲ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿದ್ದ ಅಧಿಕಾರಿಗಳು, ಉಳಿದ ಪ್ರಶ್ನೆಗಳಿಗೆ ಉತ್ತರಿಸಲು ಕಾಲಾವಕಾಶ ಕೋರಿದ್ದರು.

ಅಧಿಕಾರಿಗಳಿಗೆ ಕಾಲಾವಕಾಶ ನೀಡಿದ್ದ ಪೊಲೀಸರು, ಬುಧವಾರ (ಡಿ. 7) ವಿಚಾರಣೆಗೆ ಬರಬೇಕೆಂದು ಹೇಳಿ ಎರಡನೇ ನೋಟಿಸ್ ಕೊಟ್ಟು ಕಳುಹಿಸಿದ್ದರು. ಹೀಗಾಗಿ, ಇಬ್ಬರೂ ಅಧಿಕಾರಿಗಳು ಬುಧವಾರ ವಿಚಾರಣೆಗೆ ಬರುವ ಸಾಧ್ಯತೆ ಇದೆ.

ಪೈ ಇಂಟರ್‌ನ್ಯಾಷನಲ್: ಲಕ್ಕಿ ಡ್ರಾ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೈ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯು ನಡೆಸಿದ ಲಕ್ಕಿ ಡ್ರಾ ಫಲಿತಾಂಶ ಪ್ರಕಟವಾಗಿದೆ.

ಗ್ರಾಹಕರು ಹತ್ತಿರದ ಪೈ ಮಳಿಗೆ ಅಥವಾ ವೆಬ್‌ಸೈಟ್: www. paiinternational.inನಲ್ಲಿ ವಿಜೇತರ ವಿವರ ವೀಕ್ಷಿಸಬಹುದು ಎಂದು ಸಂಸ್ಥೆ ತಿಳಿಸಿದೆ.

ಇದೇ ವರ್ಷದ ಸೆ.24ರಿಂದ ನ.29ರ ಒಳಗೆ ಪೈ ಮಳಿಗೆಯಲ್ಲಿ ಖರೀದಿಸಿದ ಗ್ರಾಹಕರ ಸಮ್ಮುಖದಲ್ಲಿ ಡಿ.24ರಂದು ನಡೆದ ಕಾರ್ಯಕ್ರಮದಲ್ಲಿ ವಿಜೇತರ ಆಯ್ಕೆ ಮಾಡಲಾಯಿತು. ಸಾಮಾಜಿಕ ಮಾಧ್ಯಮದಲ್ಲೂ ನೇರಪ್ರಸಾರ ಮಾಡಲಾಯಿತು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಮೂವರು ಗ್ರಾಹಕರಿಗೆ ₹ 10 ಲಕ್ಷ ನಗದು ಬಹುಮಾನ (ಮೆಗಾ ಬಂಪರ್ ಬಹುಮಾನ), 120 ಗ್ರಾಹಕರಿಗೆ ₹ 1 ಲಕ್ಷದ ನಗದು ಬಹುಮಾನ, 300 ಗ್ರಾಹಕರಿಗೆ 20 ಸಾವಿರ ಪೈ ಲಾಯಲ್ಟಿ ಪಾಯಿಂಟ್ಸ್ (ಪ್ರಥಮ), 300 ಗ್ರಾಹಕರಿಗೆ 10 ಸಾವಿರ ಪೈ ಲಾಯಲ್ಟಿ ಪಾಯಿಂಟ್ಸ್ (ದ್ವಿತೀಯ), 3 ಸಾವಿರ ಗ್ರಾಹಕರಿಗೆ 5 ಸಾವಿರ ಲಾಯಲ್ಟಿ ಪಾಯಿಂಟ್ಸ್ (ತೃತೀಯ), 60 ಸಾವಿರ ಗ್ರಾಹಕರಿಗೆ 2 ಸಾವಿರ ಲಾಯಲ್ಟಿ ಪಾಯಿಂಟ್ಸ್ (ನಾಲ್ಕನೇ ಬಹುಮಾನ) ಘೋಷಿಸಲಾಗಿದೆ. 63,723 ಮಂದಿಗೆ ಬಹುಮಾನ ಘೋಷಿಸಲಾಗಿದೆ. 21,59,836 ಕೂಪನ್ ವಿತರಿಸಲಾಗಿತ್ತು.

'ಕರ್ನಾಟಕ ಹಾಗೂ ತೆಲಂಗಾಣದಲ್ಲಿ ಪೈ ಷೋರೂಂಗಳಿವೆ. ನಂಬಿಕೆಗೆ ಅರ್ಹವಾದ ಸಂಸ್ಥೆಯಾಗಿದ್ದು, ಎಲೆಕ್ಟ್ರಾನಿಕ್ಸ್, ಮೊಬೈಲ್, ಲ್ಯಾಪ್‌ಟಾಪ್‌ಗಳು ಲಭಿಸುತ್ತಿವೆ. ಪಾರದರ್ಶಕವಾಗಿ ವಿಜೇತರ ಆಯ್ಕೆ ನಡೆದಿದೆ' ಎಂದು ವ್ಯವಸ್ಥಾಪಕ ನಿರ್ದೇಶಕ ರಾಜಕುಮಾರ ಪೈ ತಿಳಿಸಿದ್ದಾರೆ.

'ಇದುವರೆಗೆ ಗ್ರಾಹಕರಿಗೆ 320 ಕಾರು, 320 ಬೈಕ್, 78.12 ಕೋಟಿ ಪೈ ಲಾಯಲ್ಟಿ ಪಾಯಿಂಟ್ಸ್, ₹ 2.65 ಕೋಟಿ ನಗದು ಬಹುಮಾನ, 7.32 ಕೋಟಿ ಚಿನ್ನದ ನಾಣ್ಯ ವಿತರಣೆ ಮಾಡಲಾಗಿತ್ತು. ಜತೆಗೆ, ಎಲ್‌ಸಿಡಿ, ಎಲ್‌ಇಡಿ, ರೆಫ್ರಿಜರೇಟರ್, ವಾಷಿಂಗ್ ಮಷಿನ್, ಮೊಬೈಲ್, ಡಿ.ವಿ.ಡಿ ಪ್ಲೇಯರ್ ಹಾಗೂ ಇಂಡಕ್ಷನ್ ಕುಕ್ಕರ್‌ಗಳನ್ನು ಗ್ರಾಹಕರಿಗೆ ವಿತರಿಸಲಾಗಿದೆ' ಎಂದು ಹೇಳಿದರು.

ನಗರದಲ್ಲಿ ಇಂದು

ಇಸ್ರೊ ಮತ್ತು ಬಾಹ್ಯಾಕಾಶ ವಿಜ್ಞಾನ ಕುರಿತು ವಿಚಾರ ಸಂಕಿರಣ: ಅತಿಥಿಗಳು: ಜಯಕರ್ ಎಸ್. ಎಂ., ಎಚ್.ಎಲ್. ಶ್ರೀನಿವಾಸ, ಅಧ್ಯಕ್ಷತೆ: ಜಯರಾಮ ಎಸ್.ಶೆಟ್ಟಿ, ಆಯೋಜನೆ: ಜೆ. ಎಸ್. ಪದವಿಪೂರ್ವ ಕಾಲೇಜು ಮತ್ತು ಇಸ್ರೊ, ಸ್ಥಳ: ಜೆ ಎಸ್ ಪದವಿ ಪೂರ್ವ ಕಾಲೇಜು, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ: ಅತಿಥಿಗಳು: ರಾಜ್ಯಪಾಲ ಥಾವರಚಂದ್ ಗೆಹಲೋತ್, ಆರಗ ಜ್ಞಾನೇಂದ್ರ, ಪೌಲ್ ದೀಪಕ್ ನಾಯ್ದು, ಅಧ್ಯಕ್ಷತೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಸ್ಥಳ: ರಾಜಭವನ, ಬೆಳಿಗ್ಗೆ 11

'ಧೂತ ಘಟೋತ್ಕಚ' ನಾಟಕ ಪ್ರದರ್ಶನ: ಉದ್ಘಾಟನೆ: ಡಿ. ರಂದೀಪ್, ಅಧ್ಯಕ್ಷತೆ: ಜಿ. ತಿಪ್ಪೇಸ್ವಾಮಿ, ಅತಿಥಿಗಳು: ನೀಲಮ್ಮ, ವೆಂಕಟರಾಜು, ನಿರ್ದೇಶನ: ಹೊನ್ನಿಗಾನಹಳ್ಳಿ, ಗೀತಗಾಯನ: ಜೆ.ಕೆ. ರಾಜಕುಮಾರಿ ವರ್ಷಾ, ಆಯೋಜನೆ: ರಂಗ ಕಳಸ, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

ಪ್ರಶಸ್ತಿ ಪ್ರದಾನ, ಬಹುಮಾನ, ಸರ್ಕಾರಿ ಕನ್ನಡ ಶಾಲೆಗೆ ನೆರವು ಕನ್ನಡ ಮಾಧ್ಯಮ ಮಕ್ಕಳಿಗೆ ಪುರಸ್ಕಾರ: ಉದ್ಘಾಟನೆ: ಎಲ್. ಹನುಮಂತಯ್ಯ, ಅಧ್ಯಕ್ಷತೆ: ವೂಡೇ.ಪಿ. ಕೃಷ್ಣ, ಅತಿಥಿಗಳು: ಗೊ.ರು. ಚನ್ನಬಸಪ್ಪ, ಆರ್. ಶೇಷಶಾಸ್ತ್ರಿ, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ಶೇಷಾದ್ರಿಪುರ ಕಾಲೇಜಿನ ಸಭಾಂಗಣ, ಶೇಷಾದ್ರಿಪುರ, ಸಂಜೆ: 5

ರಂಜನಿ ರಾಘವನ್ ಬರೆದ 'ಸ್ವೈಪ್ ರೈಟ್' ಪುಸ್ತಕ ಬಿಡುಗಡೆ: ಯೋಗರಾಜ ಭಟ್, ಅತಿಥಿಗಳು: ಕವಿರಾಜ್, ಮಂಸೋರೆ, ಉಪಸ್ಥಿತಿ: ರಂಜನಿ ರಾಘವನ್ ಆಯೋಜನೆ: ಬಹುರೂಪಿ, ಸ್ಥಳ: ಬ್ಲಾಸಮ್ ಬುಕ್ ಹೌಸ್, ಚರ್ಚ್ ಸ್ಟ್ರೀಟ್, ಸಂಜೆ 5:30



ಯೋಗರಾಜ್ ಭಟ್

ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಸಿ.ಎಂ • ನಗರದ ವಿವಿಧೆಡೆ ಪರಿನಿರ್ವಾಣ ದಿನ ಆಚರಣೆ

‘ಭಾರತದ ಯಶಸ್ಸಿನಲ್ಲಿ ಅಂಬೇಡ್ಕರ್ ಶ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾನತೆಯ ಹರಿಕಾರ ಡಾ.ಬಿ.ಆರ್.ಅಂಬೇಡ್ಕರ್‌ರ 66ನೇ ಮಹಾನಿರ್ವಾಣ ದಿನವನ್ನು ನಗರದಲ್ಲಿ ಮಂಗಳವಾರ ಆಚರಿಸಲಾಯಿತು.

ವಿಧಾನಸೌಧದ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಹಲವು ಭಾಷೆ, ಜಾತಿ, ಪ್ರಾಂತ್ಯಗಳಿಂದ ಕೂಡಿದ ದೇಶವನ್ನು ಒಂದು ಅಖಂಡ ಭಾರತವಾಗಿ ರೂಪಿಸಿದ ಶ್ರೇಯ ಸಂವಿಧಾನಕ್ಕೆ ಸಲ್ಲುತ್ತದೆ. ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಭಾರತ ಯಶಸ್ಸು ಕಾಣಲು ಅಂಬೇಡ್ಕರ್ ಶ್ರಮವಿದೆ ಎಂದು ಬಣ್ಣಿಸಿದರು.

ಭಾರತದ ಸಂವಿಧಾನವನ್ನು ಬದಲಾದ ಕಾಲ, ಸ್ವರೂಪಕ್ಕೆ ತಕ್ಕಂತೆ ಬದಲಾವಣೆಗೆ ಒಳಪಡಿಸಬಹುದಾಗಿದೆ. ಎಂತಹ ಸವಾಲುಗಳಿದ್ದರೂ ಪರಿಹಾರ ಕಂಡುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಬದುಕಿನ ನೋವು, ಅಪಮಾನದ ಅನುಭವಗಳನ್ನೇ ಅಸ್ತ್ರವಾಗಿಸಿಕೊಂಡ ಬಾಬಾ ಸಾಹೇಬರು ತುಳಿತಕ್ಕೆ, ನಿಂದನೆಗೆ ಒಳಗಾದ ವರ್ಗಕ್ಕೆ ಸಂವಿಧಾನದ ಮೂಲಕ ರಕ್ಷಣೆ ನೀಡಿದರು. ಭಾರತದ ಆರ್ಥಿಕ ಬೆಳವಣಿಗೆಗೂ ಮಹತ್ವ ನೀಡಿದ್ದರು ಎಂದರು.

ಸಾಮಾಜಿಕ ನ್ಯಾಯ, ಸಮಾನತೆ ಮಾತಿನಿಂದ ಪೂರ್ಣವಾಗದು, ಅಂತಹ ವಿಷಯಗಳು ಭಾಷಣಗಳ ಸರಕಾಗಬಾರದು. ಸಂವಿಧಾನದ ಆಶಯಗಳನ್ನು ಸಂಪೂರ್ಣವಾಗಿ ಈಡೇರಿಸಲು ಸರ್ಕಾರ ಬದ್ಧವಾಗಿದೆ. ಹಲವು ಯೋಜನೆಗಳನ್ನು ರೂಪಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ ಹೆಚ್ಚಿಸುವ ಮೂಲಕ ಕ್ರಾಂತಿಕಾರಿ ನಿರ್ಧಾರ ಕೈಗೊಳ್ಳಲಾಗಿದೆ. ₹ 29 ಸಾವಿರ ಕೋಟಿ ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿರಿಸಲಾಗಿದೆ. ಸಮಗ್ರ ಅಭಿವೃದ್ಧಿಯ ಕಲ್ಪನೆಯಲ್ಲಿ ಕೆಲಸ ಮಾಡಲಾಗುತ್ತಿದೆ. ಪರಿಶಿಷ್ಟರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಪ್ರಬಲರಾಗಿ, ಸಬಲೀಕರಣ ಹೊಂದಬೇಕು. ಸ್ವಾವಲಂಬಿ, ಸ್ವಾಭಿಮಾನದ ಬದುಕು ನಡೆಸಬೇಕು ಎನ್ನನುವ ಆಶಯ ನಮ್ಮದು ಎಂದು ವಿವರ ನೀಡಿದರು.

ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಸಚಿವ ಗೋವಿಂದ ಕಾರಜೋಳ ಉಪಸ್ಥಿತರಿದ್ದರು.




ಯಶವಂತಪುರ ವೃತ್ತದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಮಂಗಳವಾರ ಮಾಲಾರ್ಪಣೆ ಮಾಡಿದರು. ವಿಧಾನ ಪರಿಷತ್ ಸದಸ್ಯ ನಾರಾಯಣಸ್ವಾಮಿ, ಪಾಲಿಕೆ ಮಾಜಿ ಸದಸ್ಯರಾದ ಜಯಪಾಲ್, ಮಂಜುನಾಥ, ಬಿಜೆಪಿ ಮುಖಂಡರಾದ ಸುರೇಶಗೌಡ ಸೇರಿದಂತೆ ನೂರಾರು ಮಂದಿ ಇದ್ದರು (ಎಡಚಿತ್ರ) ಮಲ್ಲಸಂದ್ರದ ರವೀಂದ್ರ ನಗರದಲ್ಲಿ ದಾಸರಹಳ್ಳಿ ಕ್ಷೇತ್ರ ಬಿಜೆಪಿ ಎಸ್‌ಸಿ. ಘಟಕದ ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರ್ ನೇತೃತ್ವದಲ್ಲಿ ಆಯೋಜಿಸಿದ್ದ ಮಹಾನಿರ್ವಾಣ ದಿನದಲ್ಲಿ ಮಾಜಿ ಶಾಸಕ ಎಸ್. ಮುನಿರಾಜು ಅವರು ಅಂಬೇಡ್ಕರ್ ಪ್ರತಿಮೆ ಹಾಗೂ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು

‘ಮಹಿಳೆಯರ ಸಬಲೀಕರಣಕ್ಕೆ ಹೋರಾಟ’

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿ ನಡೆದ ಸಮಾರಂಭದಲ್ಲಿ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಮಾತನಾಡಿ, ಅಂಬೇಡ್ಕರ್ ಅವರು ಸಾಮಾಜಿಕ, ಆರ್ಥಿಕ, ರಾಜಕೀಯ, ಸಮಾನತೆ ಹಾಗೂ ಸಮಸಮಾಜ ನಿರ್ಮಾಣ, ಮಹಿಳೆಯರ ಸಬಲೀಕರಣಕ್ಕೆ ಹೋರಾಟ ನಡೆಸಿದ್ದರು ಎಂದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಂಬೇಡ್ಕರ್ ಅವರ ತತ್ವ, ಆದರ್ಶ, ಸಿದ್ಧಾಂತ ಮತ್ತು ಮೌಲ್ಯಗಳನ್ನು ಅಳವಡಿಸಿಕೊಂಡರೆ ನಾವುಗಳು ಅವರಿಗೆ ಸಲ್ಲಿಸುವ ಗೌರವವಾಗಿರುತ್ತದೆ ಎಂದು ತಿಳಿಸಿದರು. ವಿ.ವಿಯ ಕುಲಸಚಿವ (ಮೌಲ್ಯಮಾಪನ) ವಿ. ಲೋಕೇಶ್, ವಿತ್ತಾಧಿಕಾರಿ ರಘು ಜಿ.ಪಿ., ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎಂ.ಮುನಿರಾಜು ಇದ್ದರು.

‘ಸಮಾನತೆ ಧ್ವನಿ ನೀಡಿದ ಅಂಬೇಡ್ಕರ್’

ಪೀಣ್ಯ ದಾಸರಹಳ್ಳಿ: ‘ತುಳಿತ, ದೌರ್ಜನ್ಯಕ್ಕೆ ಒಳಗಾದ ಹಾಗೂ ಕೀಳಾಗಿ ಕಂಡವರಿಗೆ ಸಮಾನತೆಯ ಧ್ವನಿ ಕೊಟ್ಟವರು ಅಂಬೇಡ್ಕರ್’ ಎಂದು ಮಾಜಿ ಶಾಸಕ ಎಸ್. ಮುನಿರಾಜು ತಿಳಿಸಿದರು.

ಮಲ್ಲಸಂದ್ರದ ರವೀಂದ್ರ ನಗರದಲ್ಲಿ ದಾಸರಹಳ್ಳಿ ಕ್ಷೇತ್ರ ಬಿಜೆಪಿ ಎಸ್.ಸಿ ಘಟಕವು ಆಯೋಜಿಸಿದ್ದ ಆಯೋಜಿಸಿದ್ದ ಮಹಾಪರಿನಿರ್ವಾಣ ದಿನದಲ್ಲಿ ಅಂಬೇಡ್ಕರ್ ಪ್ರತಿಮೆ ಹಾಗೂ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಮುಖಂಡರಾದ ವೆಂಕಟರಾಮು, ಚೆನ್ನಮ್ಮ, ಚಿಕ್ಕಣ್ಣ, ಪಿ.ಎಚ್.ರಾಜು, ಟಿ. ಶಿವಕುಮಾರ್, ಡಿ.ಕೆ. ಮಹೇಶ್, ಪಾಂಡುರಂಗ ರಾವ್, ಹುಚ್ಚರಂಗಯ್ಯ, ಡಿ.ಎಂ.ವೆಂಕಟೇಶ್ ಇದ್ದರು.

ಪಿಟಿಸಿಎಲ್ ಕಾಯ್ದೆ: ಪ್ರತಿಭಟನೆ

ಬೆಂಗಳೂರು: ಕರ್ನಾಟಕ ಪರಿಶಿಷ್ಟ ಜಾತಿ, ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆ (ಪಿಟಿಸಿಎಲ್) ತಿದ್ದುಪಡಿಗೆ ಆಗ್ರಹಿಸಿ ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ, ಜಂಬೂದ್ವೀಪ ಜನ ಸೇನೆ, ದಸಂಸ, ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ ಸದಸ್ಯರು ಮಂಗಳವಾರ ಅಂಬೇಡ್ಕರ್ ಪ್ರತಿಮೆ ಮುಂದೆ, ಮುಖ್ಯಮಂತ್ರಿ ಸಮ್ಮುಖದಲ್ಲಿ ಬಾಯಿ ಬಡಿದುಕೊಂಡು ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ದೊರೆತು 75 ವರ್ಷಗಳು ಕಳೆದರೂ, ಪರಿಶಿಷ್ಟರೂ ಸೇರಿದಂತೆ ಹಲವು ಶೋಷಿತ ಸಮುದಾಯಗಳು ನಾಗರಿಕ ಸಮಾಜದ ಮೂಲ ಸೌಲಭ್ಯಗಳಿಂದ ವಂಚಿತವಾಗಿವೆ. ದೇಶದ ಜನಸಂಖ್ಯೆಯಲ್ಲಿ ಶೇ 30ರಷ್ಟಿರುವ ಪರಿಶಿಷ್ಟರು ಬಲಾಢ್ಯರ ದೌರ್ಜನ್ಯಕ್ಕೆ ಒಳಗಾಗುತ್ತಾ ತಮ್ಮ ಭೂಮಿ, ಆಸ್ತಿ ಕಳೆದುಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಲಿತರು, ಶೋಷಿತರ ಪರವಾಗಿ ಧ್ವನಿ ಎತ್ತಿದ ಪ್ರೊ.ಬಿ.ಕೃಷ್ಣಪ್ಪ ಅವರ ಹೋರಾಟದ ಫಲವಾಗಿ ದೇವರಾಜ ಅರಸು ಸಂಪುಟದಲ್ಲಿ ಕಂದಾಯ ಸಚಿವರಾಗಿದ್ದ ಬಸವಲಿಂಗಪ್ಪ ಅವರು ಪಿಟಿಸಿಎಲ್ ಕಾಯ್ದೆ ಜಾರಿಗೆ ತಂದರು. ಈ ಕಾಯ್ದೆಯನ್ನು ಸುಪ್ರೀಂಕೋರ್ಟ್ ಸಹ ಎತ್ತಿಹಿಡಿದಿದೆ. ಆದರೂ, ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಪರಿಶಿಷ್ಟರಿಗೆ ವಿರುದ್ಧವಾದ ಆದೇಶಗಳು ಜಾರಿಯಾಗುತ್ತಿವೆ ಎಂದು ದೂರಿದರು.

ರಾಜ್ಯದ 15 ಸಾವಿರ ಪ್ರಕರಣಗಳಲ್ಲಿ ಪರಿಶಿಷ್ಟರಿಗೆ ಅನ್ಯಾಯವಾಗಿದೆ. ಕಾಯ್ದೆಯ ವಿರುದ್ಧ ತೀರ್ಪಿನಿಂದ ಸಾವಿರಾರು ಕುಟುಂಬಗಳು ಬೀದಿಪಾಲಾಗಿವೆ. ದಲಿತ ಸಂಘಟನೆಗಳ ಪ್ರತಿಭಟನೆಗಳಿಗೆ ಸರ್ಕಾರ ಸ್ಪಂದಿಸಿ, ಕಂದಾಯ ಇಲಾಖೆ ಕಾಯ್ದೆಯ ಪ್ರಕರಣಗಳಿಗೆ ಕಾಲಮಿತಿ ಅನ್ವಯವಾಗದು ಎಂದು ಸುತ್ತೋಲೆ ಹೊರಡಿಸಿದ್ದರೂ, ನ್ಯಾಯದಾನದಲ್ಲಿ ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿದರು.

ಕಾಯ್ದೆಗೆ ತಕ್ಷಣ ತಿದ್ದುಪಡಿ ತರಬೇಕು. ಪರಿಶಿಷ್ಟರು ಬೀದಿಪಾಲಾಗುವುದನ್ನು ತಪ್ಪಿಸಬೇಕು. ಕಾಲಮಿತಿ ಅನ್ವಯಿಸಬಾರದು.



ವಿಧಾನಸೌಧದ ಮುಂದೆ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ, ಜಂಬೂದ್ವೀಪ ಜನ ಸೇನೆಯ ಸದಸ್ಯರು ಪಿಟಿಸಿಎಲ್ ಕಾಯ್ದೆಯನ್ನು ತಿದ್ದುಪಡಿಗೆ ಆಗ್ರಹಿಸಿ ಮುಖ್ಯಮಂತ್ರಿ ಸಮ್ಮುಖದಲ್ಲಿ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ತಕ್ಷಣ ಸುಗ್ರೀವಾಜ್ಞೆ ಹೊರಡಿಸಬೇಕು. ಬೇಡಿಕೆ ಈಡೇರಿಸದಿದ್ದರೆ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸಂಘಟನೆಯ ಮುಖಂಡರಾದ ಹೆಣ್ಣೂರು ಶ್ರೀನಿವಾಸ್, ಜಂಬುದ್ವೀಪ ಸಿದ್ದರಾಜು, ರಮೇಶ್, ಪಿಟಿಸಿಲ್ ಮಂಜುನಾಥ್, ವೆಂಕಟೇಶ್, ರಂಗನಾಯಕ್, ಮುಂಜು ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ಫಿಫಾ ವರ್ಲ್ಡ್ ಕಪ್ 2022 ರಲ್ಲಿ ಫ್ರೆಂಚ್ ಸ್ಟ್ರೈಕರ್ ಗೋಲ್ಡನ್ ಬೂಟ್ ರೇಸ್ ಮುನ್ನಡೆಸುತ್ತಾರೆ!

ಚಿತ್ರಾವಳಿ



ಮಾರತ್ತಹಳ್ಳಿಯ ಬಿಜೆಪಿ ಕಚೇರಿಯಲ್ಲಿ ನಡೆದ ಅಂಬೇಡ್ಕರ್ ಮಹಾನಿರ್ವಾಣ ದಿನಾಚರಣೆಯಲ್ಲಿ ಶಾಸಕ ಅರವಿಂದ ಲಿಂಬಾವಳಿ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ನಗರ ಮಂಡಲ ಅಧ್ಯಕ್ಷ ಮನೋಹರ್ ರೆಡ್ಡಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಬಿ.ಎನ್‌ನಟರಾಜ್, ವರ್ತೂರು ಶ್ರೀಧರ್ ಇದ್ದರು.



ನಗರದಲ್ಲಿ ಮಂಗಳವಾರ ರಾಜ್ಯ ಸರ್ಕಾರಿ ಎಸ್ಸಿಎಸ್ಟಿ ನೌಕರರ ಸಮನ್ವಯ ಸಮಿತಿ ಆಯೋಜಿಸಿದ್ದ ಮಹಾಪರಿನಿರ್ವಾಣ ದಿನದಲ್ಲಿ ನಿವೃತ್ತ ನ್ಯಾಯಾಧೀಶ ಎಚ್.ಎನ್. ನಾಗಮೋಹನ್ ದಾಸ್, ಲೋಕಸೇವಾ ಆಯೋಗದ ಸದಸ್ಯ ಚಂದ್ರಕಾಂತ್ ಡಿ. ಶಿವಕೇರಿ, ಮಿಂಟೋ ಕಣ್ಣಿನ ಆಸ್ಪತ್ರೆಯ ನಿರ್ದೇಶಕ ಡಾ.ಬಿ.ಎಲ್. ಸುಜಾತಾ ರಾಥೋಡ್ ಮತ್ತು ನೌಕರರ ಸಮನ್ವಯ ಸಮಿತಿಯ ಅಧ್ಯಕ್ಷ ಡಿ.ಶಿವಶಂಕರ್ ಅವರು ಬುದ್ಧ ಮತ್ತು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು



ಡಾ. ಬಿ.ಆರ್‌ಅಂಬೇಡ್ಕರ್ ಅವರ 66ನೇ ವರ್ಷದ ಮಹಾನಿರ್ವಾಣ ದಿನದ ಅಂಗವಾಗಿ ಬಿಬಿಎಂಪಿ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾಲಾರ್ಪಣೆ ಮಾಡಿದರು. ವಿಶೇಷ ಆಯುಕ್ತ ಜಯರಾಮ್ ರಾಯಪುರ, ಡಾ. ಹರೀಶ್ ಕುಮಾರ್, ಪಿ.ಎನ್‌ರವೀಂದ್ರ, ರೆಡ್ಡಿ ಶಂಕರ ಬಾಬು, ಆಡಳಿತ ವಿಭಾಗದ ಉಪ ಆಯುಕ್ತ ರಾಹುಲ್ ಸಂಕನೂರ್ ಇದ್ದರು

ಗಿರಿಶ್ರೇಣಿ ಪ್ರವೇಶ ಸಂಜೆ 4ರವರೆಗೆ ಅವಕಾಶ

ಚಿಕ್ಕಮಗಳೂರು: ಇದೇ 8ರಂದು ಕೈಮರ ಚೆಕ್ ಪೋಸ್ಟ್ ಮೂಲಕ ವಾಹನಗಳು ಗಿರಿಶ್ರೇಣಿ ಪ್ರವೇಶಿಸಲು ಸಂಜೆ 4 ಗಂಟೆವರೆಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

8ರಂದು ದತ್ತ ಜಯಂತಿಗೆ ಜಿಲ್ಲೆ ಮತ್ತು ಹೊರಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ವಾಹನಗಳಲ್ಲಿ ಗಿರಿಗೆ ಬರಲಿದ್ದು ದಟ್ಟಣೆ ಉಂಟಾಗಲಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಸಂಜೆ ಗಂಟೆ 4 ನಂತರ ವಾಹನಗಳಿಗೆ ಅವಕಾಶ ಇಲ್ಲ. ಗಿರಿಗೆ ತೆರಳಿದ ವಾಹನಗಳು ವಾಪಸಾಗಲು ಮಾತ್ರ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಅಗರ ಗ್ರಾಮದಲ್ಲಿ ಚಿರತೆ ಸುಳಿದಾಟ

ಕೆಂಗೇರಿ: ತುರಹಳ್ಳಿ ಅರಣ್ಯ ಪ್ರದೇಶದಲ್ಲಿ ಆತಂಕ ಸೃಷ್ಟಿಸಿ ಮರೆಯಾಗಿದ್ದ ಚಿರತೆಯು ಬಿ.ಎಂ.ಕಾವಲ್ ಅರಣ್ಯ ವಲಯದ ಅಗರ ಗ್ರಾಮಕ್ಕೆ ಲಗ್ಗೆಯಿಟ್ಟಿದೆ.

ಚಿರತೆ ಕಂಡ ನಾಯಿಗಳು ಬೊಗಳಲು ಆರಂಭಿಸಿದ್ದವು. ನಾಯಿಗಳ ಚೀರಾಟ ಕೇಳಿ ತೋಟದ ಮನೆಯ ಆಳು ಸಿದ್ದಪ್ಪ ಮನೆ ಬಾಗಿಲು ತೆರದು ನೋಡಿದಾಗ ಚಿರತೆ ಮನೆಯ ಕಾಂಪೌಂಡ್ ಹಾರಿ ಹೋಗಿದೆ.

ಅಗರ ವ್ಯಾಪ್ತಿಯಲ್ಲಿ ನೂರಾರು ಎಕರೆ ಅರಣ್ಯ ಪ್ರದೇಶವಿದೆ. ಇಲ್ಲಿಗೆ ಬರುವ ಕುರಿಗಾಹಿಗಳಿಗೆ ಪ್ರಾಣಭಯ ಎದುರಾಗಿದೆ. ಕೈಯಲ್ಲಿ ಕುಡುಗೋಲು ಹಿಡಿದು ಕುರಿಗಳನ್ನು ಕಾಯಬೇಕಾದ ಪರಿಸ್ಥಿತಿ ಉಂಟಾಗಿದೆ ಎಂದು ಕುರಿಗಾಹಿ ರಮೇಶ್ ಆತಂಕ ವ್ಯಕ್ತಪಡಿಸಿದರು.

ಅಗರ ಕೆರೆ ಬಳಿಯೂ ಚಿರತೆ ಓಡಾಟ ನಡೆಸಿರುವ ಬಗ್ಗೆ ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ. ಸಿದ್ದಪ್ಪನಪಾಳ್ಯ, ಲಕ್ಷ್ಮೀಪುರ ಹಾಗೂ ತಾತಗುಣಿ ಅರಣ್ಯ ಪ್ರದೇಶದಲ್ಲೂ ಚಿರತೆ ಸಂಚರಿಸುತ್ತಿದೆ. ಅರಣ್ಯ ಇಲಾಖೆ ಸಿಬ್ಬಂದಿ ಕೂಡಲೇ ಎಚ್ಚೆತ್ತುಕೊಳ್ಳಬೇಕು. ಜೀವ ಹಾನಿಯಾಗುವ ಸಂಭವವಿದೆ ಎಂದು ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ರಂಗರಾಜು ಆತಂಕ ವ್ಯಕ್ತಪಡಿಸಿದರು.

ಬಿ.ಎಂ.ಕಾವಲ್ ಅರಣ್ಯ ವಲಯವು 1,380 ಎಕರೆಗೂ ಹೆಚ್ಚು ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಈ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಸವಾಲಿನ ಕೆಲಸ ಎಂದೂ ಹೇಳಿದರು.

ಆರು ದಿನಗಳಿಂದ ಹೆಮ್ಮಿಗೆಪುರ, ಗಾಣಕಲ್, ಬನಶಂಕರಿ 6ನೇ ಹಂತ, ಕರಿಯನಪಾಳ್ಯ ಸುತ್ತಮುತ್ತಲ ಪ್ರದೇಶದ ಜನರಲ್ಲಿ ತೀವ್ರ ಭಯ ಹುಟ್ಟಿಸಿದ್ದ ಚಿರತೆ ಸೋಮವಾರ ಮಧ್ಯರಾತ್ರಿ ಅಗರ ಗ್ರಾಮದ ಜಿ.ಆರ್. ಇಂಟರ್ ನ್ಯಾಷನಲ್ ಕಾಲೇಜು ಬಳಿಯ ತೋಟದ ಮನೆಯೊಂದರ ಬಳಿ ಸುಳಿದಾಡಿ ಹೋಗಿತ್ತು.

ಎರಡು ಮರಿಗಳೊಂದಿಗೆ ಚಿರತೆ ಪ್ರತ್ಯಕ್ಷ: ತೂಬಗೆರೆ (ದೊಡ್ಡಬಳ್ಳಾಪುರ): ಘಾಟಿ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಹೋಗುವ ರಸ್ತೆಯಲ್ಲಿ ಮಂಗಳವಾರ ಸಂಜೆ ಕೃಷ್ಣಮೂರ್ತಿ ಎಂಬುವರ ವಾಹನಕ್ಕೆ ಲಘುಮೇನಹಳ್ಳಿ ಕ್ರಾಸ್ ಬಳಿ ಚಿರತೆ ಎದುರಾಗಿದ್ದರಿಂದ ಆತಂಕಗೊಂಡ ಅವರು ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಡೀಸೆಲ್, ಪೆಟ್ರೋಲ್ ಎಂಜಿನ್ ನಿಷೇಧ

10 ವರ್ಷಗಳಲ್ಲಿ ಕರ್ನಾಟಕ ಸೇರಿ ಎಲ್ಲ ರಾಜ್ಯಗಳಲ್ಲೂ ನಿಷೇಧ ಜಾರಿ: ನಿರಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ 10 ವರ್ಷಗಳಲ್ಲಿ ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳಲ್ಲೂ ಪೆಟ್ರೋಲ್ ಮತ್ತು ಡೀಸೆಲ್ ಎಂಜಿನ್‌ಗಳ ಬಳಕೆ ಸಂಪೂರ್ಣ ನಿಷೇಧವಾಗಲಿದೆ ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಬೆಂಗಳೂರು ಪ್ರೆಸ್ ಕ್ಲಬ್ ಮಂಗಳವಾರ ಏರ್ಪಡಿಸಿದ್ದ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇವೆರಡಕ್ಕೆ ಪರ್ಯಾಯವಾಗಿ ಎಥೆನಾಲ್ ಬಳಸಬಹುದಾದ ಎಂಜಿನ್ ಗಳು ಬರಲಿವೆ. ಈಗ ಶೇ 20 ರಷ್ಟು ಎಥೆನಾಲ್ ಬಳಕೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಥೆನಾಲ್ ಬಳಕೆ ದ್ವಿಗುಣಗೊಳ್ಳಲಿದೆ ಎಂದರು.

ಸ್ವಂತ ಜಮೀನು ಹೊಂದಿರುವ ಕಂಪನಿಗಳು ಸ್ವಾಧೀನ ಶುಲ್ಕ ಪಾವತಿಸಬೇಕಾಗಿಲ್ಲ. ಸ್ವಂತ ಭೂಮಿ ಹೊಂದಿರುವ ಕಂಪನಿಗಳು ಕೆಐಎಡಿಬಿಗೆ ಸ್ವಾಧೀನ ಶುಲ್ಕವನ್ನು ಪಾವತಿಸುವುದು ಅನಿವಾರ್ಯವಾಗಿತ್ತು. ಈ ನಿಯಮಕ್ಕೆ ತಿದ್ದುಪಡಿ ತರಲಾಗಿದ್ದು, ಕೈಗಾರಿಕೆಗಳು ಕೆಐಎಡಿಬಿಗೆ ಶೇ 12.5 ರಷ್ಟು ಸೇವಾ ಶುಲ್ಕವನ್ನು ಪಾವತಿಸಿದರೆ ಸಾಕು ಎಂದು ಹೇಳಿದರು.

‘ಈಚೆಗೆ ನಡೆದ ಹೂಡಿಕೆದಾರರ ಸಮಾವೇಶದಲ್ಲಿ ಪ್ರಮಾಣ ಪತ್ರ ಆಧಾರಿತ ಒಪ್ಪಂದ ಮಾಡಿಕೊಂಡಿದ್ದೇವೆ. ಅಂದರೆ, ಯಾವುದು ನಮ್ಮ ರಾಜ್ಯದಲ್ಲಿ ಖಚಿತವಾಗಿ ಹೂಡಿಕೆ ಮಾಡಿ ಉದ್ಯಮಗಳನ್ನು ಆರಂಭಿಸುತ್ತಾರೋ ಅಂತಹವರಿಗೆ ಮಾತ್ರ ಆದ್ಯತೆ ಕೊಟ್ಟಿದ್ದೇವೆ. ಹಿಂದಿನ ಸರ್ಕಾರಗಳ ಕೆಲವು ತಪ್ಪುಗಳಿಂದಾಗಿ ಯೋಜನೆಗಳು ಅನುಷ್ಠಾನವಾಗಲಿಲ್ಲ’ ಎಂದರು.

ಸಂವಾದದಲ್ಲಿ ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಬಿ.ಪಿ. ಮಲ್ಲಪ್ಪ ಇದ್ದರು.

57 ಯೋಜನೆಗಳಿಗೆ ಒಪ್ಪಿಗೆ

ಡಿ.5ರಂದು ನಡೆದ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿಯ ಸಭೆಯಲ್ಲಿ ಒಟ್ಟು 59 ಯೋಜನೆಗಳಿಗೆ ಒಪ್ಪಿಗೆ ನೀಡಿದ್ದು, ಇದರಿಂದ ₹2,627.88 ಕೋಟಿ ಬಂಡವಾಳ ಹೂಡಿಕೆ ಆಗಲಿದ್ದು, 9746 ಜನರಿಗೆ ಉದ್ಯೋಗಾವಕಾಶ ದೊರಕಲಿದೆ ಎಂದು ಸಚಿವ ಮುರುಗೇಶ ನಿರಾಣಿ ತಿಳಿಸಿದರು.

₹50 ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆಯ 7 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇವುಗಳಿಂದ ₹852.06 ಕೋಟಿ ಬಂಡವಾಳ ಹೂಡಿಕೆ ಆಗಲಿದೆ. ಸುಮಾರು 3860 ಜನರಿಗೆ ಉದ್ಯೋಗಾವಕಾಶ ದೊರಕಲಿದೆ ಎಂದರು.

ಸಂಕ್ಷಿಪ್ತ ಸುದ್ದಿ

ಕಿರಾಣಿ ಅಂಗಡಿಯಲ್ಲಿ ಮದ್ಯ ಮಾರಿದರೆ ದಂಡ: ಚಿಂತನೆ

ಬೆಂಗಳೂರು: ಗ್ರಾಮೀಣ ಪ್ರದೇಶಗಳ ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ಪತ್ತೆಯಾದರೆ, ಮಾರಾಟಗಾರರ ವಿರುದ್ಧ ದೊಡ್ಡ ಮೊತ್ತದ ದಂಡ ವಿಧಿಸಲು ಚಿಂತನೆ ನಡೆಸಲಾಗಿದೆ ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ತಡೆಗೆ ಬಿಗಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ಅಕ್ರಮವಾಗಿ ಮದ್ಯ ತರುವುದು ಮತ್ತು ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ತಡೆಯಲು ಅಬಕಾರಿ ಡಿಸಿಗಳ ಸಭೆಯನ್ನು ಬುಧವಾರ ನಡೆಸಲಾಗುವುದು. ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟವನ್ನು ತಡೆಯಲು ಹೊಸ ಮದ್ಯದ ಮಳಿಗೆಗಳಿಗೆ ಲೈಸೆನ್ಸ್ ಕೊಡುವುದು ಅನಿವಾರ್ಯ. ಆದರೆ, ಸದ್ಯದ ಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ ಎಂದು ಹೇಳಿದರು.

ಜಯರಾಮ್‌ಗೆ ವರ್ಷದ ಅತ್ಯುತ್ತಮ ಸಿಇಒ ಪ್ರಶಸ್ತಿ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ಎನ್.ಜಯರಾಮ್ ಅವರು ವರ್ಷದ ಅತ್ಯುತ್ತಮ ಸಿಇಒ ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಜಯರಾಮ್

ಚೆನ್ನೈನಲ್ಲಿ ಇತ್ತೀಚೆಗೆ ನಡೆದ ನ್ಯಾಟ್‌ಕೋಮ್ ಕಾರ್ಯಕ್ರಮದಲ್ಲಿ ಅವರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

‘ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮೆಟರಿಯಲ್ ಮ್ಯಾನೇಜ್‌ಮೆಂಟ್’ ವತಿಯಿಂದ ಈ ಪ್ರಶಸ್ತಿ ನೀಡಲಾಗಿದೆ.

10 ಪಾಲಿಕೆ ನೌಕರರಿಂದ ಅಹೋರಾತ್ರಿ ಧರಣಿ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ ಇರುವ ‘ಆರೋಗ್ಯ ಸಂಜೀವಿನಿ ಯೋಜನೆ’ ಅನುಷ್ಠಾನ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ 10 ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಜ.6ರಿಂದ ಅಹೋರಾತ್ರಿ ಧರಣಿ ನಡೆಸಲು ನಿರ್ಧರಿಸಿದ್ದಾರೆ.

‘ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಕರಡು ಪ್ರಚಾರಗೊಳಿಸಬೇಕು, ಕೆಜಿಐಡಿ ಮತ್ತು ಜಿಪಿಎಫ್ ಅನುಷ್ಠಾನಗೊಳಿಸಬೇಕು, ಸರ್ಕಾರದಿಂದ ಕ್ರೀಡಾಕೂಟ ನಡೆಸಬೇಕು ಎಂಬ ಬೇಡಿಕೆಗಳನ್ನು ನಗರಾಭಿವೃದ್ಧಿ, ಪೌರಾಡಳಿತ ಇಲಾಖೆಯ ಸಚಿವರು, ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಹೀಗಾಗಿ, ಅಹೋರಾತ್ರಿ ಧರಣಿ ನಡೆಸಲು ನಿರ್ಧರಿಸಲಾಗಿದೆ’ ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಅಮೃತರಾಜ್ ತಿಳಿಸಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಯಲಿದ್ದು, 10 ಮಹಾನಗರ ಪಾಲಿಕೆ ಹಾಗೂ ಬಿಬಿಎಂಪಿ ಸಿಬ್ಬಂದಿ ಭಾಗವಹಿಸಲಿದ್ದಾರೆ ಎಂದರು.

ಆಯುಷ್ಮಾನ್ ಗುರುತಿನ ಚೀಟಿ ವಿತರಣೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯ ಫಲಾನುಭವಿಗಳಿಗೆ ಆರೋಗ್ಯ ಕಾರ್ಡ್‌ಗಳನ್ನು ವಿತರಿಸುವ ಕಾರ್ಯಕ್ರಮವನ್ನು ಆರೋಗ್ಯ ಇಲಾಖೆಯು ಗುರುವಾರ ಹಮ್ಮಿಕೊಂಡಿದೆ.

‘ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ. ಕಾರ್ಡ್‌ಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಮುದ್ರಿಸಿ, ಉಚಿತವಾಗಿ ವಿತರಿಸಲು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ಸಮ್ಮತಿಸಿದೆ. 1.20 ಕೋಟಿ ಗುರುತಿನ ಚೀಟಿಗಳ ಮುದ್ರಣ ಕಾರ್ಯ ನಡೆಯುತ್ತಿದೆ. ಮುಂದಿನ 3 ತಿಂಗಳ ಒಳಗೆ ಉಳಿದ 4 ಕೋಟಿ ಕಾರ್ಡ್ ವಿತರಿಸುವ ಗುರಿ ಹೊಂದಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.



‘ಯೋಜನೆಯ ಫಲಾನುಭವಿಗಳು ಗುರುತಿನ ಚೀಟಿ ಹೊಂದಿಲ್ಲದಿದ್ದರೂ, ಆಧಾರ್ ಮತ್ತು ಪಡಿತರ ಚೀಟಿ ಮೂಲಕ ನೋಂದಾಯಿತ ಆಸ್ಪತ್ರೆಗಳಿಂದ ಚಿಕಿತ್ಸೆ ಪಡೆಯಬಹುದು. ನಗರಗಳಲ್ಲಿ ಗುರುತಿನ ಚೀಟಿ ಮುದ್ರಿಸಲು ಕೇಂದ್ರ ಸರ್ಕಾರದಿಂದ ಅನುಮತಿ ಪಡೆದ ಸ್ಮಾರ್ಟ್ ಐಟಿ ಎಂಬ ಸಂಸ್ಥೆಗೆ ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ ಖಾಸಗಿ ಸೇರಿ 3,545 ಆಸ್ಪತ್ರೆಗಳಲ್ಲಿ 1,650 ಕಾರ್ಯವಿಧಾನಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಯೋಜನೆಯಡಿ 42 ಲಕ್ಷ ಫಲಾನುಭವಿಗಳು ₹ 5,426 ಕೋಟಿ ಮೊತ್ತದ ಚಿಕಿತ್ಸೆ ಪಡೆದಿದ್ದಾರೆ’ ಎಂದು ಹೇಳಿದ್ದಾರೆ.

2 ಸಂಸ್ಥೆಗಳಿಗೆ ಪರವಾನಗಿ ನೀಡಲು ರಾಜ್ಯ ಸಾರಿಗೆ ಪ್ರಾಧಿಕಾರ ಒಪ್ಪಿಗೆ

ಬೈಕ್ ಟ್ಯಾಕ್ಸಿ ಇನ್ನು ನಗರದಲ್ಲಿ ಅಧಿಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬೈಕ್ ಟ್ಯಾಕ್ಸಿ ಸೇವೆಗೆ ಪರವಾನಗಿ ನೀಡಲು ರಾಜ್ಯ ಸಾರಿಗೆ ಪ್ರಾಧಿಕಾರ (ಎಸ್‌ಟಿಎ) ನಿರ್ಧರಿಸಿದ್ದು, ಬೈಕ್ ಟ್ಯಾಕ್ಸಿಗಳು ಇನ್ನು ಅಧಿಕೃತವಾಗಿ ರಸ್ತೆಗೆ ಇಳಿಯಲಿವೆ.

ಈ ಸಂಬಂಧ ನಗರದಲ್ಲಿ ಮಂಗಳವಾರ ನಡೆದ ಎಸ್‌ಟಿಎ ಸಭೆಯಲ್ಲಿ ಸಾರಿಗೆ ಇಲಾಖೆ ಅಧಿಕಾರಿಗಳು ಈ ನಿರ್ಣಯ ಕೈಗೊಂಡಿದ್ದಾರೆ. ಬ್ಲೂ ಸ್ಮಾರ್ಟ್ ಮತ್ತು ಬೌನ್ಸ್ ಕಂಪನಿಗಳಿಗೆ ಪರವಾನಗಿ ನೀಡಲು ಸಭೆ ಒಪ್ಪಿದೆ.

ಬಸ್, ರೈಲು ಮತ್ತು ಮೆಟ್ರೊ ರೈಲು ನಿಲ್ದಾಣಗಳ ಸಂಪರ್ಕಕ್ಕೆ ಬೈಕ್ ಟ್ಯಾಕ್ಸಿ ಬಳಕೆಗೆ ಅವಕಾಶ ನೀಡಿದರೆ ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಬಹುದು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

‘ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಲು ನಿರ್ಧರಿಸಲಾಗಿದೆ. ಸಭೆಯ ನಿರ್ಣಯವನ್ನು ಲಿಖಿತವಾಗಿ ದಾಖಲಿಸಿ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಸಾರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ಹೇಮಂತಕುಮಾರ್ ತಿಳಿಸಿದರು.

ಬೈಕ್ ಟ್ಯಾಕ್ಸಿಗೆ ಅನುಮತಿ ನೀಡುವುದಕ್ಕೆ ಆಟೊರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು ವಿರೋಧ ವ್ಯಕ್ತವಾಗಿತ್ತು. ಆದರೆ, ಟ್ಯಾಕ್ಸಿ ಮತ್ತು ಆಟೋರಿಕ್ಷಾ ಪ್ರಯಾಣ ದರ ಹೆಚ್ಚಾಗಿರುವುದು ಮೆಟ್ರೊ ಮತ್ತು ಬಸ್ ನಿಲ್ದಾಣಗಳಿಂದ ಕೊನೆಯ ತಾಣಗಳನ್ನು ತಲುಪಲು ಜನ ತೊಂದರೆ ಅನುಭವಿಸುತ್ತಿದ್ದಾರೆ. ಬೈಕ್ ಟ್ಯಾಕ್ಸಿಗಳು ಈ ಸಮಸ್ಯೆಗಳಿಗೆ ಪರಿಹಾರವಾಗಲಿವೆ ಎಂಬುದು ಸಾರಿಗೆ ಇಲಾಖೆ ಅಧಿಕಾರಿಗಳ ಲೆಕ್ಕಾಚಾರ.

ಬೈಕ್ ಟ್ಯಾಕ್ಸಿಯಲ್ಲಿ ಮೊದಲ 5 ಕಿಲೋ ಮೀಟರ್‌ಗೆ ದರ ₹25 ನಂತರದ 10 ಕಿ.ಮೀ ಪ್ರಯಾಣಕ್ಕೆ ₹50 ದರ ನಿಗದಿಯಾಗಲಿದೆ. ಸವಾರ ಮತ್ತು ಹಿಂಬದಿ ಸವಾರ ಇಬ್ಬರೂ ಹಳದಿ ಹೆಲ್ಮೆಟ್ ಧರಿಸಿರಬೇಕು, ಇ-ಬೈಕ್ ಟ್ಯಾಕ್ಸಿ ಚಾಲನೆಗೆ 5 ವರ್ಷದ ಪರವಾನಗಿಯನ್ನು ₹5 ಸಾವಿರ ಭದ್ರತಾ ಠೇವಣಿ ಪಡೆದು ನೀಡಲಾಗುತ್ತದೆ ಎಂದು ಸಾರಿಗೆ ಇಲಾಖೆ ಮೂಲಗಳು ತಿಳಿಸಿವೆ.

ಬೈಕ್ ಟ್ಯಾಕ್ಸಿಗೆ ಅನುಮತಿ ದೊರೆತರೆ ಎಲೆಕ್ಟ್ರಿಕ್ ಬೈಕ್ ಸೇವೆ ಆರಂಭಿಸಲು 3 ಖಾಸಗಿ ಸಂಸ್ಥೆಗಳು ಆಸಕ್ತಿ ವಹಿಸಿದ್ದವು.

ಮೆಟ್ರೊ: ಕುಟುಂಬಕ್ಕೆ ಒಂದೇ ಕ್ಯೂಆರ್ ಕೋಡ್ ಟಿಕೆಟ್

ಮೆಟ್ರೊ ರೈಲು ಪ್ರಯಾಣಕ್ಕೆ ಕ್ಯೂಆರ್ ಕೋಡ್ ಟಿಕೆಟ್ ವ್ಯವಸ್ಥೆ ಜಾರಿಗೆ ತಂದಿರುವ ಬಿಎಂಆರ್‌ಸಿಎಲ್, ಒಂದೇ ಕ್ಯೂಆರ್ ಕೋಡ್ ಪಡೆದು ಇಡೀ ಕುಟುಂಬ ಅಥವಾ 5–6 ಜನ ಪ್ರಯಾಣಿಸುವ ವ್ಯವಸ್ಥೆ ಜಾರಿಗೆ ತರಲು ಮುಂದಾಗಿದೆ.

ಇಡೀ ಕುಟುಂಬ ಒಟ್ಟಿಗೆ ತೆರಳುವ ಸಂದರ್ಭದಲ್ಲಿ ಕೌಂಟರ್‌ಗಳಲ್ಲಿ ಅಥವಾ ಕ್ಯೂಆರ್ ಕೋಡ್ ಟಿಕೆಟ್‌ಗಳನ್ನೂ ಪ್ರತ್ಯೇಕವಾಗಿ ಪಡೆಯಬೇಕಿದೆ. ಈ ವ್ಯವಸ್ಥೆಯನ್ನು ಮತ್ತಷ್ಟು ಸರಳ ಮಾಡುವ ನಿಟ್ಟಿನಲ್ಲಿ ಐದಾರು ಜನ ಒಂದೇ ಕ್ಯೂಆರ್ ಕೋಡ್ ಬಳಸಿ ಪ್ರಯಾಣಿಸಲು ಅನುಕೂಲ ಕಲ್ಪಿಸಲು ಸಿದ್ಧತೆ ನಡೆಸಿದೆ.

ಈ ಸಂಬಂಧ ಪ್ರಯೋಗ ನಡೆಸಲಾಗುತ್ತಿದ್ದು, ಜನವರಿಯಲ್ಲಿ ಈ ವ್ಯವಸ್ಥೆ ಜಾರಿಗೆ ತರವು ಸಾಧ್ಯತೆ ಇದೆ. ವಾಟ್ಸ್‌ಆ್ಯಪ್ ಸಂಖ್ಯೆಗೆ(8105556677) ‘ಹಾಯ್’ ಎಂಬ ಸಂದೇಶ ಕಳುಹಿಸುವ ಮೂಲಕವೂ ಕ್ಯೂಆರ್ ಕೋಡ್ ಟಿಕೆಟ್ ಪಡೆಯಲು ಅವಕಾಶ ಇದೆ.

‘ಪ್ರತಿನಿತ್ಯ 10 ಸಾವಿರಕ್ಕೂ ಹೆಚ್ಚು ಪ್ರಯಾಣಿಕರು ಕ್ಯೂಆರ್ ಕೋಡ್ ಟಿಕೆಟ್ ಬಳಕೆ ಮಾಡುತ್ತಿದ್ದಾರೆ. ನವೆಂಬರ್‌ನಲ್ಲಿ 2.11 ಲಕ್ಷ ಜನ ಕ್ಯೂಆರ್ ಕೋಡ್ ಟಿಕೆಟ್ ಖರೀದಿಸಿದ್ದಾರೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.



ಒಕ್ಕೂಟದ ಸಭೆಯಲ್ಲಿ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ, ಜಿಲ್ಲಾ ಸಮಿತಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು

ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ ರಚನೆ

ಬೆಂಗಳೂರು: ತೃತೀಯ ಲಿಂಗಿಗಳನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಮುಖ್ಯ ವಾಹಿನಿಗೆ ತರುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ ರಚನೆಯಾಗಿದೆ.

ನಗರದಲ್ಲಿ ಮಂಗಳವಾರ ಸಭೆ ನಡೆಸಿದ ಸಮುದಾಯದ ಜಿಲ್ಲಾ ಸಂಸ್ಥೆಗಳ ಪ್ರತಿನಿಧಿಗಳು, ಒಕ್ಕೂಟ ರಚಿಸಲು ನಿರ್ಧರಿಸಿದರು. ಪ್ರಗತಿಪರ, ಜನಪರ, ಮಹಿಳಾ ಮತ್ತು ಮಕ್ಕಳ ಹಕ್ಕುಗಳ ಚಳವಳಿ, ಜಾತಿ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಚಳವಳಿಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಜತೆಗೂಡಿ ಕಾರ್ಯ ನಿರ್ವಹಿಸಲು ತೀರ್ಮಾನಿಸಲಾಯಿತು ಎಂದು ಒಕ್ಕೂಟ ತಿಳಿಸಿದೆ.

ಯುನಿವರ್ಸಿಟಿ ಆಫ್ ಲಂಡನ್‌ನ ಪ್ರೊಫೆಸರ್ ಜೇಮ್ಸ್ ಮೇನರ್ ಅಭಿಪ್ರಾಯ

'ಒಳ ಜಗಳ ಬಿಜೆಪಿಗೆ ಮಾರಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿರುವ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಆಂತರಿಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಬಿಜೆಪಿಗೆ ಒಳಜಗಳ ಮತ್ತು ಜನ ವಿರೋಧಿ ಅಲೆಯ ಬಿಸಿ ತಟ್ಟಲಿದೆ ಎಂದು ಕರ್ನಾಟಕದ ರಾಜಕೀಯವನ್ನು ಸುದೀರ್ಘ ಕಾಲದಿಂದ ಅಧ್ಯಯನ ನಡೆಸುತ್ತಿರುವ ಯುನಿವರ್ಸಿಟಿ ಆಫ್ ಲಂಡನ್‌ನ ಪ್ರೊಫೆಸರ್ ಜೇಮ್ಸ್ ಮೇನರ್ ಹೇಳಿದ್ದಾರೆ.

ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ ಮಂಗಳವಾರ ಏರ್ಪಡಿಸಿದ್ದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ಒಳಜಗಳ ಬಿಜೆಪಿಯನ್ನು ಗಂಭೀರವಾಗಿ ಕಾಡುತ್ತಿದೆ. ಈ ಕಾರಣಕ್ಕಾಗಿ ಬಿಜೆಪಿ ಚುನಾವಣೆಯಲ್ಲಿ ಗೆಲ್ಲುವ ಸಾಧ್ಯತೆ ತೀರಾ ಕಡಿಮೆ ಎಂದು ಅವರು ಅಭಿಪ್ರಾಯಪಟ್ಟರು. ಮೇನರ್ ಕಳೆದ 50 ವರ್ಷಗಳಿಂದ ಕರ್ನಾಟಕ ರಾಜಕೀಯ ಮತ್ತು ಇತಿಹಾಸದ ಅಧ್ಯಯನ ನಡೆಸುತ್ತಾ ಬಂದಿದ್ದಾರೆ.

ಬಿಜೆಪಿ 'ಆಪರೇಷನ್ ಕಮಲ' ಮಾಡಿದ ಸಂದರ್ಭದಲ್ಲಿ ಪಕ್ಷದಲ್ಲಿ ಮೂಲ ಬಿಜೆಪಿಯವರು ಮತ್ತು ವಲಸಿಗರ ಕಾರಣಕ್ಕೆ ಆಂತರಿಕ ಕಚ್ಚಾಟ ಹೆಚ್ಚಾಗುತ್ತದೆ. ಇದು ಆ ಪಕ್ಷದ ಚುನಾವಣಾ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಈ ಬಾರಿಯೂ ಆ ಸಾಧ್ಯತೆ ಹೆಚ್ಚಾಗಿದೆ. ಶೇ 40 ಕಮಿಷನ್ ಆರೋಪವೂ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಧ್ಯತೆ ಇದೆ. ಲಂಚ ಕೊಡದೇ ಕಡತಗಳು ಮುಂದಕ್ಕೆ ಹೋಗುವುದಿಲ್ಲ ಎಂದು ಹೈಕೋರ್ಟ್ ನ್ಯಾಯಮೂರ್ತಿ ಹೇಳಿಕೆ ನೀಡಿದ್ದು ಮತ್ತು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಸರ್ಕಾರವೇ ಕೆಲಸ ಮಾಡುತ್ತಿಲ್ಲ ಎಂಬ ಅರ್ಥದಲ್ಲಿ ಮಾತನಾಡಿದ್ದು ಬಿಜೆಪಿಗೆ ಸಂಕಷ್ಟ ತರಲಿದೆ ಎಂದರು.

ಕರ್ನಾಟಕದಲ್ಲಿ ಉತ್ತಮ ಆಡಳಿತ ನೀಡಿಯೂ ಮರು ಆಯ್ಕೆ ಆದ ಉದಾಹರಣೆಗಳು ತೀರಾ ವಿರಳ. 37 ವರ್ಷಗಳ ಹಿಂದೆ ಒಂದು ಬಾರಿ ಮಾತ್ರ ಆಡಳಿತ ನಡೆಸಿದ ಪಕ್ಷ ಚುನಾವಣೆಯಲ್ಲಿ ಮರು ಆಯ್ಕೆ ಆಗಿತ್ತು ಎಂದರು.

ಕಾಂಗ್ರೆಸ್ ಕೂಡ ಮೂರು ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿದೆ. ಅದರಲ್ಲಿ ಮುಖ್ಯವಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಬಣಗಳ ತಿಕ್ಕಾಟ. ಅಹಿಂದಕ್ಕೆ ಹೆಚ್ಚಿನ ಒತ್ತು ಕೊಟ್ಟರೆ ಒಕ್ಕಲಿಗರ ಮತಗಳನ್ನು ಸೆಳೆಯುವುದು ಕಷ್ಟವಾಗಬಹುದು. ಕಾಂಗ್ರೆಸ್‌ನಲ್ಲಿರುವ ಒಡಕು ಪಕ್ಷದ ಚುನಾವಣಾ ಭವಿಷ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಅಲ್ಲಗಳೆಯಲು ಸಾಧ್ಯವಿಲ್ಲ. ಹಂಚಿ ಹೋಗಿರುವ ಒಬಿಸಿ ವರ್ಗವನ್ನು ಮತ್ತೆ ಸೆಳೆಯುವುದು ಕಾಂಗ್ರೆಸ್‌ಗಿರುವ ಸವಾಲು ಎಂದರು.

ಜೆಡಿಎಸ್ ಶಕ್ತಿಯನ್ನು ಕಡೆಗಣಿಸಲು ಸಾಧ್ಯವಿಲ್ಲ. ಕಳೆದ ಚುನಾವಣೆಯಲ್ಲಿ ಇದನ್ನು ನೋಡಿದ್ದೇವೆ. ಎಚ್.ಡಿ.ದೇವೇಗೌಡರ ಭಾವನಾತ್ಮಕ ಮನವಿ ಒಕ್ಕಲಿಗ ಸಮುದಾಯದ ಹೆಚ್ಚು ಮತಗಳನ್ನು ಸೆಳೆಯುವ ಶಕ್ತಿಯನ್ನು ಹೊಂದಿದೆ. ಸಿದ್ದರಾಮಯ್ಯ ಅವರು ಅಹಿಂದಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವುದರಿಂದ ಒಕ್ಕಲಿಗ ಸಮುದಾಯಕ್ಕೆ ಸಮಾಧಾನವಿಲ್ಲ. 2023 ರ ಚುನಾವಣೆಯಲ್ಲಿ ಜೆಡಿಎಸ್ ಕೆಟ್ಟ ಪ್ರದರ್ಶನ ನೀಡುವುದಿಲ್ಲ. ಜೆಡಿಎಸ್ ಉತ್ತಮ ನಿರ್ವಹಣೆ ಮಾಡಿದರೆ, ಕಾಂಗ್ರೆಸ್‌ಗೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಅಭಿಪ್ರಾಯಪಟ್ಟರು.

ಬಿಜೆಪಿಗೆ ಹಣದ ಕೊರತೆ ಆಗುವುದಿಲ್ಲ ಮತ್ತು ಪ್ರಧಾನಿ ಮೋದಿ ಬಿರುಸಿನ ಪ್ರಚಾರ ನಡೆಸಿದಷ್ಟು ಆ ಪಕ್ಷಕ್ಕೆ ಹೆಚ್ಚಿನ ಅನುಕೂಲ ಆಗುತ್ತದೆ ಎಂದು ಮೇನರ್ ಹೇಳಿದರು.

ಮುಖ್ಯಾಂಶಗಳು
- ಮೂಲ ಬಿಜೆಪಿಯವರು ಮತ್ತು ವಲಸಿಗರ ಮಧ್ಯೆ ಕಚ್ಚಾಟದಿಂದ ಕಷ್ಟ
- ಶೇ 40 ಕಮಿಷನ್ ಆರೋಪ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಧ್ಯತೆ
- ಕಾಂಗ್ರೆಸ್‌ನಲ್ಲಿರುವ ಒಡಕಿನಿಂದ ಚುನಾವಣಾ ಭವಿಷ್ಯದ ಮೇಲೆ ಪರಿಣಾಮ

'ಮೋದಿಗೆ ಪರ್ಯಾಯ ನಿತೀಶ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ಮೋದಿ ನಾಯಕತ್ವಕ್ಕೆ ಸ್ಪರ್ಧೆ ಒಡ್ಡುವ ಸಾಮರ್ಥ್ಯವಿರುವ ಪರ್ಯಾಯ ರಾಜಕೀಯ ಶಕ್ತಿ ನಿತೀಶ್‌ಕುಮಾರ್. ಅದಕ್ಕಾಗಿ ದೇಶದಲ್ಲಿ ಜೆಡಿಯು ಬಲಗೊಳ್ಳಬೇಕಿದೆ ಎಂದು ಜನತಾ ದಳ (ಸಂಯುಕ್ತ) ರಾಜ್ಯ ಘಟಕದ ಅಧ್ಯಕ್ಷ ಮಹಿಮ ಜೆ. ಪಟೇಲ್ ಹೇಳಿದರು.

ನಗರದಲ್ಲಿ ಜೆಡಿಯು ಮಂಗಳವಾರ ಹಮ್ಮಿಕೊಂಡಿದ್ದ ಪಕ್ಷದ ಬಲವರ್ಧನಾ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಇತರೆ ರಾಜಕೀಯ ಪಕ್ಷಗಳನ್ನು, ನಾಯಕರನ್ನು ಟೀಕಿಸುವುದೇ ವಿರೋಧಪಕ್ಷಗಳ ಕೆಲಸವಾಗಬಾರದು. ನರೇಂದ್ರ ಮೋದಿ, ಸಿದ್ದರಾಮಯ್ಯ, ಕುಮಾರಸ್ವಾಮಿ ಅವರು ಮಾಡಿದ ಒಳ್ಳೆಯ ಕೆಲಸಗಳನ್ನು ಸ್ಮರಿಸಬೇಕು. ಜನವಿರೋಧಿ ನೀತಿಗಳನ್ನು ಖಂಡಿಸಬೇಕು. ಆಡಳಿತ ಪಕ್ಷಗಳು ತಿದ್ದಿಕೊಂಡು ನಡೆಯದೇ ಇದ್ದಾಗ ಜನಪರವಾದ ಪರ್ಯಾಯ ಶಕ್ತಿಯಾಗಿ ವಿರೋಧ ಪಕ್ಷಗಳು ರೂಪುಗೊಳ್ಳಬೇಕು. ಸುಸ್ಥಿರ, ಸಮನ್ವಯ, ಸ್ವಾಭಿಮಾನದ ರಾಜಕೀಯ ನಡೆ ನಮ್ಮದಾಗಬೇಕು ಎಂದು ಅಭಿಪ್ರಾಯಪಟ್ಟರು.

ಜೆಡಿಯು ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಮಹಿಳೆಯರಿಗೇ ಮುಖ್ಯಮಂತ್ರಿ ಸ್ಥಾನ ನೀಡಲಾಗುವುದು. ನಿತೀಶ್ ಕುಮಾರ್ ಅವರು ಬಿಹಾರದಲ್ಲಿ ಅನುಸರಿಸಿದ ರೈತಪರ ನಿಲುವುಗಳನ್ನು ರಾಜ್ಯದಲ್ಲೂ ಅಳವಡಿಸಲಾಗುವುದು ಎಂದರು.

ಪಕ್ಷದ ಮುಖಂಡರಾದ ರಾಮಚಂದ್ರಯ್ಯ, ಬೇಹಳ್ಳಿ ನಾಗರಾಜ್, ಬಿ.ಎಸ್. ರಾಜಪೂತ್, ಎಸ್.ಎಸ್. ರೆಡ್ಡಿ, ರಮೇಶ್ ಗೌಡ, ದೇವರಾಜ್ ಸಿಂಧೆ, ನಾಗರಾಜ್, ಶಾಂತಕುಮಾರಿ ಬೆಳವನೂರು, ಶಕುಂತಲಾ ಶೆಟ್ಟಿ ಬಾಯಿ, ಶಿವರಾಮ್, ಉದಯಶಂಕರ್, ಶಿವಕುಮಾರ್, ಸುಜಾತಾ, ಅಹಮದ್ ಶಾಲಿ, ಶಿವಕುಮಾರ್ ಭದ್ರಯ್ಯ ಉಪಸ್ಥಿತರಿದ್ದರು.



ನಗರದಲ್ಲಿ ಮಂಗಳವಾರ ಜೆಡಿಯು ಆಯೋಜಿಸಿದ್ದ ಪಕ್ಷದ ಸಂವರ್ಧನಾ ಸಭೆಯಲ್ಲಿ ಮಹಿಮ ಪಟೇಲ್, ಬೇಹಳ್ಳಿ ನಾಗರಾಜ್, ಜಿ.ವಿ. ರಾಮಚಂದ್ರಯ್ಯ, ಬಿ.ಎಸ್. ರಾಜಪುತ್, ನಾಗರಾಜ್ ಇದ್ದರು —ಪ್ರಜಾವಾಣಿ ಚಿತ್ರ

ಸಿದ್ದರಾಮಯ್ಯ ಭೇಟಿ • ಮರಳಿ ಕಾಂಗ್ರೆಸ್‌ನತ್ತ ಮುಖ?

ಸೂಕ್ತ ಸಂದರ್ಭದಲ್ಲಿ ನಿರ್ಧಾರ: ಎಚ್. ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯಲ್ಲಿ ಸೋಮವಾರ ಭೇಟಿಯಾಗಿದ್ದ ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್, ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.

ಬಿಜೆಪಿ ನಾಯಕರ ನಡೆಯಿಂದ ಬೇಸತ್ತಿರುವ ವಿಶ್ವನಾಥ್ ಅವರು ಕಾಂಗ್ರೆಸ್‌ಗೆ ಮರಳಲು ನಿರ್ಧರಿಸಿದ್ದು, ಮೈಸೂರಿನಿಂದಲೇ ತಮ್ಮ ರಾಜಕೀಯ ಚಟುವಟಿಕೆ ಮುಂದುವರಿಸಲು ಯೋಚಿಸಿದ್ದಾರೆ ಎಂದು ಹೇಳಲಾಗಿದೆ.

ಸಿದ್ದರಾಮಯ್ಯ ಅವರನ್ನು ಶಿವಾನಂದ ವೃತ್ತದ ಬಳಿ ಇರುವ ಅವರ ಸರ್ಕಾರಿ ನಿವಾಸದಲ್ಲಿ ಭೇಟಿ ಮಾಡಿದ ಬಳಿಕ ಮಾತನಾಡಿದ ವಿಶ್ವನಾಥ್, 'ಅವರ ಜೊತೆ ನಾನು ಯಾವುದೇ ರಾಜಕೀಯ ವಿಷಯಗಳ ಬಗ್ಗೆ ಚರ್ಚೆ ಮಾಡಿಲ್ಲ. ಆದರೆ, ರಾಜಕಾರಣ ನಿಂತ ನೀರಲ್ಲ, ಹರಿಯುವ ನೀರು ಇದ್ದಂತೆ. ಮುಂದೆ ಸೂಕ್ತ ಸಂದರ್ಭದಲ್ಲಿ ನಿರ್ಧಾರ ಕೈಗೊಳ್ಳುತ್ತೇನೆ' ಎಂದರು.

'ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದ್ದೇನೆ ಅಷ್ಟೇ. ನಾವು ಕಾಂಗ್ರೆಸ್‌ನಲ್ಲಿ ಒಟ್ಟಿಗೆ ಕೆಲಸ ಮಾಡಿದವರು. ಆರೋಗ್ಯ ಸರಿ ಇಲ್ಲದಿದ್ದಾಗ ಯಾರೇ ಆಗಲಿ ಭೇಟಿ ಮಾಡಿ ವಿಚಾರಿಸುವುದು ರಾಜಕೀಯ ಸಹಿಷ್ಣುತೆ' ಎಂದರು.

'ದೆಹಲಿಗೆ ಹೋಗಿದ್ದಾಗ ಮಲ್ಲಿಕಾರ್ಜುನ ಖರ್ಗೆಯವರು ಕೇಂದ್ರ ಸ್ಥಾನದಲ್ಲಿದ್ದಾರೆಂದು ಗೊತ್ತಾಯಿತು. ಹೀಗಾಗಿ, ಅವರನ್ನು ಅಭಿನಂದಿಸಲು ಭೇಟಿಯಾಗಿದ್ದೆ' ಎಂದರು.

ಬಿಜೆಪಿಯಲ್ಲಿ ಅಸಮಾಧಾನ ಇದೆಯೇ ಎಂಬ ಪ್ರಶ್ನೆಗೆ, 'ಯಾವ ಪಕ್ಷದ ಬಗ್ಗೆಯೂ ಅಸಮಾಧಾನ ಇಲ್ಲ. ಎಲ್ಲ ಪಕ್ಷಗಳ ರಾಜಕೀಯ ತತ್ವ, ಸಿದ್ಧಾಂತ, ಕಾರ್ಯಕ್ರಮಗಳು ಚೆನ್ನಾಗಿಯೇ ಇವೆ. ಆದರೆ, ಅವುಗಳನ್ನು ನಡೆಸುವ ನಾವಿಕನ ನಡವಳಿಕೆ ಸರಿ ಇಲ್ಲದಿದ್ದಾಗ ಬೇರೆ ಥರ' ಎಂದರು.

ವಿಶ್ವನಾಥ್ ಮಗ ಪೂರ್ವಜ್ ವಿಶ್ವನಾಥ್ ಈಗಾಗಲೇ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ.



ಸಿದ್ದರಾಮಯ್ಯ ಅವರನ್ನು ಎಚ್. ವಿಶ್ವನಾಥ ಮಂಗಳವಾರ ಭೇಟಿ ಮಾಡಿದರು

'ಗುಜರಾತ್ ಚುನಾವಣೆ ರಾಜ್ಯಕ್ಕೆ ದಿಕ್ಸೂಚಿ ಅಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್ ಚುನಾವಣೆ ಕರ್ನಾಟಕಕ್ಕೆ ದಿಕ್ಸೂಚಿಯಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಗುಜರಾತ್ ಫಲಿತಾಂಶಗಳು ಸೂಚಕವಾಗಿದ್ದರೆ, ಹಿಮಾಚಲ ಪ್ರದೇಶ ಏನು? ಪಂಜಾಬ್ ಬಗ್ಗೆ ಏನು ಎಂದು ಪ್ರಶ್ನಿಸಿದ ಅವರು, ಒಂದು ರಾಜ್ಯದ ಚುನಾವಣೆಗೂ ಇನ್ನೊಂದು ರಾಜ್ಯಕ್ಕೂ ಸಂಬಂಧವಿಲ್ಲ. ಸಮಸ್ಯೆಗಳು, ಆಡಳಿತ ಮತ್ತು ಜನರ ಭಾವನೆಗಳು ವಿಭಿನ್ನವಾಗಿರುತ್ತವೆ ಎಂದು ಪ್ರತಿಪಾದಿಸಿದರು.

ಅಂತೆಯೇ, ರಾಷ್ಟ್ರೀಯ ಚುನಾವಣೆ ರಾಜ್ಯ ಚುನಾವಣೆಗಿಂತ ಭಿನ್ನವಾಗಿರುತ್ತದೆ. ಯಾವುದೇ ಚುನಾವಣೆಯಲ್ಲಿ ಜನರ ಆದೇಶವನ್ನು ಒಪ್ಪಿಕೊಳ್ಳಬೇಕು ಎಂದು ಅವರು ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷ (ಎಎಪಿ) ಕಾಂಗ್ರೆಸ್ಸಿನ ಮತಗಳನ್ನು ಸ್ವಲ್ಪ ಮಟ್ಟಿಗೆ ಕಬಳಿಸುತ್ತಿದೆ ಎಂದು ಒಪ್ಪಿಕೊಂಡರು.

ನಿಮ್ಮ ಪಕ್ಷದ ರೌಡಿ ಹಿನ್ನೆಲೆ ಬಗ್ಗೆ ಉತ್ತರಿಸಿ: ಬಿಜೆಪಿ

ಬೆಂಗಳೂರು: ರೌಡಿ ವಿಷಯವಾಗಿ ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಚರ್ಚೆಯನ್ನು ಮುಂದುವರೆಸುವ ಮುನ್ನ ಇಬ್ಬರೂ ಮುಖಂಡರು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವಂತೆ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಸವಾಲು ಹಾಕಿದ್ದಾರೆ.

- ದೇವರಾಜ ಅರಸು ಕಾಲದಲ್ಲಿ ಅಂದಿನ ಭೂಗತ ರೌಡಿಗಳ ಜತೆ ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತು ಪೊಲೀಸರಿಂದ ಎಳನೀರು ತರಿಸಿಕೊಳ್ಳುತ್ತಿದ್ದವರು ಯಾವ ಪಕ್ಷದಲ್ಲಿದ್ದರು?
- ಯಾರೋ ಕೆಲವರು ಕಾಂಗ್ರೆಸ್ ಪಕ್ಷದ ಬ್ಯಾನರ್ ಹರಿದು ಹಾಕಿದಾಗ, ರಾಜ್ಯದಲ್ಲಿ ಬಿಜೆಪಿಯವರಿಗೆ ಒಂದೂ ಕಾರ್ಯಕ್ರಮ ಮಾಡಲು ಬಿಡುವುದಿಲ್ಲ ಎಂದು ಬೀದಿ ರೌಡಿಯ ರೀತಿ ಬೆದರಿಕೆ ಹಾಕಿದ್ದು ಯಾವ ಸಂಸ್ಕೃತಿ ?
- ಟಿಪ್ಪು ಕುರಿತು ನಿಮ್ಮ (ಸಿದ್ದರಾಮಯ್ಯ) ಕುರುಡು ಪ್ರೇಮವನ್ನು ಖಂಡಿಸಿ, ಕೊಡಗಿನ ಜನ ನಿಮ್ಮ ಕಾರಿಗೆ ಕಲ್ಲು ಹೊಡೆದಾಗ ಅದಕ್ಕೆ ಪ್ರತೀಕಾರವಾಗಿ ಇಡೀ ರಾಜ್ಯಕ್ಕೆ ಬೆಂಕಿ ಹಚ್ಚುತ್ತೇವೆ ಎಂದು ಹೇಳಿದ್ದು ರೌಡಿ ಸಂಸ್ಕೃತಿಯ ಲಕ್ಷಣವಲ್ಲವೇ?
- ಪ್ರತಿಭಟನೆ ಮಾಡಲು ಬಂದರೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚುತ್ತೇನೆ ಎಂದು ಶಾಸಕ ಕೆ.ಆರ್.ರಮೇಶ್ ಕುಮಾರ್ ಹೇಳಿದ್ದು, ತಾವು ಓದಿರುವ ಪ್ರಜಾಪ್ರಭುತ್ವದ ಯಾವ ಹಾಳೆಯಲ್ಲಿದೆ?
- ಮಂಗಳೂರಿನ ಟಾರ್ಗೆಟ್ ಗ್ರೂಪ್‌ನ ರೌಡಿ ಇಲ್ಯಾಸ್, ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯ ಅಲ್ಲವೇ? ಮೂಡುಬಿದರೆ ಟಿಕೆಟ್ ಆಕಾಂಕ್ಷಿ ಮಿಥುನ್ ರೈ ಹಿನ್ನೆಲೆ ಏನು?
- ಕಾಂಗ್ರೆಸ್‌ನ ಮಾಜಿ ಕಾರ್ಪೊರೇಟರ್ ಕೆ.ಎಸ್.ಸಮೀವುಲ್ಲಾ ಅವರ ಹಿನ್ನೆಲೆ ಏನು? ಕೆಪಿಸಿಸಿ ಕಾರ್ಮಿಕ ವಿಭಾಗದ ಸದಸ್ಯ ಅಲ್ತಾಫ್ ಖಾನ್ ರೌಡಿಶೀಟರ್ ಎನ್ನುವುದು ಗೊತ್ತಿಲ್ಲವೇ? ಮಾಜಿ ಶಾಸಕ ಆರ್.ವಿ.ದೇವರಾಜ್ ಜತೆ ರೌಡಿ ಶೀಟರ್‌ಗಳು ಪೋಸ್ ಕೊಟ್ಟು ಅವರ ಕ್ಷೇತ್ರದಲ್ಲಿ ಪೋಸ್ಟರ್ ಅಂಟಿಸಿಕೊಂಡಿದ್ದು ಯಾವ ಕಾರಣಕ್ಕೆ?

'ಗುಂಪುಗಾರಿಕೆಗೆ ಆಸ್ಪದ ಇಲ್ಲ'

ಬೆಂಗಳೂರು: 'ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದಿಂದ ಟಿಕೆಟ್ ಬಯಸಿ ಅರ್ಜಿ ಸಲ್ಲಿಸಿರುವ ಆಕಾಂಕ್ಷಿಗಳು, ತಾವೇ ಮುಂದಿನ ಅಭ್ಯರ್ಥಿ ಎಂದು ಬಿಂಬಿಸಿಕೊಂಡು, ಗುಂಪು ಕಟ್ಟಿಕೊಂಡು ಕ್ಷೇತ್ರದಲ್ಲಿ ಸುತ್ತಾಡಬಾರದು. ಪಕ್ಷದ ಅನುಮತಿ ಇಲ್ಲದೆ ಹೇಳಿಕೆಗಳನ್ನು ನೀಡಬಾರದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ.

'ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕೋರಿರುವ ಆಕಾಂಕ್ಷಿಗಳ ಅರ್ಜಿಗಳನ್ನು ಪರಿಶೀಲನೆ ನಡೆಸಿ, ಕೆಲವು ಮಾನದಂಡಗಳ ಅನುಸಾರ ಪಕ್ಷದ ಹೈಕಮಾಂಡ್ ಅಭ್ಯರ್ಥಿಯನ್ನು ಆಯ್ಕೆ ಮಾಡಲಿದೆ' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಮಹಿಳೆ ಜೊತೆ ಸಲುಗೆ: ಸಂಬಂಧಿಕರಿಂದ ಕೃತ್ಯ: ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಯಿಂದ ಸುಳಿವು

20 ಬಾರಿ ಕಲ್ಲಿನಿಂದ ಹೊಡೆದು ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಮಂಜುನಾಥ್ ಬಾಳಪ್ಪ ಜಮಖಂಡಿ (21) ಎಂಬುವವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಕೃತ್ಯ ಎಸಗಿದ್ದ ಆರೋಪದಡಿ ಮಹಿಳೆಯರು ಸೇರಿದಂತೆ ಆರು ಮಂದಿಯನ್ನು ಬಂಧಿಸಿದ್ದಾರೆ.

'ಪ್ರೇಮವ್ವ, ಇವರ ಅಕ್ಕ ಮಹಾದೇವಿ, ಮಂಜು, ಕಿರಣ್, ಚನ್ನಪ್ಪ ಹಾಗೂ ಕಾಶಿನಾಥ್ ಬಂಧಿತರು. ಮಂಜುನಾಥ್ ಜೊತೆ ಸಲುಗೆ ಇಟ್ಟುಕೊಂಡಿದ್ದರು ಎನ್ನಲಾದ ಪ್ರಮುಖ ಆರೋಪಿ ಸರೋಜಾ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ವಾರದ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದ ಮಂಜುನಾಥ್
- ಕೃತ್ಯದ ನಂತರ ಪರಾರಿ ಆಗಿದ್ದ ಆರೋಪಿಗಳು

'ಕೆ.ಪಿ. ಅಗ್ರಹಾರ 5ನೇ ಅಡ್ಡರಸ್ತೆಯ ಮನೆಯೊಂದರ ಮುಂದೆ ಡಿ. 4ರಂದು ತಡರಾತ್ರಿ ಮಂಜುನಾಥ್ ಮೃತದೇಹ ಪತ್ತೆಯಾಗಿತ್ತು. ಆರಂಭದಲ್ಲಿ ಇವರ ಗುರುತು ಪತ್ತೆಯಾಗಿರಲಿಲ್ಲ. ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿ, ತನಿಖೆ ಮುಂದುವರಿಸಲಾಗಿತ್ತು. ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯ ನೀಡಿದ್ದ ಸುಳಿವಿನಿಂದಾಗಿ ಮಂಜುನಾಥ್ ಗುರುತು ಪತ್ತೆಯಾಗಿತ್ತು' ಎಂದು ತಿಳಿಸಿದರು.

ಮಾತುಕತೆಗೆ ಕರೆದು ಕೊಲೆ: 'ಬಾಗಲಕೋಟೆ ಜಿಲ್ಲೆಯ ಮಂಜುನಾಥ್ ಹಾಗೂ ಸರೋಜಾ ನಡುವೆ ಹಲವು ವರ್ಷಗಳಿಂದ ಸಲುಗೆ ಇತ್ತು. ಸರೋಜಾ ಪತಿ ದುಬೈನಲ್ಲಿ ನೆಲೆಸಿದ್ದು, ಮಂಜುನಾಥ್ ಆಗಾಗ ಭೇಟಿಯಾಗುತ್ತಿದ್ದರು. ಆದರೆ, ಇತ್ತೀಚೆಗೆ ಅವರಿಬ್ಬರ ನಡುವೆ ಜಗಳವಾಗಿತ್ತು' ಎಂದು ಪೊಲೀಸರು ಹೇಳಿದರು.

'ವಾರದ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದ ಮಂಜುನಾಥ್, ವಸತಿಗೃಹವೊಂದರಲ್ಲಿ ಉಳಿದುಕೊಂಡಿದ್ದರು. ಸರೋಜಾ ಭೇಟಿಯಾಗಲು ಯತ್ನಿಸಿದ್ದರು. ಆದರೆ, ಸರೋಜಾ ಭೇಟಿಗೆ ಒಪ್ಪಿರಲಿಲ್ಲ. ಈ ಸಂಗತಿ ಗೊತ್ತಾಗುತ್ತಿದ್ದಂತೆ ಸರೋಜಾ ಸಂಬಂಧಿಕರು, ಮಂಜುನಾಥ್ ಬಗ್ಗೆ ವಿಚಾರಿಸಿದ್ದರು. ಕೊಲೆಗೆ ಸಂಚು ಸಹ ರೂಪಿಸಿದ್ದರು' ಎಂದು ತಿಳಿಸಿದರು.

'ಕೆ.ಪಿ.ಅಗ್ರಹಾರದ ಮೊಬೈಲ್ ದುರಸ್ತಿ ಅಂಗಡಿಯೊಂದಕ್ಕೆ ರಾತ್ರಿ ಹೋಗಿದ್ದ ಮಂಜುನಾಥ್, ಅಲ್ಲಿಯೇ ಮೊಬೈಲ್ ಚಾರ್ಜ್ ಹಾಕಿದ್ದರು. ಅವರಿದ್ದ ವಿಳಾಸ ತಿಳಿದಿದ್ದ ಸರೋಜಾ, ಸಂಬಂಧಿಕರಾದ ಆರೋಪಿಗಳನ್ನು ಕರೆದುಕೊಂಡು ಸ್ಥಳಕ್ಕೆ ಬಂದಿದ್ದರು. ಮಾತನಾಡಬೇಕೆಂದು ಹೇಳಿ ಮಂಜುನಾಥ್ ಅವರನ್ನು ಅಂಗಡಿಯಿಂದ ದೂರಕ್ಕೆ ಕರೆದೊಯ್ದಿದ್ದರು' ಎಂದು ಹೇಳಿದರು.

'ಮಂಜುನಾಥ್ ಜೊತೆ ಜಗಳ ತೆಗೆದಿದ್ದ ಆರೋಪಿಗಳು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಆರೋಪಿತ ಮಹಿಳೆಯೊಬ್ಬರು ರಸ್ತೆ ಪಕ್ಕದಲ್ಲಿದ್ದ ಕಲ್ಲು ಎತ್ತಿಕೊಂಡು ಬಂದು ಮಂಜುನಾಥ್ ಅವರಿಗೆ ಒಂದು ಬಾರಿ ಹೊಡೆದಿದ್ದರು. ನಂತರ, ಇತರೆ ಆರೋಪಿಗಳು ಮಂಜುನಾಥ್ ಅವರ ಕೈ-ಕಾಲು ಗಟ್ಟಿಯಾಗಿ ಹಿಡಿದುಕೊಂಡಿದ್ದರು. ಆರೋಪಿಯೊಬ್ಬ ಅದೇ ಕಲ್ಲು ಎತ್ತಿಕೊಂಡು 19 ಬಾರಿ ಹೊಡೆದಿದ್ದರು. ತಲೆ ಹಾಗೂ ದೇಹದ ವಿವಿಧ ಭಾಗಗಳಿಗೆ ಕಲ್ಲು ಬಿದ್ದು ರಕ್ತ ಸೋರಿತ್ತು. ತೀವ್ರ ಗಾಯಗೊಂಡು ಮಂಜುನಾಥ್ ಸ್ಥಳದಲ್ಲೇ ಮೃತಪಟ್ಟಿದ್ದರು' ಎಂದು ತಿಳಿಸಿದರು.

'ಕೃತ್ಯದ ನಂತರ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು. ಬಂಧನ ಭೀತಿಯಲ್ಲಿ ತಲೆಮರೆಸಿಕೊಂಡು ಓಡಾಡುತ್ತಿದ್ದರು. ತನಿಖೆಗೆ ರಚಿಸಿದ್ದ ವಿಶೇಷ ತಂಡ, ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದೆ' ಎಂದು ಪೊಲೀಸರು ಹೇಳಿದರು.

ನಕಲಿ ವಜ್ರ ಮಾರಾಟ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ವಜ್ರವನ್ನು ₹ 10 ಲಕ್ಷಕ್ಕೆ ಮಾರಾಟ ಮಾಡಿ ವಂಚಿಸಲು ಯತ್ನಿಸಿದ್ದ ಮೂವರು ಆರೋಪಿಗಳನ್ನು ಪುಲಿಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಾಗರಾಜ್, ಬಾಲಕೃಷ್ಣ ಹಾಗೂ ರಾಜೇಶ್ ಬಂಧಿತರು. ಉದ್ಯಮಿಯೊಬ್ಬರು ನೀಡಿದ್ದ ದೂರು ಆಧರಿಸಿ ಮೂವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಫ್ರೇಜರ್ ಟೌನ್ ನಿವಾಸಿಯಾಗಿರುವ ಉದ್ಯಮಿಯನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿಗಳು, 'ನಮ್ಮ ಬಳಿ ವಜ್ರವಿದ್ದು, ಅದರ ಬೆಲೆ ಮಾರುಕಟ್ಟೆಯಲ್ಲಿ ₹ 12 ಲಕ್ಷವಿದೆ. ಅದನ್ನು ₹ 10 ಲಕ್ಷಕ್ಕೆ ಮಾರುತ್ತೇವೆ' ಎಂದಿದ್ದರು. ಅದನ್ನು ನಂಬಿದ್ದ ಉದ್ಯಮಿ, ₹10 ಸಾವಿರ ಮುಂಗಡ ಹಣ ನೀಡಿದ್ದರು'.

'ಮುಂಗಡ ಹಣ ಪಡೆದಿದ್ದ ಆರೋಪಿಗಳು, ನಕಲಿ ವಜ್ರ ತೋರಿಸಿದ್ದರು. ಇದಕ್ಕಿಂತ ಗುಣಮಟ್ಟವಾದ ಮತ್ತೊಂದು ವಜ್ರ ತಮ್ಮ ಬಳಿ ಇರುವುದಾಗಿ ಹೇಳಿದ್ದರು. ಅದರ ಬೆಲೆ ₹ 25 ಕೋಟಿ ಎಂಬುದಾಗಿ ತಿಳಿಸಿದ್ದರು. ಅನುಮಾನಗೊಂಡ ಉದ್ಯಮಿ, ಬಾಕಿ ಹಣ ನೀಡುವುದಕ್ಕೂ ಮುನ್ನವೇ ವಜ್ರವನ್ನು ಪರಿಶೀಲಿಸಿದ್ದರು. ವಜ್ರ ನಕಲಿ ಎಂಬುದು ಗೊತ್ತಾಗಿತ್ತು. ಅವಾಗಲೇ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ಕುರುಹಿನಶೆಟ್ಟಿ ಸೊಸೈಟಿ ವಂಚನೆ ಪ್ರಕರಣ

ಬಳ್ಳಾರಿಯ ಎಸ್.ಎನ್. ಪೇಟೆ ಸಿದ್ದಿಕಿ ಕಾಲೊನಿ ನಿವಾಸಿಯಾಗಿರುವ ಆರೋಪಿ ರಾಕೇಶ್ ಸಾವಿ, ಸೊಸೈಟಿಯಲ್ಲಿ ಸಾಲ ಪಡೆದು ವಾಪಸು ಪಾವತಿಸಿರಲಿಲ್ಲ.

ಸಾಲಗಾರನ ಬಂಧನ

ಬೆಂಗಳೂರು: ಠೇವಣಿದಾರರಿಂದ ಸುಮಾರು ₹100 ಕೋಟಿ ಸಂಗ್ರಹಿಸಿ ವಂಚಿಸಿದ್ದ ಆರೋಪದಡಿ ಕುರಹಿನಶೆಟ್ಟಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ರಾಕೇಶ್ ಸಾವಿ (51) ಎಂಬುವವರನ್ನು ಕೆಂಪೇಗೌಡ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ರಾಕೇಶ್ ಸಾವಿ, ಸಾಲ ಪಡೆದು ವಾಪಸ್ ನೀಡದಿದ್ದರಿಂದ ಸೊಸೈಟಿಗೆ ನಷ್ಟವಾಗಿತ್ತು. ಹೀಗಾಗಿ ಠೇವಣಿದಾರರಿಗೆ ಹಣ ವಾಪಸು ನೀಡಲು ಸಾಧ್ಯವಾಗಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.



'2011ರಿಂದ 2022ರ ಅವಧಿಯಲ್ಲಿ ಸಾಲ ಸಮಿತಿಯಲ್ಲಿ ಸರಿಯಾಗಿ ದಾಖಲೆಗಳನ್ನು ಪರಿಶೀಲನೆ ಮಾಡದೇ ನಿಯಮಬಾಹಿರವಾಗಿ ಹಲವರಿಗೆ ಸಾಲ ಮಂಜೂರು ಮಾಡಲಾಗಿತ್ತು. ಆರೋಪಿ ರಾಕೇಶ್ ಸಹ ಕೋಟಿಗೂ ಹೆಚ್ಚು ಸಾಲ ಪಡೆದುಕೊಂಡಿದ್ದರು. ಕೆಲ ಸುಸ್ತಿದಾರರಿಗೂ ಕೋಟಿಗೂ ಹೆಚ್ಚು ಸಾಲ ನೀಡಲಾಗಿತ್ತು. ಠೇವಣಿದಾರರ ಹಣವೆಲ್ಲ ಸಾಲಕ್ಕೆ ಹೋಗಿತ್ತು.'

'ಸಾಲ ಪಡೆದಿದ್ದವರು ನಿಗದಿತ ದಿನದೊಳಗೆ ಮರುಪಾವತಿ ಮಾಡಿರಲಿಲ್ಲ. ಇದರಿಂದಾಗಿ ಸೊಸೈಟಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತ್ತು. ಸೊಸೈಟಿಯಲ್ಲಿ ಠೇವಣಿ ಇರಿಸಿದ್ದ ಜನ, ಹಣ ವಾಪಸು ನೀಡುವಂತೆ ಒತ್ತಾಯಿಸಲಾರಂಭಿಸಿದ್ದರು. ಆದರೆ, ಅವರಿಗೆ ಹಣ ನೀಡಿರಲಿಲ್ಲ. ಇದರಿಂದ ಬೇಸತ್ತ ಠೇವಣಿದಾರರು, ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅಧ್ಯಕ್ಷ ಬಿ.ಎಲ್. ಶ್ರೀನಿವಾಸ್ (64), ಉಪಾಧ್ಯಕ್ಷ ಬಿ. ಈಶ್ವರ್ (71), ಸಾಲಗಾರರಾದ ದಯಾನಂದ ಹೆಗ್ಡೆ (50), ವಿ. ನಾಗೇನಹಳ್ಳಿಯ ಪಿ. ಚಂದ್ರಶೇಖರ್ (55) ಹಾಗೂ ಸುರಭಿ ಚಿಟ್ಸ್ ಸಂಸ್ಥೆಯ ಬಿ.ಟಿ. ಮೋಹನ್ (75) ಅವರನ್ನು ಈ ಹಿಂದೆಯೇ ಬಂಧಿಸಲಾಗಿತ್ತು. ಇದೀಗ ರಾಕೇಶ್‌ನನ್ನು ಬಂಧಿಸಲಾಗಿದೆ' ಎಂದು ಹೇಳಿವೆ.

ಚುನಾವಣೆ ಅರ್ಜಿ: ವಿಚಾರಣೆ ಮುಂದಕ್ಕೆ

ಬೆಂಗಳೂರು: ಬಿಬಿಎಂಪಿ ಚುನಾವಣೆ ನಡೆಸಲು ಪುನಃ ಮೂರು ತಿಂಗಳ ಕಾಲಾವಕಾಶ ಕೋರಿ ರಾಜ್ಯ ಸರ್ಕಾರ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಇದೇ 14ಕ್ಕೆ ಮುಂದೂಡಿದೆ.

'ಬಿಬಿಎಂಪಿಯ 243 ವಾರ್ಡ್‌ಗಳಿಗೆ ನವೆಂಬರ್ 30ರೊಳಗೆ ಮೀಸಲಾತಿ ನಿಗದಿಪಡಿಸಬೇಕು ಹಾಗೂ ಡಿಸೆಂಬರ್ 31ರೊಳಗೆ ಚುನಾವಣೆ ನಡೆಸಬೇಕು' ಎಂದು 2022ರ ಸೆಪ್ಟೆಂಬರ್ 30ರಂದು ಹೈಕೋರ್ಟ್ ಆದೇಶಿಸಿತ್ತು. ಆದರೆ, ಈ ಆದೇಶ ಪಾಲನೆಗೆ ಮೂರು ತಿಂಗಳ ಕಾಲ ಅವಧಿ ವಿಸ್ತರಿಸಬೇಕು ಎಂದು ಕೋರಿ ನಗರಾಭಿವೃದ್ಧಿ ಇಲಾಖೆ ಇತ್ತೀಚೆಗೆ ಮನವಿ ಮಾಡಿತ್ತು. ಇದನ್ನು ನ್ಯಾಯಮೂರ್ತಿ ಹೇಮಂತ್ ಚಂದನ್ ಗೌಡರ್ ಅವರಿದ್ದ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.


ಪೋಸ್ಟ್ ಮಾಸ್ಟರ್ ವಿರುದ್ಧ ಲೈಂಗಿಕ ದೌರ್ಜನ್ಯದ ಸುಳ್ಳು ಆರೋಪ

ಪ್ರಕರಣ ರದ್ದುಪಡಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯೋಗದಿಂದ ವಜಾಗೊಳಿಸಿರುವುದು ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸುವುದಕ್ಕೆ ಆಧಾರವಾಗುವುದಿಲ್ಲ' ಎಂಬ ಅಭಿಪ್ರಾಯದೊಂದಿಗೆ 45 ವರ್ಷದ ಮಹಿಳೆಯೊಬ್ಬರು, ಇಬ್ಬರು ಪೋಸ್ಟ್ ಮಾಸ್ಟರ್‌ಗಳ ವಿರುದ್ಧ ದಾಖಲಿಸಿದ್ದ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಬಸವನಗುಡಿ ಅಂಚೆ ಕಚೇರಿಯ ಪೋಸ್ಟ್ ಮಾಸ್ಟರ್‌ಗಳಾದ ರಾಧಾಕೃಷ್ಣನ್ ಅಲಿಯಾಸ್ ಕೆ.ರಾಧಾಕೃಷ್ಣ ಮತ್ತು ಹನುಮಂತಯ್ಯ ಅಲಿಯಾಸ್ ಬಿ.ಎಂ.ಹನುಮಂತಯ್ಯ ಎಂಬುವವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.



'ಆರೋಪಗಳನ್ನು ಸಾಬೀತುಪಡಿಸುವಂತಹ ಯಾವುದೇ ಪೂರಕ ಸಾಕ್ಷ್ಯಗಳನ್ನು ಪ್ರಾಸಿಕ್ಯೂಷನ್ ನ್ಯಾಯಾಲಯಕ್ಕೆ ಒದಗಿಸಿಲ್ಲ. ಹಾಗಾಗಿ, ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 354 (1)ರ ಅನ್ವಯ ಹೊರಿಸಲಾಗಿರುವ ಲೈಂಗಿಕ ಶೋಷಣೆ ಆರೋಪಗಳು ಅರ್ಜಿದಾರರಿಗೆ ಅನ್ವಯಿಸುವುದಿಲ್ಲ. ಇಂತಹ ಸ್ಥಿತಿಯಲ್ಲಿ ವಿಚಾರಣೆ ಮುಂದುವರಿಕೆ ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಲಿದೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?

ಬಸವನಗುಡಿ ಪೊಲೀಸ್ ಠಾಣೆಯಲ್ಲಿ 2018ರ ಮೇ 16ರಂದು ಫಿರ್ಯಾದು ದಾಖಲಿಸಿದ್ದ ಮಹಿಳೆ, 'ನನ್ನ ತಾಯಿ ಬಸವನಗುಡಿ ಅಂಚೆ ಕಚೇರಿಯಲ್ಲಿ ಗುತ್ತಿಗೆ ಉದ್ಯೋಗಿಯಾಗಿದ್ದರು. ಅವರು ಅನಾರೋಗ್ಯಕ್ಕೆ ಈಡಾಗಿದ್ದ ಸಂದರ್ಭದಲ್ಲಿ ನಾನೇ ಅಂಚೆ ಕಚೇರಿಗೆ ಹೋಗಿ ಕೆಲಸ ಮಾಡುತ್ತಿದ್ದೆ. ಈ ಸಂದರ್ಭದಲ್ಲಿ ರಾಧಾಕೃಷ್ಣ ಮತ್ತು ಹನುಮಂತಯ್ಯ, ಸರಿಯಾಗಿ ಕೆಲಸ ಮಾಡಬೇಕು. ಇಲ್ಲವಾದರೆ ತೆಗೆದು ಹಾಕುತ್ತೇನೆ ಎಂಬ ಬೆದರಿಕೆ ಹಾಕುತ್ತಿದ್ದರು' ಎಂದು ದೂರು ನೀಡಿದ್ದರು.

'ನಾನು ಕ್ಷಮೆ ಕೇಳಿದ್ದರೂ ಬೆದರಿಕೆ ಮುಂದುವರಿಸಿದ್ದರು. ಇದರಿಂದ ಆತ್ಮಹತ್ಯೆಗೆ ಯತ್ನಿಸಿದ್ದೆ. ಅಷ್ಟೇ ಅಲ್ಲ, ಹನುಮಂತಯ್ಯ ನನ್ನೊಂದಿಗೆ ಲೈಂಗಿಕ ಬಯಕೆ ವ್ಯಕ್ತಪಡಿಸಿದ್ದರು. ಅದನ್ನು ತಿರಸ್ಕರಿಸಿದ್ದೆ. ಅದೊಂದು ದಿನ ರಾಧಾಕೃಷ್ಣ ನನ್ನನ್ನು ಕಾರಿನಲ್ಲಿ 8ನೇ ಮೈಲಿ ಬಳಿಯ ಉದ್ಯಾನವೊಂದಕ್ಕೆ ಕರೆದೊಯ್ದು, ಬಲವಂತದ ಲೈಂಗಿಕ ಕ್ರಿಯೆ ನಡೆಸಲು ಯತ್ನಿಸಿದರು. ಆಗ ಯಾರೋ ಬಂದು ರಾಧಾಕೃಷ್ಣ ಅವರನ್ನು ಹಿಡಿದರು. ತಕ್ಷಣವೇ ನಾನು ಅಲ್ಲಿಂದ ಹೊರಟು ಬಂದಿದ್ದೆ' ಎಂದು ಆರೋಪಿಸಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ನಡೆಸಿ ರಾಧಾಕೃಷ್ಣ ಮತ್ತು ಹನುಮಂತಯ್ಯ ವಿರುದ್ಧ 37ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣ ರದ್ದುಪಡಿಸುವಂತೆ ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿದಾರರ ಪರ ಎಸ್.ಆರ್.ರಾಜೇಶ್ ವಕಾಲತ್ತು ವಹಿಸಿದ್ದರು.

ರಸ್ತೆ ಬದಿ ಶಾಲಾ ಬಸ್ ನಿಲುಗಡೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಸಿಡೆನ್ಸಿ ರಸ್ತೆಯ ಸುತ್ತಮುತ್ತ ಬೆಳಿಗ್ಗೆ 8.30ರ ಬಳಿಕ ಶಾಲಾ ಬಸ್‌ಗಳನ್ನು ರಸ್ತೆಬದಿಯಲ್ಲಿ ನಿಲುಗಡೆ ಮಾಡದಂತೆ ಸಂಚಾರ ಪೊಲೀಸರು ನಿರ್ಬಂಧಿಸಿದ್ದಾರೆ.

ಈ ಮಾರ್ಗದಲ್ಲಿ ಬಿಷಪ್ ಕಾಟನ್ ಬಾಲಕರ– ಬಾಲಕಿಯರ ಶಾಲೆ, ಸೇಕ್ರೆಡ್ ಹಾರ್ಟ್ ಶಾಲೆಯ ಬಳಿ ವಿದ್ಯಾರ್ಥಿಗಳನ್ನು ಬಿಡಲು ಬರುವ ಶಾಲಾ ಬಸ್‌ಗಳು ಸಂಜೆವರೆಗೂ ರಸ್ತೆಯ ಬದಿಯಲ್ಲೇ ನಿಲ್ಲುತ್ತಿವೆ. ಇದರಿಂದ ಸಂಚಾರ ದಟ್ಟಣೆ ಉಂಟಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ.

ಈಗ ಪೋಷಕರ ವಾಹನಗಳನ್ನು ಶಾಲಾ ಆವರಣಕ್ಕೆ ಬಿಡಲು ಶಾಲಾ ಆಡಳಿತ ಮಂಡಳಿ ಒಪ್ಪಿದ್ದು ಮೈದಾನಕ್ಕೆ ವಾಹನಗಳು ಪ್ರವೇಶಿಸುತ್ತಿವೆ. ಅದರ ಜತೆಗೆ ಶಾಲಾ ಬಸ್‌ಗಳು ರಸ್ತೆಬದಿಯಲ್ಲಿ ನಿಲುಗಡೆ ಮಾಡದಂತೆ ಪೊಲೀಸರು ಸೂಚಿಸಿದ್ದಾರೆ.

'ರೆಸಿಡೆನ್ಸ್ ರಸ್ತೆಯಲ್ಲಿ ಸಮಸ್ಯೆ ತೀವ್ರವಾಗಿತ್ತು. ಶಾಲಾ ಬಸ್‌ಗಳು ರಸ್ತೆಯ ಬದಿಯಲ್ಲಿ ನಿಲುಗಡೆ ಮಾಡುತ್ತಿದ್ದರಿಂದ ಸಾರ್ವಜನಿಕರ ವಾಹನ ಸಂಚಾರಕ್ಕೆ ತೀವ್ರ ತೊಂದರೆ ಆಗಿತ್ತು. ಅಲ್ಲಿ ನಿರ್ಬಂಧ ಹೇರಲಾಗಿದೆ. ಮುಂದೆ ನಗರದಾದ್ಯಂತ ಈ ಕ್ರಮ ಜಾರಿಗೆ ತರಲಾಗುವುದು' ಎಂದು ಸಂಚಾರ ವಿಭಾಗದ ವಿಶೇಷ ಆಯುಕ್ತ ಎಂ.ಎ.ಸಲೀಂ ತಿಳಿಸಿದ್ದಾರೆ.

ನಗರದ ಕೆಲವು ಶಾಲೆಗಳು ರಸ್ತೆಬದಿಯಲ್ಲಿದ್ದು ಶಾಲಾ ಮಕ್ಕಳನ್ನು ಬಿಡುವಾಗ ಹಾಗೂ ಬಸ್‌ಗೆ ಹತ್ತಿಸಿಕೊಳ್ಳುವಾಗ ವಾಹನ ದಟ್ಟಣೆಯಾಗುತ್ತಿದೆ. ಅಂತಹ ಶಾಲೆ ಗುರುತಿಸಿ, ಪೋಷಕರ ವಾಹನಕ್ಕೆ ಆಗಮನ ಹಾಗೂ ನಿರ್ಗಮನ ದ್ವಾರ ನಿರ್ಮಿಸುವಂತೆ ಸೂಚನೆ ನೀಡಲಾಗುವುದು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕುಕ್ಕೆ: ಬೆಂಗಳೂರಿನ ಯಾತ್ರಾರ್ಥಿ ಸಾವು

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದಿದ್ದ ಬೆಂಗಳೂರಿನ ಕಸ್ತೂರಿ ನಗರ ಪೈಪ್‌ಲೈನ್ ರೋಡ್ ನಿವಾಸಿ ಶಿವಪ್ಪ (60) ಮಂಗಳವಾರ ಬೆಳಿಗ್ಗೆ ಹೃದಯಾಘಾತದಿಂದ ಮೃತಪಟ್ಟರು.

ಇಲ್ಲಿನ ಕುಮಾರಧಾರ ನದಿ ಬಳಿ ಸ್ನಾನಕ್ಕೆ ತೆರಳಿದ್ದಾಗ ಹೃದಯಾಘಾತವಾಗಿದೆ. ಕೂಡಲೇ ಆಸ್ಪತ್ರೆಗೆ ದಾಖಲಿಸಿದರೂ ಬದುಕುಳಿಯಲಿಲ್ಲ.

ನಿಧನ ವಾರ್ತೆ

ಕೆ.ಶ್ರೀನಿವಾಸರಾವ್



ಬೆಂಗಳೂರು: ವಿಧಾನಸಭೆ ಸಚಿವಾಲಯದ ಗ್ರಂಥಾಲಯದ ನಿವೃತ್ತ ಉದ್ಯೋಗಿ ಕೆ.ಶ್ರೀನಿವಾಸರಾವ್ (71) ಅನಾರೋಗ್ಯದಿಂದ ಕೆಲ ದಿನಗಳ ಹಿಂದೆ ಸ್ವಗೃಹದಲ್ಲಿ ನಿಧನರಾದರು.

ಮೃತರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.



ರಾಜ್ಯೋತ್ಸವ ಕಾರ್ಯಕ್ರಮ...

ಬೆಂಗಳೂರು ವಕೀಲರ ಸಾಹಿತ್ಯ ಕೂಟ, ಬೆಂಗಳೂರು ವಕೀಲರ ಸಂಘ, ಬೆಂಗಳೂರು ವಕೀಲರ ಸಹಕಾರ ಸಂಘ ಹಾಗೂ ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ವತಿಯಿಂದ ಮಂಗಳವಾರ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅಶ್ವಿನಿ ಪುನೀತ್ ರಾಜಕುಮಾರ್, ಹೈಕೋರ್ಟ್ ನ್ಯಾಯಮೂರ್ತಿ ಶಂಕರೇಗೌಡ (ಎಡದಿಂದ ಎರಡನೆಯವರು) ಮತ್ತು ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಸಿದ್ರಾಮುಲ್ಲಾಖಾನ್' ಹೇಳಿಕೆ: ರವಿ ಕ್ಷಮೆಗೆ ಆಗ್ರಹ

ಬೆಂಗಳೂರು: 'ಸಿದ್ದರಾಮಯ್ಯ ಅವರನ್ನು ಸಿದ್ರಾಮುಲ್ಲಾ ಖಾನ್ ಎಂದು ಟೀಕಿಸಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರ ಹೇಳಿಕೆ ಬಾಲಿಶ ಮತ್ತು ಕುಚೋದ್ಯದ ನಿಂದನೆ. ಮರ್ಯಾದೆಯ ಸೀಮೆ ಮೀರಿ ಮಾತನಾಡಿರುವ ರವಿ ಅವರು ಕ್ಷಮೆ ಕೇಳಬೇಕು' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಶಿವಣ್ಣ ಆಗ್ರಹಿಸಿದ್ದಾರೆ.

'ರವಿ ಮಾತನಾಡಿದ ರೀತಿಯಲ್ಲಿಯೇ ನಾವೂ ಮಾತನಾಡಲು ಸಾಧ್ಯವಿದೆ. ನಾವು ಮೋದಿ ಅವರನ್ನು 'ಮನುವಾದಿ' ಮೋದಿ, 'ಅಹಿಂದ ವಿರೋಧಿ' ಅಮಿತ್ ಶಾ, 'ಶೂದ್ರ ವಿರೋಧಿ' ಆರೆಸ್ಸೆಸ್ ಎಂದು ಹೇಳಿಕೆ ನೀಡಿದರೆ ಸಹಿಸಿಕೊಳ್ಳುತ್ತೀರಾ' ಎಂದು ಪ್ರಶ್ನಿಸಿದ್ದಾರೆ.

'ಹೇಳಿಕೆ ಕೊಟ್ಟ ಬಳಿಕ ತಿಪ್ಪೆ ಸಾರಿಸುವ ಕೆಲಸ ಮಾಡುತ್ತಿರುವ ರವಿ, ತಮ್ಮ ಹೇಳಿಕೆಯನ್ನೂ 'ಹೌದು ಹುಲಿಯಾ' ಹೇಳಿಕೆಯನ್ನು ಸ್ವೀಕರಿಸಿದಂತೆ ಸ್ವೀಕರಿಸಲಿ ಎಂದು ವಿತಂಡ ವಾದ ಮಂಡಿಸುತ್ತಿದ್ದಾರೆ. ಮುಗ್ಧ ಅಭಿಮಾನಿಯೊಬ್ಬ ಮಾಡಿದ ಪ್ರಶಂಸೆಯನ್ನು ಸ್ವೀಕರಿಸಲಾಗಿದೆ ಎಂಬ ಮಾತ್ರಕ್ಕೆ ಕೋಮುವಾದಿ ಮನಸ್ಥಿತಿಯ ರವಿ ಅವರ ಹೇಳಿಕೆ ಸ್ವೀಕರಿಸಲು ಸಾಧ್ಯ ಇಲ್ಲ' ಎಂದಿದ್ದಾರೆ.

'ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ವಿರೋಧಿ ರಾಜಕಾರಣ ಮಾಡುತ್ತಿರುವ ಬಿಜೆಪಿ ಮತ್ತು ಸಂಘ ಪರಿವಾರದ ಕುಡಿಗಳ ವಿರುದ್ಧ ಹೋರಾಟ ಮಾಡಲು ಶೂದ್ರ ಶಕ್ತಿಗಳಲ್ಲಿ ಜಾಗೃತಿ ಮೂಡಿಸಬೇಕಾದ ಕಾಲ ಬಂದಿದೆ' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಬ್ಯಾಗ್ ಕದ್ದಿದ್ದ ಆರೋಪಿ ಬಂಧನ

ಬೆಂಗಳೂರು: ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ಗಮನ ಬೇರೆಡೆ ಸೆಳೆದು ಬ್ಯಾಗ್ ಕಳ್ಳತನ ಮಾಡಿದ್ದ ಆರೋಪಿ ಕಪಿಲ್ ಸಾಗರ್ ಅಲಿಯಾಸ್ ಶಂಶೇರ್ (42) ಎಂಬಾತನನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

'ಉತ್ತರ ಪ್ರದೇಶದ ಕಪಿಲ್ ಸಾಗರ್, ದೆಹಲಿಯ ಸುಲ್ತಾನ್ ಪುರಿಯಲ್ಲಿ ವಾಸವಿದ್ದ. ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ. ಸ್ನೇಹಿತರಾದ ವಿಶಾಲ್ ಯಾದವ್, ಅಮಾನ್ ಚೋಪ್ರಾ, ರಾಜೇಂದ್ರ, ಮಹೇಂದ್ರ ಹಾಗೂ ಸುರೇಂದ್ರ ಜೊತೆ ಸೇರಿ ಕೃತ್ಯ ಎಸಗಿದ್ದ. ಸದ್ಯ ಕಪಿಲ್ ಮಾತ್ರ ಸಿಕ್ಕಿಬಿದ್ದಿದ್ದಾನೆ. ಉಳಿದ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'₹ 8.20 ಲಕ್ಷ ಮೌಲ್ಯದ ವಜ್ರದ ಆಭರಣ, ಚಿನ್ನಾಭರಣ ಹಾಗೂ ₹ 60 ಸಾವಿರ ನಗದು ಬ್ಯಾಗ್‌ನಲ್ಲಿತ್ತು. ಆರೋಪಿಗಳ ಕೃತ್ಯದ ಬಗ್ಗೆ ಮಹಾವೀರ್, ದೂರು ನೀಡಿದ್ದರು. ಇವುಗಳನ್ನು ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದೆ' ಎಂದರು.

ಮಾರತ್ತಹಳ್ಳಿ ಮೇಲ್ಸೇತುವೆಯಲ್ಲಿ ವಾಹನಗಳ ಸಂಚಾರ ನಿರ್ಬಂಧ

ಬೆಂಗಳೂರು: ವರ್ತೂರು ರಸ್ತೆಯಲ್ಲಿರುವ ಮಾರತ್ತಹಳ್ಳಿ ಮೇಲ್ಸೇತುವೆಗೆ ಹೊಂದಿಕೊಂಡಂತೆ ಕೆಳಸೇತುವೆ (ಮುನ್ನೇಕೊಳಾಲು ಮಾರ್ಗ) ನಿರ್ಮಾಣ ಕಾಮಗಾರಿ ಆರಂಭವಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಮೇಲ್ಸೇತುವೆಯ ಭಾಗಶಃ ರಸ್ತೆಯಲ್ಲಿ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಸಂಚಾರ ಪೊಲೀಸರು, 'ಡಿ. 6ರಿಂದ ಕಾಮಗಾರಿ ಆರಂಭವಾಗಿದೆ. ಕೆಳ ಸೇತುವೆ ನಿರ್ಮಾಣದ ಸಂದರ್ಭದಲ್ಲಿ ಮೇಲ್ಸೇತುವೆ ಮೇಲೆ ಒತ್ತಡ ಬೀಳಲಿದ್ದು, ಅಪಾಯ ಸಂಭವಿಸುವ ಸಾಧ್ಯತೆ ಇರುತ್ತದೆ. ಇದೇ ಕಾರಣಕ್ಕೆ, ಮೇಲ್ಸೇತುವೆಯ ಅರ್ಧರಸ್ತೆಯಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ' ಎಂದಿದ್ದಾರೆ.

'ಕುಂದಲಹಳ್ಳಿ ಗೇಟ್ ಜಂಕ್ಷನ್‌ನಿಂದ ಮಾರತ್ತಹಳ್ಳಿ ಕಡೆಗೆ ಸಂಚರಿಸುವ ವಾಹನಗಳು, ತುಳಸಿ ಜಂಕ್ಷನ್ ಅಥವಾ ಹೊರವರ್ತುಲ ರಸ್ತೆಯತ್ತ ಮುಖ್ಯರಸ್ತೆ ಮೂಲಕ ಹೋಗಲು ವ್ಯವಸ್ಥೆ ಮಾಡಲಾಗಿದೆ. ಮುಂದಿನ 20 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆ ಇದ್ದು, ನಂತರ ವಾಹನಗಳ ಸಂಚಾರ ಯಥಾಸ್ಥಿತಿ ಇರಲಿದೆ. ಕೆಳಸೇತುವೆ ನಿರ್ಮಾಣದಿಂದಾಗಿ ಸ್ಥಳೀಯರ ವಾಹನಗಳ ಸಂಚಾರಕ್ಕೆ ಅನುಕೂಲವಾಗಲಿದೆ' ಎಂದು ಪೊಲೀಸರು ಹೇಳಿದ್ದಾರೆ.

ತಂಬಾಕು ಉತ್ಪನ್ನಗಳ ಸೇವನೆ ತಡೆಗೆ ಆ್ಯಪ್

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಸೇವನೆ ತಡೆಗೆ ಆರೋಗ್ಯ ಇಲಾಖೆಯು ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದೆ.

'ಸ್ನಾಪ್ ಟೊಬ್ಯಾಕೊ' ಹೆಸರಿನ ಮೊಬೈಲ್ ಆ್ಯಪ್ ಪ್ರಾಯೋಗಿಕವಾಗಿ ಯಶಸ್ವಿಯಾಗಿದ್ದು, ಶೀಘ್ರದಲ್ಲಿಯೇ ಈ ಆ್ಯಪ್ ಲೋಕಾರ್ಪಣೆ ಆಗಲಿದೆ. ಕೋಟ್ಪಾ ಕಾಯ್ದೆ ಉಲ್ಲಂಘಿಸಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವವರ ಹಾಗೂ ಸೇವಿಸುತ್ತಿರುವವರಿಗೆ ಕಡಿವಾಣ ಹಾಕಲು ಈ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕ ಛಾಯಾಚಿತ್ರಗಳನ್ನು ತೆಗೆದು, ಅಪ್ಲೋಡ್ ಮಾಡುವ ಅವಕಾಶ ಇರಲಿದೆ. ಈ ಛಾಯಾಚಿತ್ರದ ಆಧಾರದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ತಂಡ ಸ್ಥಳಕ್ಕೆ ಭೇಟಿ ನೀಡಿ, ಕ್ರಮವಹಿಸಲಿದೆ.

'ಕೆಲವೆಡೆ ಕಾನೂನು ಬಾಹಿರವಾಗಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ. ಅದೇ ರೀತಿ, ಕೆಲವರು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ. ನೂತನ ಆ್ಯಪ್ ಈಗಾಗಲೇ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದ್ದು, ಅಧಿಕೃತವಾಗಿ ಶೀಘ್ರದಲ್ಲಿಯೇ ಲೋಕಾರ್ಪಣೆ ಮಾಡಲಾಗುವುದು' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಆ್ಯಪ್ ಜಿಪಿಎಸ್ ತಂತ್ರಜ್ಞಾನವನ್ನು ಆಧರಿಸಿದೆ. ಹೀಗಾಗಿ, ಛಾಯಾಚಿತ್ರ ತೆಗೆದ ಸ್ಥಳ ನಿಖರವಾಗಿ ತಿಳಿಯಲಿದೆ. ಸ್ಥಳಕ್ಕೆ ಭೇಟಿ ನೀಡಿದಾಗ ಕೋಟ್ಪಾ ಕಾಯ್ದೆ ಉಲ್ಲಂಘಿಸಿ, ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವುದು ದೃಢಪಟ್ಟಲ್ಲಿ ಪ್ರತಿ ವ್ಯಕ್ತಿಗೆ ₹ 200ರಂತೆ ದಂಡ ವಿಧಿಸಲಾಗುವುದು. ಈ ಕಾರ್ಯಕ್ಕೆ ತಾಲ್ಲೂಕು ವೈದ್ಯಾಧಿಕಾರಿ ಒಳಗೊಂಡ 7 ಸದಸ್ಯರ ತಂಡ ರಚಿಸಲಾಗುವುದು' ಎಂದು ವಿವರಿಸಿದರು.

ಬಿಜೆಪಿಯಿಂದ ರೌಡಿ ಮೋರ್ಚಾ ಆರಂಭ– ಎಂ. ಲಕ್ಷ್ಮಣ್

ಬೆಂಗಳೂರು: 'ಬಿಜೆಪಿ ರೌಡಿ ಮೋರ್ಚಾ ಆರಂಭಿಸಿದ್ದು, 150 ರೌಡಿಗಳನ್ನು ಸೇರಿಸಿಕೊಳ್ಳಲು ಪಟ್ಟಿ ಮಾಡಿದೆ. 60 ರೌಡಿಗಳು ಆ ಮೋರ್ಚಾ ಸೇರಲು ಮುಂದಾಗಿದ್ದಾರೆ' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ಲಕ್ಷ್ಮಣ್ ಆರೋಪಿಸಿದರು.

ಪಕ್ಷದ ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೊದಲ ಹಂತದಲ್ಲಿ 36 ರೌಡಿಶೀಟರ್‌ಗಳು ಬಿಜೆಪಿ ಸೇರ್ಪಡೆಯಾಗಿದ್ದಾರೆ. 24 ರೌಡಿಗಳ ಸೇರ್ಪಡೆ ಬಾಕಿ ಇದೆ' ಎಂದರು.

ವಚನಜ್ಯೋತಿ ಬಳಗದ 25ನೇ ವರ್ಷದ ಸಂಭ್ರಮಾಚರಣೆ: 12 ಪ್ರಕಾರಗಳಲ್ಲಿ ಸ್ಪರ್ಧೆ

ಜ.10ರಿಂದ ಮಕ್ಕಳ ವಚನ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಚನಜ್ಯೋತಿ ಬಳಗದ 25ನೇ ವರ್ಷದ ಸಂಭ್ರಮಾಚರಣೆಯಲ್ಲಿ ಜ.10ರಿಂದ ಮೂರು ದಿನ 'ಮಕ್ಕಳ ವಚನ ಮೇಳ' ಆಯೋಜಿಸಲಾಗಿದೆ.

ರಾಜಧಾನಿಯಲ್ಲಿ ನಿರಂತರವಾಗಿ ಸಾಹಿತ್ಯ - ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿರುವ ವಚನ ಜ್ಯೋತಿ, ರವೀಂದ್ರ ಕಲಾಕ್ಷೇತ್ರದಲ್ಲಿ ಮೂರು ದಿನ ಮಕ್ಕಳ ವಚನ ಸಂಭ್ರಮಾಚರಣೆಗೆ ಅವಕಾಶ ಮಾಡಿಕೊಟ್ಟಿದೆ.

ವಚನ ಗಾಯನ, ವಚನ ಪ್ರಬಂಧ, ವಚನ ವಿವೇಚನ, ವಚನ ಚಿತ್ರ, ವಚನ ರಸಪ್ರಶ್ನೆ, ವಚನ ನೃತ್ಯ, ವಚನ ರೂಪಕ, ವಚನ ವೇಷಭೂಷಣ, ವಚನ ಅಂತ್ಯಾಕ್ಷರಿ, ವಚನ ಕತೆ, ವಚನ ಕಂಠಪಾಠ, ಸಮೂಹ ವಚನಗಾಯನ... ಹೀಗೆ ಒಟ್ಟು 12 ಪ್ರಕಾರಗಳಲ್ಲಿ ವಚನ ಸ್ಪರ್ಧೆಗಳು ನಡೆಯಲಿವೆ. ಶಿಶುವಿಹಾರದಿಂದ ಹತ್ತನೇ ತರಗತಿಯವರೆಗಿನ ವಿದ್ಯಾರ್ಥಿಗಳು ಕನ್ನಡದ ಸ್ವಯಾರ್ಜಿತ ಸ್ವತ್ತಾದ ವಚನಗಳನ್ನು ಹಾಡುತ್ತಾರೆ, ಬರೆಯುತ್ತಾರೆ, ವಿವೇಚಿಸುತ್ತಾರೆ, ಚಿತ್ರಿಸುತ್ತಾರೆ, ನರ್ತಿಸುತ್ತಾರೆ, ವೇಷಭೂಷಣಗಳ ಧರಿಸಿ ಸಂಭ್ರಮಿಸುತ್ತಾರೆ ಎಂದು ವಚನ ಜ್ಯೋತಿ ಬಳಗದ ಪಿನಾಕಪಾಣಿ ತಿಳಿಸಿದರು.

ರವೀಂದ್ರ ಕಲಾಕ್ಷೇತ್ರ ಮತ್ತು ಅದರ ಆವರಣದ ನಯನ ರಂಗಮಂದಿರ, ಸಂಸ ಬಯಲು ಮಂದಿರ, ವಿಶ್ರಾಂತಿ ಕೊಠಡಿ, ಆರ್ಟ್ ಗ್ಯಾಲರಿ, ತಾಲೀಮು ವೇದಿಕೆ ಸೇರಿದಂತೆ ಎಂಟು ವೇದಿಕೆಗಳಲ್ಲಿ 'ಮಕ್ಕಳ ವಚನ ಮೇಳ' ನಡೆಯಲಿದೆ. ವಚನಗಳ ಮೂಲಕ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಪ್ರಯತ್ನ ಇದು ಎಂದರು.

ಶಿಶುವಿಹಾರದ ಮಕ್ಕಳು, 1, 2 ತರಗತಿ, 3 ಮತ್ತು 4ನೇ ತರಗತಿ, 5, 6 ಮತ್ತು 7ನೇ ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳು ಎಂಬುದಾಗಿ ಐದು ವಿಭಾಗಗಳನ್ನು ವಿಂಗಡಿಸಲಾಗಿದೆ. ಗೂಗಲ್ ಫಾರ್ಮ್, ವಾಟ್ಸ್ ಆ್ಯಪ್ ಮತ್ತು ಇ-ಮೇಲ್‌ಗಳ ಮೂಲಕ ಮಕ್ಕಳ ವಚನ ಮೇಳಕ್ಕೆ ಶಾಲೆಗಳಿಂದ ಮತ್ತು ವೈಯಕ್ತಿಕವಾಗಿ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ: 9845184267.



ದಲಿತರ ಸಾಂಸ್ಕೃತಿಕ ಪ್ರತಿರೋಧ– ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ

ನೀಲಿ ಅಲೆ... ಮೊಳಗಿದ ಕ್ರಾಂತಿ ಕಹಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಲಿ ಕಡಲಾಗಿದ್ದ ನ್ಯಾಷನಲ್ ಕಾಲೇಜು ಮೈದಾನ, ಎಲ್ಲೆಲ್ಲೂ ಜೈಭೀಮ್ ಘೋಷಣೆ, ಬೋರ್ಗರೆದ ತಮಟೆ ಸದ್ದು, ಮೊಳಗಿದ ಕಹಳೆಗಳು, ಕಿಚ್ಚೆಬ್ಬಿಸಿದ ಕ್ರಾಂತಿ ಗೀತೆಗಳು...

ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ಆಯೋಜಿಸಿದ್ದ ದಲಿತರ ಸಾಂಸ್ಕೃತಿಕ ಪ್ರತಿರೋಧವು ದಲಿತ ಸಂಘರ್ಷ ಸಮಿತಿಯ ಮರುಹುಟ್ಟಿನಂತೆ ಕಂಡಿತು. ಇಡೀ ಮೈದಾನ ನೀಲಿ ಹೊದಿಕೆ ಹೊದ್ದಂತೆ ಭಾಸವಾಗುತ್ತಿತ್ತು. ಹೆಗಲ ಮೇಲೆ ನೀಲಿ ಶಾಲು, ಕೈಯಲ್ಲಿ ನೀಲಿ ಬಾವುಟ, ಕೆಲವರು ಧರಿಸಿದ್ದ ನೀಲಿ ಅಂಗಿಯೊಳಗೆ ಮಿಂಚಾದ ಅಂಬೇಡ್ಕರ್ ಭಾವಚಿತ್ರ ನೆರೆದಿದ್ದವರಲ್ಲಿ ಹೋರಾಟದ ಕಿಚ್ಚು ಹೆಚ್ಚಿಸಿತ್ತು.

ವೇದಿಕೆಯಲ್ಲಿ ಅಂಬೇಡ್ಕರ್ ಹೆಸರು ಹೇಳಿದ ಕೂಡಲೇ ಇಡೀ ಮೈದಾನದಲ್ಲಿ ಕಿವಿಗಡಚಿಕ್ಕುವಂತೆ 'ಜೈಭೀಮ್' ಘೋಷಣೆಗಳನ್ನು ಜನ ಮೊಳಗಿಸುತ್ತಿದ್ದರು. ಅಂಬೇಡ್ಕರ್ ಮೊಮ್ಮಗಳು ರಮಾಬಾಯಿ ಅವರು ವೇದಿಕೆಗೆ ಬರುತ್ತಿದ್ದಂತೆ ಕೇಕೆ ಜೋರಾಯಿತು. ಸ್ವಯಂ ಸೇವಕರು ಧರಿಸಿದ್ದ ಕಪ್ಪು ದಿರಿಸಿನಲ್ಲಿ 'ಜಾತಿಗಳೇ ದೇಶದ್ರೋಹಿಗಳು' ಎಂಬ ಸಾಲು ಆಕರ್ಷಿಸುತ್ತಿತ್ತು. ವೇದಿಕೆ ಕಾರ್ಯಕ್ರಮ ಆರಂಭಕ್ಕೂ ಮುನ್ನ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ ಚಾಲನೆ ನೀಡಿದರು. ಬಾಲು ಅವರು 'ಜಂಬೆ' ಬಾರಿಸುವ ಮೂಲಕ ಸಾಂಸ್ಕೃತಿಕ ಆರಂಭವಾಯಿತು. ಎಚ್.ಜನಾರ್ದನ್ (ಜನ್ನಿ), ಪಿಚ್ಚಳ್ಳಿ ಶ್ರೀನಿವಾಸ್, ಗೊಲ್ಲಹಳ್ಳಿ ಶಿವಪ್ರಸಾದ್, ಚಿಂತನ್ ವಿಕಾಸ್, ಆನಂದ್, ಡಿ.ರಾಜಪ್ಪ ಸೇರಿ ಹಲವರು ಕ್ರಾಂತಿಗೀತೆಗಳನ್ನು ಹಾಡಿ ಹೋರಾಟದ ಕಿಚ್ಚು ಹೆಚ್ಚಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಿ.ಬಸಲಿಂಗಯ್ಯ, 'ಇದು ಬುದ್ಧನ ನಾಡು, ಇಲ್ಲಿ ಅವನೇ ಪರಕೀಯ ಆಗಿದ್ದಾನೆ. ಡಿಎನ್‌ಎ ಚೆಕ್ ಮಾಡಿದರೆ ಹಲವರನ್ನು ವಿದೇಶಕ್ಕೆ ಓಡಿಸಬಹುದು. ಆದರೆ, ನಾವೆಲ್ಲರೂ ವಿಶ್ವಮಾನವರು. ಈ ನಾಡನ್ನು ಉತ್ತರ ಪ್ರದೇಶ, ಗುಜರಾತ್ ಅಥವಾ ಬಿಹಾರ ಮಾಡಲು ಬಿಡಬಾರದು' ಎಂದರು. ಒಗ್ಗೂಡಿದ 10 ಸಂಘಟನೆಗಳ ನಾಯಕರು ಮಾತನಾಡಿ ಬಂದಿದ್ದ ಜನರನ್ನು ಹುರಿದುಂಬಿಸಿದರು.

ಸಿಡಿಮಿಡಿ: ಕಾರ್ಯಕ್ರಮ ವೀಕ್ಷಿಸಲು ಬಂದಿದ್ದ ಆಮ್ ಆದ್ಮಿ ಪಕ್ಷದ ಮುಖಂಡ ಭಾಸ್ಕರ್ ರಾವ್ ಅವರನ್ನು ಅಲ್ಲೇ ಇದ್ದವರು ವೇದಿಕೆಗೆ ಕರೆದೊಯ್ದರು. ರಾಜಕೀಯ ಮುಖಂಡರಿಂದ ಅಂತರ ಕಾಯ್ದುಕೊಂಡಿದ್ದ ಈ ವೇದಿಕೆಗೆ ಅವರನ್ನು ಕರೆತಂದಿದ್ದು ಮುಖಂಡರ ಸಿಡಿಮಿಡಿಗೆ ಕಾರಣವಾಯಿತು. ಬಳಿಕ ಅವರು ಪ್ರೇಕ್ಷಕರ ಸಾಲಿನಲ್ಲಿ ಕುಳಿತರು.



ಸಾಂಸ್ಕೃತಿಕ ಪ್ರತಿರೋಧ ಕಾರ್ಯಕ್ರಮದಲ್ಲಿ ಡೊಳ್ಳು ಬಾರಿಸಿದ ವಿದ್ಯಾರ್ಥಿನಿಯರು –ಪ್ರಜಾವಾಣಿ ಚಿತ್ರ

ಮೀಸಲಾತಿ ಮೋದಿ ಅಪ್ಪನ ಗಂಟೇ: ಮಾವಳ್ಳಿ ಶಂಕರ್ ಪ್ರಶ್ನೆ

'ಶೇ 4ರಷ್ಟಿರುವ ಜನರಿಗೆ ಶೇ 10ರಷ್ಟು ಮೀಸಲಾತಿ ನೀಡಲು ಅದೇನು ಪ್ರಧಾನಿ ಮೋದಿ ಅವರ ಅಪ್ಪನ ಮನೆಯ ಗಂಟೇ' ಎಂದು ಡಿಎಸ್‌ಎಸ್ ಐಕ್ಯ ಹೋರಾಟ ಚಾಲನಾ ಸಮಿತಿ ಸದಸ್ಯ ಮಾವಳ್ಳಿ ಶಂಕರ್ ಪ್ರಶ್ನಿಸಿದರು.

'ಇದು ಮೋದಿಯ ತಪ್ಪಲ್ಲ, ಮೀಸಲು ಕ್ಷೇತ್ರದಲ್ಲಿ ಗೆದ್ದು ಹೋಗಿ ಮೋದಿಯ ಗುಲಾಮರಾಗಿ, ಸಂಘ ಪರಿವಾರದ ಕಾಲಾಳುಗಳಾಗಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂಸದರನ್ನು ನಾವು ಕೇಳಬೇಕಿದೆ. ಅಂಬೇಡ್ಕರ್ ಅವರು ನಿಮ್ಮಂತೆ ಒಂದು ಕ್ಷಣ ಮೈಮರೆತಿದ್ದರೂ ನಿಮ್ಮ ಸ್ಥಿತಿ ಏನಾಗಿರುತ್ತಿತ್ತು ಗೊತ್ತೆ' ಎಂದು ಖಾರವಾಗಿ ಪ್ರಶ್ನಿಸಿದರು.

'ಮೋದಿ ಮತ್ತು ಬಸವರಾಜ ಬೊಮ್ಮಾಯಿ ಮನೆಯಲ್ಲಿ ಗೋವುಗಳನ್ನು ಸಾಕಿದ್ದಾರೆಯೇ, ಈಗ ಗೋವುಗಳಿಗೆ ಮುತ್ತಿಡುವ ನಿಮಗೆ ದಲಿತರ ಮಕ್ಕಳಿಗೊಂದು ಮುತ್ತಿಡುವ ಯೋಗ್ಯತೆ ಇಲ್ಲ. ನಮ್ಮ ರಕ್ತ ಎಷ್ಟೇ ಹರಿದರೂ ನಾವು ದೇಶದ್ರೋಹಿಗಳಾಗಿಲ್ಲ. ಆರ್‌ಎಸ್‌ಎಸ್ ಬಂದೂಕು ಹಿಡಿದು ದೇಶವನ್ನು ಬೇಟೆಯಾಡುತ್ತಿದೆ. ಆರ್‌ಎಸ್‌ಎಸ್ ಎಂಬ ಶನಿ ಸಂತಾನವನ್ನು ಮುಗಿಸದಿದ್ದರೆ ಈ ದೇಶದ ಬಹುಜನರಿಗೆ ಮುಕ್ತಿ ಇಲ್ಲ' ಎಂದರು.

'ರಾಮಾಯಣ ಬರೆದವರು ನಾವು, ಮಹಾಭಾರತ ಬರೆದವರು ನಾವು, ಸಂವಿಧಾನವನ್ನೂ ಬರೆದವರೂ ನಾವೆ. ಅಮಿತ್ ಶಾ ಅವರು ಚರಿತ್ರೆ ಬದಲಿಸುತ್ತೇವೆ ಎನ್ನುತ್ತಿದ್ದಾರೆ. ಸಿಂಹಗಳ ಚರಿತ್ರೆಯನ್ನು ಸಿಂಹಗಳೇ ಬರೆಯಬೇಕೆ ಹೊರತು ನರಿಗಳಲ್ಲ' ಎಂದು ಕಿಡಿಕಾರಿದರು.

'ನೀಲಿ ದಂಡು ಇಂದು ಬೆಂಗಳೂರಿಗೆ ಬಂದಿದೆ. ದಲಿತರ ಪಾದಸ್ಪರ್ಶದಿಂದ ಬಸವನಗುಡಿ ಶಾಪವಿಮೋಚನೆಗೊಂಡಿದೆ' ಎಂದರು.

ಸುದ್ದಿ 2 ನಿಮಿಷ

ಕಬ್ಬು ಬೆಳೆಗಾರರ ಅಹೋರಾತ್ರಿ ಧರಣಿ ಮುಂದುವರಿಕೆ

ಬೆಂಗಳೂರು: 'ಬೇಡಿಕೆಗಳ ಕುರಿತು ಮುಖ್ಯಮಂತ್ರಿಯ ಜೊತೆ ಚರ್ಚಿಸಿದ ಬಳಿಕ ತೀರ್ಮಾನ ಕೈಗೊಳ್ಳುವುದಾಗಿ ಸಕ್ಕರೆ ಸಚಿವರು ಭರವಸೆ ನೀಡಿದ್ದರಿಂದ ಮಂಗಳವಾರ ಹಮ್ಮಿಕೊಂಡಿದ್ದ ಉಪವಾಸ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಮುಂದೂಡಿದ್ದೇವೆ. ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಅಹೋರಾತ್ರಿ ಧರಣಿ ಮುಂದುವರಿಯಲಿದೆ' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರ್ ಶಾಂತಕುಮಾರ್ ತಿಳಿಸಿದರು.

'ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಚರ್ಚಿಸುವ ಕುರಿತು ಸರ್ಕಾರ ಅಥವಾ ಸಕ್ಕರೆ ಸಚಿವರಿಂದ ಯಾವುದೇ ಸಂದೇಶ ನಮಗೆ ಬಂದಿಲ್ಲ. ಸಂದೇಶ ಬರಬಹುದೆಂದು ಮಂಗಳವಾರ ಕಾಯುತ್ತಿದ್ದೆವು. ನಮ್ಮ ಮುಂದಿನ ಹೋರಾಟದ ಬಗ್ಗೆ ಬುಧವಾರ ತಿಳಿಸಲಾಗುವುದು' ಎಂದರು.

'ಕಬ್ಬಿನ ಉಪ ಉತ್ಪನ್ನಗಳಿಂದ ಟನ್‌ಗೆ ₹ 126 ಲಾಭ ಬರುತ್ತದೆ. ಅದರಲ್ಲಿ ಮೊದಲು ಕಂತಾಗಿ ರೈತರಿಗೆ ಎಫ್‌ಆರ್‌ಪಿಗೆ ಹೆಚ್ಚುವರಿಯಾಗಿ ₹ 50 ನೀಡುವಂತೆ ಕಾರ್ಖಾನೆಗಳಿಗೆ ಆದೇಶ ಹೊರಡಿಸಲಾಗುವುದು' ಎಂದು ಸೋಮವಾರ ನಡೆದ ಕಬ್ಬು ಖರೀದಿ ಮಂಡಳಿ ಸಭೆಯಲ್ಲಿ ಸಕ್ಕರೆ ಸಚಿವ ಶಂಕರಪಾಟೀಲ ಮುನೇನಕೊಪ್ಪ ತಿಳಿಸಿದ್ದರು. ಆದರೆ, ಸರ್ಕಾರದ ನಿಲುವನ್ನು ಸಂಘ ತಿರಸ್ಕರಿಸಿದೆ' ಎಂದರು.

'ಸಕ್ಕರೆ ಕಾರ್ಖಾನೆಗಳು ಎಥೆನಾಲ್ ಉತ್ಪಾದನೆಗೆ ಪ್ರೋತ್ಸಾಹಧನ ನೀಡಬೇಕು, ಕಡಿಮೆ ಬಡ್ಡಿ ಸಾಲ, ಎಥೆನಾಲ್ ಖಚಿತ ಖರೀದಿ ಭರವಸೆ, ತೆರಿಗೆ ವಿನಾಯಿತಿ, ವಿದ್ಯುತ್ ಖರೀದಿ ಭರವಸೆ ಮುಂತಾದ ಸವಲತ್ತುಗಳನ್ನು ನೀಡಬೇಕು. ಸಕ್ಕರೆ ಕಾರ್ಖಾನೆಗಳು ಕಬ್ಬು ಸಾಗಣೆ ವೆಚ್ಚವನ್ನು ಕಡಿಮೆ ಮಾಡಿದರೆ ರೈತರಿಗೆ ಟನ್‌ಗೆ ₹ 150ರಿಂದ ₹ 200 ಉಳಿಯಬಹುದು. ಈ ದಿಕ್ಕಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು' ಎನ್ನುವುದು ನಮ್ಮ ಬೇಡಿಕೆ ಎಂದು ಹೇಳಿದ್ದಾರೆ.



ರಿಸರ್ವ್ ಎಸ್‌ಐ ನೇಮಕಾತಿ ಪರೀಕ್ಷೆ 18ಕ್ಕೆ

ಬೆಂಗಳೂರು: ರಾಜ್ಯ ಮೀಸಲು ಪೊಲೀಸ್ ಪಡೆಯಲ್ಲಿ (ಕೆಎಸ್‌ಆರ್‌ಪಿ-ಐಆರ್‌ಬಿ) ಖಾಲಿ ಇರುವ 70 ರಿಸರ್ವ್ ಸಬ್ ಇನ್‌ಸ್ಪೆಕ್ಟರ್ (ಆರ್‌ಎಸ್‌ಐ) ಹುದ್ದೆಗಳ ಭರ್ತಿಗಾಗಿ ಡಿ. 18ರಂದು ಲಿಖಿತ ಪರೀಕ್ಷೆಗಳು ನಡೆಯಲಿವೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಪೊಲೀಸ್ ನೇಮಕಾತಿ ವಿಭಾಗದ ಡಿಜಿಪಿ ಕಮಲ್ ಪಂತ್, 'ಬೆಳಿಗ್ಗೆ 11ರಿಂದ 12 ಗಂಟೆವರೆಗೆ ಪತ್ರಿಕೆ–1 (ಪ್ರಬಂಧ, ಭಾಷಾಂತರ, ಸಾರಾಂಶ ಬರಹ) ಹಾಗೂ ಮಧ್ಯಾಹ್ನ 2ರಿಂದ 3.30 ಗಂಟೆವರೆಗೆ ಪತ್ರಿಕೆ–2 (ಸಾಮಾನ್ಯ ಅಧ್ಯಯನ) ಪರೀಕ್ಷೆಗಳು ನಡೆಯಲಿವೆ' ಎಂದು ತಿಳಿಸಿದ್ದಾರೆ.

'ರಾಜ್ಯದ 12 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಹುದ್ದೆಗೆ ನೇಮಕಾತಿ ಕೋರಿ ಈಗಾಗಲೇ ಅರ್ಜಿ ಸಲ್ಲಿಸಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು, 'http://ksp-recruitment.in' ಜಾಲತಾಣದ ಮೂಲಕ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು' ಎಂದು ಹೇಳಿದ್ದಾರೆ.



ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ (ಎಡದಿಂದ) ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ದಲಿತ ಸಂಘರ್ಷ ಸಮಿತಿ ಸಂಚಾಲಕ ಎನ್ ವೆಂಕಟೇಶ್, ಡಾ.ಬಿ.ಆರ್.ಅಂಬೇಡ್ಕರ್ ಅವರ ಮೊಮ್ಮಗಳು ರಮಾಬಾಯಿ ತೇಲ್ತುಂಬ್ಡೆ, ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್, ದಲಿತ ಸಂಘರ್ಷ ಸಮಿತಿ ಸಂಚಾಲಕ ಮಾವಳ್ಳಿ ಶಂಕರ್, ಡಿ.ಜಿ ಸಾಗರ್, ಅಣ್ಣಯ್ಯ ಮತ್ತು ಸೋಮಶೇಖರ್ ಅವರು ಅಂಬೇಡ್ಕರ್ ಭಾವಚಿತ್ರ ಮತ್ತು ಬುದ್ಧನ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ/ ರಂಜು ಪಿ.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಒಳ ಮೀಸಲಾತಿ ಅನುಷ್ಠಾನಕ್ಕೆ ತರಬೇಕು. ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಬಿಡುಗಡೆ ಮಾಡಿ ಸಾರ್ವಜನಿಕ ಚರ್ಚೆಗೆ ಅವಕಾಶ ಕಲ್ಪಿಸಿ, ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿ ನಗರದಲ್ಲಿ ಮಂಗಳವಾರ ನಡೆದ 'ದಲಿತರ ಸಾಂಸ್ಕೃತಿಕ ಪ್ರತಿರೋಧ' ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ನೇತೃತ್ವದಲ್ಲಿ ನಡೆದ ಸಮಾವೇಶದಲ್ಲಿ ಒಟ್ಟು 15 ನಿರ್ಣಯಗಳನ್ನು ಅಂಗೀಕರಿಸಲಾಗಿದೆ. ಜಾತಿ ಆಧಾರಿತ ತಾರತಮ್ಯ ಹಾಗೂ ಅಸ್ಪೃಶ್ಯತೆ ಆಚರಣೆಯನ್ನು ಖಂಡಿಸುವ ನಿರ್ಣಯ ಮಾಡಲಾಗಿದೆ. ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳನ್ನು ಎಲ್ಲ ಭಾರತೀಯರು ಸಮಾನವಾಗಿ ಅನುಭವಿಸುವಂತಹ ವಾತಾವರಣ ಕಲ್ಪಿಸಬೇಕು ಎಂದು ಸಮಾವೇಶವು ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಅರ್ಚಕ ಮತ್ತು ಪೌರ ಕಾರ್ಮಿಕ ವೃತ್ತಿಗಳನ್ನು ಸಾರ್ವತ್ರೀಕರಣಗೊಳಿಸಬೇಕು. ಎರಡೂ ವೃತ್ತಿಗಳಲ್ಲಿ ಮೀಸಲಾತಿ ಜಾರಿಗೊಳಿಸಿ, ಸೂಕ್ತ ಪ್ರಾತಿನಿಧ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿ ನಿರ್ಣಯ ಅಂಗೀಕರಿಸಲಾಗಿದೆ.

ನಿರ್ಣಯಗಳಲ್ಲಿರುವ ಆಗ್ರಹಗಳು:

- ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಯೋಜನೆಗೆ ರಾಜ್ಯ ಬಜೆಟ್‌ನ ಒಟ್ಟು ಗಾತ್ರದ ಶೇಕಡ 24.10ರಷ್ಟು ಅನುದಾನವನ್ನು ಕಡ್ಡಾಯವಾಗಿ ಮೀಸಲಿಡಬೇಕು. ಅನ್ಯ ಉದ್ದೇಶಕ್ಕೆ ಈ ಅನುದಾನ ಬಳಸಲು ಅವಕಾಶ ಕಲ್ಪಿಸುವ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆಯ ಸೆಕ್ಷನ್ 7–ಡಿಯನ್ನು ರದ್ದುಗೊಳಿಸಬೇಕು.
- ಕೇಂದ್ರ ಸರ್ಕಾರ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಶೇ 10ರಷ್ಟು ಮೀಸಲಾತಿ ನೀಡಿರುವುದನ್ನು ರದ್ದುಗೊಳಿಸಬೇಕು. ರಾಷ್ಟ್ರೀಯ ಶಿಕ್ಷಣ ನೀತಿ–2022 ಅನ್ನೂ ರದ್ದುಗೊಳಿಸಬೇಕು.
- ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) (ಪಿಟಿಸಿಎಲ್) ಕಾಯ್ದೆಯನ್ನು ಬಲಪಡಿಸಬೇಕು.
- ರಾಜ್ಯ ಸರ್ಕಾರವು ಗೋಹತ್ಯೆ ನಿಷೇಧ ಕಾಯ್ದೆ ಹಾಗೂ ಮತಾಂತರ ನಿಷೇಧ ಕಾಯ್ದೆಗಳಿಗೆ ತಂದಿರುವ ತಿದ್ದುಪಡಿಗಳನ್ನು ತಕ್ಷಣ ರದ್ದುಪಡಿಸಬೇಕು.
- ಭೂ ಸುಧಾರಣಾ ಕಾಯ್ದೆ, ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಸಮಿತಿ ಕಾಯ್ದೆಗಳ ತಿದ್ದುಪಡಿ, ವಿದ್ಯುತ್ ಖಾಸಗೀಕರಣ ಮಸೂದೆ ಮತ್ತು ಕಾರ್ಮಿಕ ಕಾಯ್ದೆ ತಿದ್ದುಪಡಿಗಳನ್ನು ಹಿಂಪಡೆಯಬೇಕು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ರದ್ದುಗೊಳಿಸುವ ನಿರ್ಧಾರ ಕೈಬಿಡಬೇಕು. ಈ ಸಮುದಾಯಗಳ ವಿದ್ಯಾರ್ಥಿಗಳು ಸರ್ಕಾರದ ಸೌಲಭ್ಯ ಪಡೆಯಲು ನಿಗದಿಪಡಿಸಿರುವ ವಾರ್ಷಿಕ ಆದಾಯ ಮಿತಿಯನ್ನು ₹ 10 ಲಕ್ಷಕ್ಕೆ ಹೆಚ್ಚಿಸಬೇಕು.



ಬ್ಯಾನರ್ ವಿಚಾರವಾಗಿ ವಾಗ್ವಾದದಲ್ಲಿ ತೊಡಗಿರುವ ಬಿಜೆಪಿ ಬಣಗಳು

ದಲಿತರ ಒಗ್ಗಟ್ಟು ಪ್ರದರ್ಶನ

ಒಂದನೇ ಪುಟದಿಂದ

'ಒಗ್ಗೂಡಿ ಹೋರಾಡುವುದು ಈ ಹೊತ್ತಿನ ತುರ್ತು. ಸಮಾನಮನಸ್ಕರಾದ ಹತ್ತು ಸಂಘಟನೆಗಳು ಮುಂದೆ ಒಗ್ಗಟ್ಟಿನಿಂದ ಹೋರಾಡುವ ತೀರ್ಮಾನ ಮಾಡಿದ್ದೇವೆ. ಬಂದು ಸೇರುವವರಿಗೆ ಅವಕಾಶವಿದೆ. ಕೋಮುವಾದಿ ಶಕ್ತಿಗಳು ಮತ್ತು ರಾಜಕೀಯ ಪಕ್ಷಗಳ ಜತೆಗಿನ ನಂಟು ಕಡಿದುಕೊಂಡು ಬರುವವರಿಗೆ ಸ್ವಾಗತವಿದೆ' ಎಂದರು. ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಮಹಿಳಾ ಸಂಘಟನೆಗಳ ಪ್ರತಿನಿಧಿಗಳೂ ವೇದಿಕೆಯಲ್ಲಿದ್ದು ಈ ತೀರ್ಮಾನವನ್ನು ಬೆಂಬಲಿಸಿದರು.

'ಹೋರಾಟದ ಮೂಲಕ ಗೌರವ ಸಲ್ಲಿಸಿ'

ಒಂದನೇ ಪುಟದಿಂದ

'ಕೆಲವು ವರ್ಷಗಳಿಂದ ದೇಶದಲ್ಲಿ ಜನರ ಹಕ್ಕುಗಳಿಗೆ ಅಪಾಯ ಎದುರಾಗಿದೆ. ನೌಕರಿ, ವಿದ್ಯಾರ್ಥಿ ವೇತನಕ್ಕೂ ಕುತ್ತು ಬಂದಿದೆ. ಸಂವಿಧಾನವನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಹೋರಾಟವೇ ಮುಖ್ಯ ಎಂದು ಅಂಬೇಡ್ಕರ್ ಹೇಳಿದ್ದಾರೆ. ಮನೆ, ಸಮುದಾಯ, ಸಮಾಜ ಎಲ್ಲ ಹಂತದಲ್ಲೂ ಹೋರಾಟ ಆರಂಭವಾಗಬೇಕು' ಎಂದರು. 'ಆನಂದ್ ತೇಲ್ತುಂಬ್ಡೆಯವರನ್ನು ಜೈಲಿನಲ್ಲಿ ಇರಿಸಿದ್ದ ಸಂಕಷ್ಟದ ದಿನಗಳಲ್ಲಿ ನೀವೆಲ್ಲರೂ ನನ್ನೊಂದಿಗೆ ಇದ್ದಿರಿ. ಅದಕ್ಕಾಗಿ ನಾನು ನಿಮಗೆ ಆಭಾರಿ' ಎಂದು ರಮಾಬಾಯಿ ಕೃತಜ್ಞತೆ ಅರ್ಪಿಸಿದರು.

'ಪರಿಶಿಷ್ಟರ ವಹಿವಾಟಿಗೂ ಕುತ್ತು ಬರಬಹುದು'

ಬೆಂಗಳೂರು: 'ದೇವಸ್ಥಾನಗಳ ಬಳಿ ಮುಸ್ಲಿಮರು ಮಾರಾಟ ಮಾಡಬಾರದು ಎಂದು ನಿರ್ಬಂಧ ಹೇರುವುದು ನಡೆಯುತ್ತಿದೆ. ಈಗ ಬಾಯಿ ಮುಚ್ಚಿಕೊಂಡು ಕುಳಿತರೆ ಪರಿಶಿಷ್ಟರು ಕೂಡ ದೇವಸ್ಥಾನಗಳ ಬಳಿ ತೆಂಗಿನಕಾಯಿ, ಹೂವು ಮಾರಾಟ ಮಾಡುವಂತಿಲ್ಲ ಎನ್ನಬಹುದು' ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಹೇಳಿದರು.

'ಎರಡನೇ ವಿಶ್ವಯುದ್ಧದ ಸಮಯದಲ್ಲಿ ಹಿಟ್ಲರ್‌ನ ನಾಝಿ ಸೈನ್ಯ ಮಾಡುತ್ತಿದ್ದಂತಹ ಕೆಲಸಗಳೇ ಈಗ ನಡೆಯುತ್ತಿವೆ. ಗಳಿಸಿದ್ದನ್ನು ಕಳೆದುಕೊಳ್ಳುವ ಪರಿಸ್ಥಿತಿ ನಮ್ಮೆದುರಿಗೆ ಇದೆ. ಸಂವಿಧಾನವನ್ನು ಕಳೆದುಕೊಂಡರೆ ಅರಾಜಕತೆ ಸೃಷ್ಟಿಯಾಗುವ ಮತ್ತು ಕೋಮುವಾದ ರಾರಾಜಿಸುವ ಅಪಾಯವಿದೆ. ಇಂತಹ ಅಪಾಯಗಳ ವಿರುದ್ಧ ಸಂಘಟಿತ ಹೋರಾಟ ಅಗತ್ಯವಿದೆ' ಎಂದರು.

ಅಂಬೇಡ್ಕರ್ ಅವರಿಗೆ ಸಲಾಂ ಹೊಡೆದರೆ, ಅವರ ಬಗ್ಗೆ ಅಹಂ ಬೆಳೆಸಿಕೊಂಡರೆ ಸಾಕಾಗುವುದಿಲ್ಲ. ಅವರ ಕುರಿತು ಅರಿವು ಪಡೆಯಬೇಕು. ಸಂವಿಧಾನದ ದಾರಿ ಮತ್ತು ಅಂಬೇಡ್ಕರ್ ಮಾರ್ಗದಲ್ಲಿ ಹೋರಾಡಬೇಕು. ಒಬ್ಬೊಬ್ಬರೇ ಮಾತನಾಡಿದರೆ ಸರ್ಕಾರಕ್ಕೆ ಕೇಳಿಸುವುದಿಲ್ಲ. ದಲಿತ ಸಂಘಟನೆಗಳು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಒಂದಾಗಬೇಕು ಎಂದು ಸಲಹೆ ನೀಡಿದರು.

ಬೆಳಗಾವಿ ಪ್ರವೇಶ ವಿಫಲ

ಒಂದನೇ ಪುಟದಿಂದ


ದುಂಡಾವರ್ತನೆ ನಡೆಸಿದ ಆರೋಪದಡಿ 10ರಿಂದ 12 ಕಾರ್ಯಕರ್ತರ ಮೇಲೆ ಹಿರೇಬಾಗೇವಾಡಿ ಪೊಲೀಸರು ಎಫ್‌ಐಆರ್ ಕೂಡ ದಾಖಲಿಸಿದರು.

ಎಂಇಎಸ್ ಕಾರ್ಯಕರ್ತರೂ ವಶಕ್ಕೆ: ಮಹಾರಾಷ್ಟ್ರದ ಸಚಿವರ ಬೆಳಗಾವಿ ಭೇಟಿಗೆ ಜಿಲ್ಲಾಡಳಿತ ನಿಷೇಧ ಹೇರಿದ್ದನ್ನು ಖಂಡಿಸಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟಿಸಿದರು.

ಐದಕ್ಕೂ ಹೆಚ್ಚು ಜನರು ಬಂದಿದ್ದರಿಂದ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಮನವಿ ಸ್ವೀಕರಿಸಲಿಲ್ಲ.

'ಕಚೇರಿ ಆವರಣಕ್ಕೆ ಹೆಚ್ಚಿನ ಕಾರ್ಯಕರ್ತರನ್ನು ಏಕೆ ಬಿಟ್ಟಿದ್ದೀರಿ?' ಎಂದು ಪೊಲೀಸರಿಗೆ ಡಿ.ಸಿ ತರಾಟೆ ತೆಗೆದುಕೊಂಡರು.

ಬೆಳಗಾವಿಗೆ ಹೋಗಿಯೇ ಸಿದ್ಧ: ಸಚಿವ ಶಂಭುರಾಜ್ ದೇಸಾಯಿ



ಬೆಳಗಾವಿ: 'ನಾವು ಬೆಳಗಾವಿಗೆ ಹೋಗುವ ನಿರ್ಧಾರದಿಂದ ಹಿಂದೆ ಸರಿದಿಲ್ಲ. ಕೆಲವೇ ದಿನಗಳಲ್ಲಿ ಅಲ್ಲಿಗೆ ಹೋಗುತ್ತೇವೆ. ಯಾರ ಆದೇಶಕ್ಕೂ ಹೆದರುವ ಜಾಯಮಾನ ನಮ್ಮದಲ್ಲ' ಎಂದು ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವ ಶಂಭುರಾಜ್ ದೇಸಾಯಿ ಹೇಳಿದ್ದಾರೆ.

ಬೆಳಗಾವಿಗೆ ಭೇಟಿ ನೀಡದ ಗಡಿ ಉಸ್ತುವಾರಿ ವಹಿಸಿಕೊಂಡ ಇಬ್ಬರೂ ಸಚಿವರ ವಿರುದ್ಧ ಮಹಾರಾಷ್ಟ್ರದಲ್ಲಿ ಶಿವಸೇನೆ(ಯು) ಕಾರ್ಯಕರ್ತರು ತೀವ್ರ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, 'ಡಾ.ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನದ ಸಂದರ್ಭದಲ್ಲಿ ಯಾವುದೇ ಗಲಾಟೆ ಆಗಬಾರದು, ಅಪಾಯ ಸಂಭವಿಸಬಾರದು ಎಂಬ ಕಾರಣಕ್ಕೆ ಮಂಗಳವಾರದ ಬೆಳಗಾವಿ ಪ್ರವಾಸ ಮುಂದೂಡಿದ್ದೇವೆ. ಶೀಘ್ರದಲ್ಲೇ ಅಲ್ಲಿಗೆ ಕಾಲಿಡುತ್ತೇವೆ. ಇದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ' ಎಂದೂ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ.

ಆಗ, ಕಾರ್ಯಕರ್ತರು ಪ್ರತಿಭಟನೆಗೆ ಮುಂದಾದರು. ಮಾಜಿ ಶಾಸಕ ಮನೋಹರ ಕಿಣೇಕರ್, ಮಾಳೋಜಿರಾವ್ ಅಷ್ಟೇಕರ್, ಶುಭಂ ಶೆಳಕೆ, ಸುಧೀರ ಚವ್ಹಾಣ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬ್ಯಾನರ್ ಕಟ್ಟಲು ಬಿಜೆಪಿ ಬಣಗಳ ಜಟಾಪಟಿ

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು ಜಿಲ್ಲೆ): ಪಟ್ಟಣದಲ್ಲಿ ಬುಧವಾರ ಬಿಜೆಪಿ ಹಮ್ಮಿಕೊಂಡಿರುವ ಜನಸಂಕಲ್ಪ ಯಾತ್ರೆಗೂ ಮುನ್ನವೇ ಪಕ್ಷದಲ್ಲಿನ ಭಿನ್ನಮತ ಸ್ಫೋಟಿಸಿದೆ. ಬ್ಯಾನರ್ ಕಟ್ಟುವ ಕುರಿತು ಪಕ್ಷದ ಎರಡು ಗುಂಪುಗಳು ಕಿತ್ತಾಡಿಕೊಂಡವು.

ಸಮಾವೇಶದ ಬ್ಯಾನರ್ ಕಟ್ಟುವ ವಿಚಾರವಾಗಿ ಸ್ಥಳೀಯ ಮುಖಂಡರಾದ ರಾಜೇಶ್‌ಗೌಡ ಹಾಗೂ ಡಿ.ಕೃಷ್ಣಕುಮಾರ್ ಅವರ ಬೆಂಬಲಿಗರು ಮಂಗಳವಾರ ರಸ್ತೆಯಲ್ಲಿಯೇ ಪರಸ್ಪರ ನಿಂದಿಸಿ, ತಳ್ಳಾಡಿಕೊಂಡರು.

ತುಮಕೂರು ರಸ್ತೆಯ ದೊಡ್ಡಕೆರೆ ಏರಿ ಬಳಿ ರಾಜೇಶ್‌ಗೌಡ ಅವರ ಬೆಂಬಲಿಗರು 'ಜನಸಂಕಲ್ಪ' ಯಾತ್ರೆ ಮತ್ತು ಪಕ್ಷದ ನಾಯಕರಿಗೆ ಸ್ವಾಗತ ಕೋರುವ ಬ್ಯಾನರ್ ಕಟ್ಟುತ್ತಿದ್ದರು. ಇದನ್ನು ಗಮನಿಸಿದ ಕೃಷ್ಣಕುಮಾರ್ ಬೆಂಬಲಿಗರು ಅದನ್ನು ತಡೆದಿದ್ದಾರೆ.

'ಹಲವು ವರ್ಷಗಳಿಂದ ಪಕ್ಷ ಸಂಘಟಿಸಿಕೊಂಡು ಬಂದಿದ್ದೇವೆ. ಕಾರ್ಯಕ್ರಮದ ಎಲ್ಲವನ್ನೂ ಕೃಷ್ಣಕುಮಾರ್ ನೋಡಿಕೊಂಡಿದ್ದಾರೆ. ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ಯಡಿಯೂರಪ್ಪ ಅವರನ್ನು ನಾವು ಕರೆಸುತ್ತಿದ್ದೇವೆ. ನೀವೇಕೆ ಬ್ಯಾನರ್ ಕಟ್ಟುತ್ತಿದ್ದೀರಿ' ಎಂದು ತಗಾದೆ ತೆಗೆದರು.

ಇದಕ್ಕೆ ರಾಜೇಶ್‌ಗೌಡ ಬೆಂಬಲಿಗರು ಪ್ರತಿರೋಧ ಒಡ್ಡಿದರು. ಒಂದು ಗುಂಪು ಬ್ಯಾನರ್ ಕಿತ್ತು ಎಸೆಯಿತು. ಕೈ, ಕೈ ಮಿಲಾಯಿಸಿದ ಉಭಯ ಬಣಗಳ ಸದಸ್ಯರು ಮತ್ತಷ್ಟು ಬೆಂಬಲಿಗರನ್ನು ಸ್ಥಳಕ್ಕೆ ಕರೆಸಿಕೊಂಡರು. ಸ್ಥಳಕ್ಕೆ ಬಂದ ಪೊಲೀಸರು ಲಾಠಿ ಬೀಸಿ ಎಲ್ಲರನ್ನೂ ಚದುರಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬಸ್‌ಗಳ ಮೇಲೆ 'ಜೈ ಮಹಾರಾಷ್ಟ್ರ'

ಒಂದನೇ ಪುಟದಿಂದ

ಬೊಮ್ಮಾಯಿ ಜತೆ ಫಡಣವೀಸ್ ಮಾತುಕತೆ: ಮಹಾರಾಷ್ಟ್ರದಿಂದ ಕರ್ನಾಟಕ ಪ್ರವೇಶಿಸುವ ವಾಹನಗಳ ಮೇಲೆ ಕೆಲವರು ಕಲ್ಲು ತೂರಾಟ ನಡೆಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ಈ ಸಂಬಂಧ ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದಾರೆ.

'ಮಾತುಕತೆ ವೇಳೆ, ಹಿರೇಬಾಗೇವಾಡಿಯ ಘಟನೆಯ ಬಗ್ಗೆ ಫಡಣವೀಸ್ ಅವರು ಬೇಸರ ವ್ಯಕ್ತಪಡಿಸಿದ್ದಾರೆ' ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

'ಕಲ್ಲು ತೂರಾಟ ನಡೆಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಹಾಗೂ ಮಹಾರಾಷ್ಟ್ರದಿಂದ ಕರ್ನಾಟಕ ಪ್ರವೇಶಿಸುವ ವಾಹನಗಳಿಗೆ ಸೂಕ್ತ ರಕ್ಷಣೆ ಒದಗಿಸಲಾಗುವುದು ಎಂಬುದಾಗಿ ಬೊಮ್ಮಾಯಿ ಅವರು ಫಡಣವೀಸ್ ಅವರಿಗೆ ಭರವಸೆ ನೀಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿಯ ಟೋಲ್‌ಬೂತ್ ಬಳಿ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಪ್ರವೇಶಿಸುತ್ತಿದ್ದ ವಾಹನಗಳ ಮೇಲೆ ಕೆಲವರು ಕಲ್ಲು ತೂರಾಟ ನಡೆಸುತ್ತಿರುವ ದೃಶ್ಯಗಳು ವಿಡಿಯೊದಲ್ಲಿವೆ ಎನ್ನಲಾಗಿದೆ.

24 ಗಂಟೆಯೊಳಗೆ ದಾಳಿ ತಡೆಯಿರಿ: ಪವಾರ್

ಒಂದನೇ ಪುಟದಿಂದ

'ಉಭಯ ರಾಜ್ಯಗಳ ಗಡಿಯಲ್ಲಿ ನಿರ್ಮಾಣವಾಗಿರುವ ಪರಿಸ್ಥಿತಿಯನ್ನು ಅವಲೋಕಿಸಿದಾಗ, ಈ ವಿಷಯವಾಗಿ ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಬೇಕಾದ ಸಮಯ ಬಂದಿದೆ' ಎಂದು ಅವರು ಪ್ರತಿಪಾದಿಸಿದರು.

'ಗಡಿ ವಿಷಯದಲ್ಲಿ ಸಹನೆಯಿಂದ ಇರಬೇಕು ಎಂಬುದು ಮಹಾರಾಷ್ಟ್ರದ ನಿಲುವು. ಈಗಲೂ ರಾಜ್ಯದ್ದು ಇದೇ ನಿಲುವಾಗಿದೆ. ಆದರೆ, ಅದಕ್ಕೂ ಒಂದು ಮಿತಿ ಇರುತ್ತದೆ' ಎಂದ ಅವರು, 'ನಮ್ಮ ಸಹನೆಯ ಕಟ್ಟೆಯೊಡೆದರೆ ಮುಂದಾಗುವ ಪರಿಣಾಮಗಳಿಗೆ ಕರ್ನಾಟಕ ಮುಖ್ಯಮಂತ್ರಿ ಬೊಮ್ಮಾಯಿ ಅವರೇ ಹೊಣೆಯಾಗಬೇಕಾಗುತ್ತದೆ' ಎಂದರು.

'ನಾನು ಮತ್ತು ಮಹಾ ವಿಕಾಸ್ ಆಘಾಡಿ ಮೈತ್ರಿಕೂಟದ ಅಂಗಪಕ್ಷಗಳ ಮುಖಂಡರು ಬೆಳಗಾವಿಗೆ ಭೇಟಿ ನೀಡಿ, ಎಂಇಎಸ್ ಕಾರ್ಯಕರ್ತರಲ್ಲಿ ಧೈರ್ಯ ತುಂಬುವ ಕೆಲಸ ಮಾಡಲಿದ್ದೇವೆ' ಎಂದು ಪವಾರ್ ತಿಳಿಸಿದರು.

'ಬೆಳಗಾವಿಯಲ್ಲಿರುವ ಎಂಇಎಸ್‌ನ ಕೆಲ ಕಾರ್ಯಕರ್ತರು ನನ್ನ ಜೊತೆ ಮಾತನಾಡಿದರು. ತಮ್ಮ ಕಚೇರಿಗಳ ಹೊರಗೆ ಪೊಲೀಸರು ಬೀಡುಬಿಟ್ಟಿದ್ದು, ಮಹಾರಾಷ್ಟ್ರಕ್ಕೆ ಸಂಪರ್ಕಿಸುವ ರಸ್ತೆಗಳಲ್ಲಿ ನಾಕಾಬಂದಿ ಹಾಕಿದ್ದಾಗಿ ದೂರಿದ್ದಾರೆ' ಎಂದು ತಿಳಿಸಿದರು.

'ಗುಜರಾತ್ ಫಲಿತಾಂಶ ರಾಜ್ಯದಲ್ಲೂ ಪ್ರತಿಫಲನ'

ಬೆಂಗಳೂರು: ಗುಜರಾತ್ ಚುನಾವಣೋತ್ತರ ಸಮೀಕ್ಷೆ ಬಿಜೆಪಿಗೆ ಬಲ ತಂದಿದೆ. ಫಲಿತಾಂಶ ರಾಜ್ಯದ ಮೇಲೂ ಒಳ್ಳೆಯ ಪರಿಣಾಮ ಬೀರಲಿದ್ದು, ಮುಂದಿನ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದು ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಒಳ್ಳೆಯ ಆಡಳಿತ, ಅಭಿವೃದ್ಧಿ ಕಾರ್ಯಗಳನ್ನು ಜನರು ಬೆಂಬಲಿಸುತ್ತಾರೆ. ಸುಳ್ಳು, ರಾಜಕೀಯ ಪ್ರೇರಿತ ಆರೋಪಗಳಿಗೆ ಬೆಂಬಲವಿಲ್ಲ ಎನ್ನುವುದು ಗುಜರಾತ್ ಹಾಗೂ ಹಿಮಾಚಲ ಪ್ರದೇಶ ಚುನಾವಣೆ ಸಾಬೀತುಪಡಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವಕ್ಕೆ ಇಡೀ ಭಾರತ ಬೆಂಬಲ ನೀಡುತ್ತಿದೆ. ಇದು ಸಕಾರಾತ್ಮಕ, ಅಧಿಕಾರ ಪರ ಮತದಾರರ ತೀರ್ಪು. ಜನರ ಪ್ರಬಲ ನಂಬಿಕೆಯ ಪ್ರತೀಕ ಎಂದು ಬಣ್ಣಿಸಿದರು.

'ನಮ್ಮ ಗಡಿ, ಜನರ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಚುನಾವಣೆ ಕಾರಣಕ್ಕಾಗಿ ಮಹಾರಾಷ್ಟ್ರ ಸಚಿವರು ಬಂದಿಲ್ಲ ಎನ್ನುವುದು ಸತ್ಯಕ್ಕೆ ದೂರ. ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣವಿದ್ದು, ಕಾನೂನು ಸಮರ ಗೆಲ್ಲುವ ವಿಶ್ವಾಸವಿದೆ' ಎಂದರು.



ಪ್ರಶಸ್ತಿ ಪುರಸ್ಕೃತ ಕ್ರೀಡಾಪಟುಗಳ ಜತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ, ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದ ರಾಜ್, ಶಾಸಕ ರಿಜ್ವಾನ್ ಅರ್ಷದ್ ಇದ್ದರು

ಗ್ರಾಮ ಲೆಕ್ಕಿಗ ಇನ್ನು ಮುಂದೆ 'ಗ್ರಾಮ ಆಡಳಿತ ಅಧಿಕಾರಿ'

ಬೆಂಗಳೂರು: ಗ್ರಾಮ ಲೆಕ್ಕಿಗರ ಹುದ್ದೆಯ ಹೆಸರನ್ನು 'ಗ್ರಾಮ ಆಡಳಿತ ಅಧಿಕಾರಿ' ಎಂದು ಬದಲಿಸಲಾಗಿದೆ. ಆದರೆ, ಹುದ್ದೆಯ ವೇತನ ಶ್ರೇಣಿ, ನೇಮಕಾತಿ ವಿಧಾನ, ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಕಂದಾಯ ಸಚಿವರು ಪದನಾಮವನ್ನು ಗ್ರಾಮ ಆಡಳಿತ ಅಧಿಕಾರಿ ಎಂದು ಬದಲಾಯಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದರು.

18ರ ಬಳಿಕ ರಾಜಕೀಯದ ಮಾತು: ಜನಾರ್ದನ ರೆಡ್ಡಿ

ಗಂಗಾವತಿ (ಕೊಪ್ಪಳ ಜಿಲ್ಲೆ): ನಗರದಲ್ಲಿ ಮನೆ ಖರೀದಿಸಿರುವ ಮಾಜಿ ಸಚಿವ ಜನಾರ್ದನ ರೆಡ್ಡಿ ಮಂಗಳವಾರ ನಗರಸಭೆಯ ಬಿಜೆಪಿ ಸದಸ್ಯ ರಮೇಶ ಚೌಡ್ಕಿ ಮತ್ತು ಹಲವು ಮುಖಂಡರ ಮನೆಗೆ ಭೇಟಿ ನೀಡಿದ್ದರು. ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, 'ಗಂಗಾವತಿಯಲ್ಲೇ ಮನೆ ಖರೀದಿಗೆ ಕಾರಣ ಮತ್ತು ಮುಂದಿನ ರಾಜಕೀಯ ನಡೆ ಬಗ್ಗೆ ಡಿ. 18ರ ನಂತರ ಮಾತನಾಡುವೆ' ಎಂದರು.

'ಕ್ರೀಡಾಪಟುಗಳಿಗೆ ನೇರ ನೇಮಕಾತಿಯಡಿ ಉದ್ಯೋಗ'

ಒಂದನೇ ಪುಟದಿಂದ

ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್ ಪದಕ ವಿಜೇತ ರಾದ ಪದವೀಧರರಿಗೆ ಗ್ರೂಪ್ 'ಬಿ' ಉದ್ಯೋಗ, ಇದಕ್ಕಿಂತ ಕಡಿಮೆ ಸ್ತರದ ಕ್ರೀಡಾಕೂಟದ ಪದಕ ವಿಜೇತರಿಗೆ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ಉದ್ಯೋಗ ನೀಡಲಾಗುವುದು ಎಂದರು.

ಕರ್ನಾಟಕ ರಾಜ್ಯ ಒಲಿಂಪಿಕ್ಸ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದ ರಾಜ್, 'ಕ್ರೀಡಾಪಟುಗಳಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಇಲ್ಲವಾದರೆ ವಲಸೆ ಹೋಗುತ್ತಾರೆ' ಎಂದು ಹೇಳಿದರು. ಇದಕ್ಕೆ ಲಘು ಧಾಟಿಯಲ್ಲಿ ತಿರುಗೇಟು ನೀಡಿದ ಬೊಮ್ಮಾಯಿ, 'ಈ ಕೆಲಸ ನಿಮ್ಮ ಸರ್ಕಾರದ ಅವಧಿಯಲ್ಲಿ ಮಾಡಿಸಬಹುದಿತ್ತು. ಆಗ ನೀವು ಮಾತನಾಡಲಿಲ್ಲ. ಇದನ್ನು ಮಾಡಲು ನಮ್ಮ ಸರ್ಕಾರ ಬರಬೇಕಾಯಿತು' ಎಂದರು.

ಅಮೃತ ದತ್ತು ಯೋಜನೆಯಲ್ಲಿ ರಾಜ್ಯದಲ್ಲಿ 75 ಕ್ರೀಡಾಪಟುಗಳಿಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸಜ್ಜುಗೊಳಿಸಲು ತರಬೇತಿ ನೀಡಲಾಗುತ್ತಿದೆ. ಉತ್ತಮ ತರಬೇತಿದಾರರಿಂದ ತರಬೇತಿ ಕೊಡಿಸಲಾಗುತ್ತಿದೆ. ಅವಶ್ಯಕತೆಗೆ ತಕ್ಕಂತೆ ಇನ್ನೂ ಹೆಚ್ಚಿನ ಅನುದಾನ ಒದಗಿಸಲಾಗುವುದು ಎಂದು ಬೊಮ್ಮಾಯಿ ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ರಾಜ್ಯ ಸರ್ಕಾರ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು.

ಕರ್ನಾಟಕ ಸೇರಿ ಹಲವು ರಾಜ್ಯಗಳ 14,190 ಸಂತ್ರಸ್ತೆಯರು • 17 ಮಂದಿ ಬಂಧನ

ಬೃಹತ್ ವೇಶ್ಯಾವಾಟಿಕೆ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ವೇಶ್ಯಾವಾಟಿಕೆ ನಡೆಸುತ್ತಿದ್ದ ಸಂಘಟಿತವಾದ ಬೃಹತ್ ಜಾಲವೊಂದನ್ನು ಸೈಬರಾಬಾದ್ ಪೊಲೀಸರು ಭೇದಿಸಿದ್ದಾರೆ. ಈ ವೇಶ್ಯಾವಾಟಿಕೆ ಜಾಲದಲ್ಲಿ ಕರ್ನಾಟಕ, ಪಶ್ಚಿಮ ಬಂಗಾಳ ಸೇರಿದಂತೆ ದೇಶದ ವಿವಿಧ ರಾಜ್ಯಗಳ 14,190 ಸಂತ್ರಸ್ತೆಯರು ಸಿಲುಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಜಾಲವು ಎಂಡಿಎಂಎ ಎನ್ನುವ ಮಾದಕವಸ್ತುವಿನ ಬಳಕೆ ಸೇರಿದಂತೆ ಅನೇಕ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿತ್ತು ಎಂದು ಪೊಲೀಸರು ಆರೋಪಿಸಿದ್ದಾರೆ. ಮಾನವಕಳ್ಳ ಸಾಗಣೆ ತಡೆ ಕಾಯ್ದೆ 1956ರ ಅನ್ವಯ 17 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ 34 ಮೊಬೈಲ್, ಮೂರು ಕಾರುಗಳು, ಒಂದು ಲ್ಯಾಪ್‌ಟಾಪ್ ಹಾಗೂ 2.5 ಗ್ರಾಂ ಎಂಡಿಎಂಎ ಮಾದಕವಸ್ತು ವಶಪಡಿಸಿಕೊಳ್ಳಲಾಗಿದೆ.

17 ಮಂದಿ ಬಂಧಿತರಲ್ಲಿ, ಮೊಹಮ್ಮದ್ ಅದೀಮ್, ಮೊಹಮ್ಮದ್ ಸಮೀರ್, ಹರ್ಬಿಂದರ್ ಕೌರ್, ಮೊಹಮ್ಮದ್ ಸಲ್ಮಾನ್ ಖಾನ್, ಮೊಹಮ್ಮದ್ ಅಬ್ದುಲ್ ಕರೀಮ್, ಎರಸಾಗಿ ಯೋಗೇಶ್ವರ್ ರಾವ್ ಸೇರಿದ್ದಾರೆ. ಕೆಲವು ವಾರಗಳ ಹಿಂದೆ ಪೊಲೀಸರು ಈ ಎಲ್ಲಾ ಆರೋಪಿಗಳನ್ನು ಬಂಧಿಸಿದ್ದರು. ಇವರೊಂದಿಗೆ ಹೈದರಾಬಾದ್‌ನ ಪ್ರಖ್ಯಾತ ಹೋಟೆಲ್‌ವೊಂದರ ಮ್ಯಾನೇಜರ್ ರಮೇಶ್ ಎಂಬುವವರನ್ನು ಮಂಗಳವಾರ ಪೊಲೀಸರು ಬಂಧಿಸಿದ್ದಾರೆ.

'ಬಂಧಿತರ ಮೇಲೆ ವೇಶ್ಯಾವಾಟಿಕೆ ನಡೆಸಿದ ಆರೋಪದ ಹಲವು ಪ್ರಕರಣಗಳು ಈಗಾಗಲೇ ಇವೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಜಾಹೀರಾತು ಮೂಲಕ ಗಿರಾಕಿಗಳಿಗೆ ಗಾಳ: 'ಆರೋಪಿಗಳು ವೆಬ್‌ಸೈಟ್‌ಗಳ ಮೂಲಕ ಜಾಹೀರಾತು ನೀಡುತ್ತಿದ್ದರು. ನಂತರ, ಕಾಲ್ ಸೆಂಟರ್‌ಗಳ ಮೂಲಕ ಗಿರಾಕಿಗಳನ್ನು ಸಂಪರ್ಕಿಸಲಾಗುತ್ತಿತ್ತು. ವ್ಯವಹಾರ ಕೂಡಿಬಂದರೆ, ಗಿರಾಕಿಗಳನ್ನು ಹಾಗೂ ಸಂತ್ರಸ್ತೆಯರನ್ನು ಜಾಲ ನಡೆಸುತ್ತಿದ್ದವರು ಹೋಟೆಲ್ ಕೊಠಡಿಗಳಿಗೆ ಕರೆದೊಯ್ಯುತ್ತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಬೆಂಗಳೂರು, ನವದೆಹಲಿ, ಹೈದರಾಬಾದ್‌ಗಳಲ್ಲಿ ಕಾಲ್ ಸೆಂಟರ್‌ಗಳು ಕೆಲಸ ಮಾಡುತ್ತಿದ್ದವು. ಫೋನ್‌ಪೇ, ಪೇಟಿಎಂ ಮೂಲಕ ಗಿರಾಕಿಗಳಿಂದ ಹಣ ಪಡೆದುಕೊಳ್ಳಲಾಗುತ್ತಿತ್ತು. ಇದರಲ್ಲಿ ಶೇ 30ರಷ್ಟನ್ನು ಸಂತ್ರಸ್ತೆಯರಿಗೆ ನೀಡಲಾಗುತ್ತಿತ್ತು. ಉಳಿದ ಶೇ 35ರಷ್ಟು ಜಾಹೀರಾತಿಗೆ ಹಾಗೂ ಕಾಲ್ ಸೆಂಟರ್‌ಗಳಲ್ಲಿ ಕೆಲಸ ಮಾಡುವವರಿಗೆ ಮತ್ತು ಶೇ 35ರಷ್ಟು ಜಾಲ ನಡೆಸುತ್ತಿದ್ದವರ ನಡುವೆ ಹಂಚಿಕೆಯಾಗುತ್ತಿತ್ತು' ಎಂದು ಪೊಲೀಸರು ಹೇಳಿದ್ದಾರೆ.

'Locanto, Skokka, Hyderabadescorts, callgirlsinHyderabad, Luxuryescortservices, myheavenmodels, natasharoy.in. ಎಂಬ ಈ ಕೆಲವು ವೆಬ್‌ಸೈಟ್‌ಗಳ ಮೂಲಕ ವೇಶ್ಯಾವಾಟಿಕೆಯನ್ನು ನಡೆಸಲಾಗುತ್ತಿತ್ತು' ಎಂದರು.

ಸಂಘಟಿತ ಕೃತ್ಯ: 'ವಿಚಾರಣೆ ನಡೆಸಿದಾಗ ಆರೋಪಿಗಳಿಂದ ಹಲವು ವಿಚಾರಗಳು ಹೊರಬಂದಿವೆ. ವಾಟ್ಸ್‌ಆ್ಯಪ್ ಮೂಲಕ ವಿವಿಧ ರಾಜ್ಯಗಳಲ್ಲಿ ಅಸಂಖ್ಯ ದಲ್ಲಾಳಿಗಳು ಕೆಲಸ ಮಾಡುತ್ತಿದ್ದರು. ಜೊತೆಗೆ ಇಡೀ ಜಾಲವನ್ನು ಸಂಘಟಿಸಿದವರು, ಪೂರೈಕೆದಾರರು, ಜಾಹೀರಾತು ನೀಡುವವರು, ವೆಬ್‌ಸೈಟ್‌ನವರು ಮತ್ತು ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುವವರು ಹೀಗೆ ಎಲ್ಲರೂ ಪ್ರತ್ಯೇಕ ವಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸಿಕೊಂಡಿದ್ದರು.

ಮುಖ್ಯಾಂಶಗಳು

- ವೆಬ್‌ಸೈಟ್‌ನಲ್ಲಿ ಜಾಹೀರಾತು
- ಫೋನ್‌ಪೇ. ಪೇಟಿಎಂ ಮೂಲಕ ಹಣ ವಸೂಲಿ

ಸೈಬರಾಬಾದ್, ಹೈದರಾಬಾದ್ ಕಮಿಷನರೇಟ್ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಮಾನವಕಳ್ಳಸಾಗಣೆ, ವೇಶ್ಯಾವಾಟಿಕೆಯ ಶೇ 70ರಷ್ಟು ಪ್ರಕರಣಗಳಲ್ಲಿ ಬಂಧಿತರ ಕೈವಾಡವಿದೆ

ಸ್ಟೀಫಲ್ ರವೀಂದ್ರನ್, ಸೈಬರಾಬಾದ್ ಪೊಲೀಸ್ ಆಯುಕ್ತ

ಸಂತ್ರಸ್ತೆಯರಿಗೆ ವಿಲಾಸಿ ಜೀವನದ ಆಮಿಷ

'ಐಷಾರಾಮಿ ಜೀವನ, ಸುಲಭವಾಗಿ ದುಡ್ಡು ಮಾಡುವ, ಉದ್ಯೋಗ ಕೊಡಿಸುವ ಆಮಿಷ ತೋರಿಸಿ, ಯುವತಿಯರನ್ನು, ಮಹಿಳೆಯರನ್ನು ವೇಶ್ಯಾವಾಟಿಕೆ ಜಾಲದಲ್ಲಿ ಸಿಕ್ಕಿಸಲಾಗುತ್ತಿತ್ತು' ಎಂದು ಸೈಬರಾಬಾದ್ ಪೊಲೀಸರು ವಿವರಿಸಿದರು.

'ಯುವತಿಯರನ್ನು ಪೂರೈಕೆ ಮಾಡುವ ವ್ಯಕ್ತಿ (ಬ್ರೋಕರ್) ಮೊದಲು ಸಂತ್ರಸ್ತೆಯನ್ನು ಭೇಟಿ ಮಾಡುತ್ತಿದ್ದ. ನಂತರ ಸಂತ್ರಸ್ತೆಯರ ಫೋಟೊಗಳನ್ನು ಜಾಲ ನಡೆಸುತ್ತಿದ್ದವರ ವಾಟ್ಸ್‌ಆ್ಯಪ್ ಗ್ರೂಪ್‌ಗಳಿಗೆ ಹಾಕುತ್ತಿದ್ದ. ಜಾಲ ನಡೆಸುತ್ತಿದ್ದವರಿಗೆ ಫೋಟೊಗಳು ಒಪ್ಪಿಗೆಯಾದರೆ, ಸಂತ್ರಸ್ತೆಯರಿಗೆ ಹೋಟೆಲ್ ಕೊಠಡಿಗಳನ್ನು, ವಿಮಾನದ ಟಿಕೆಟ್‌ಗಳನ್ನು ಮಾಡಿಸುತ್ತಿದ್ದರು' ಎಂದರು.

'ಸಂತ್ರಸ್ತೆಯರು ಹೋಟೆಲ್ ತಲುಪಿದ ಮೇಲೆ, ಜಾಲ ನಡೆಸುತ್ತಿದ್ದವರು ಎಲ್ಲಾ ವೆಬ್‌ಸೈಟ್, ವಾಟ್ಸ್‌ಆ್ಯಪ್ ಗ್ರೂಪ್‌ಗಳಿಗೆ ಸಂತ್ರಸ್ತೆಯರ ಫೋಟೊಗಳನ್ನು ಹಾಕುತ್ತಿದ್ದರು. ಜಾಹೀರಾತುಗಳನ್ನೂ ನೀಡಲಾಗುತ್ತಿತ್ತು. ಜಾಹೀರಾತು ನೋಡಿದ ಗಿರಾಕಿಗಳು ವಾಟ್ಸ್‌ಆ್ಯಪ್ ಸಂಖ್ಯೆಗೆ ಸಂದೇಶ ಕಳುಹಿಸುತ್ತಿದ್ದರು. ನಂತರ, ಕಾಲ್ ಸೆಂಟರ್ ವ್ಯಕ್ತಿಯು ಈ ಗಿರಾಕಿಗಳಿಗೆ ಕರೆ ಮಾಡುತ್ತಿದ್ದರು ಮತ್ತು ಹೋಟೆಲ್‌ಗಳ ವಿಳಾಸವನ್ನು ನೀಡುತ್ತಿದ್ದರು' ಎಂದರು.

ಶೇ 50ರಷ್ಟು ಸಂತ್ರಸ್ತೆಯರು ಬಂಗಾಳದವರು

'ಈ ಜಾಲದಲ್ಲಿ ಸಿಲುಕಿಕೊಂಡ ಶೇ 50ರಷ್ಟು ಸಂತ್ರಸ್ತೆಯರು ಪಶ್ಚಿಮ ಬಂಗಾಳದವರು. ಶೇ 20ರಷ್ಟು ಕರ್ನಾಟಕ, ಶೇ 15ರಷ್ಟು ಮಹಾರಾಷ್ಟ್ರ ಹಾಗೂ ಶೇ 7ರಷ್ಟು ದೆಹಲಿಯವರಾಗಿದ್ದಾರೆ. ಭಾರತದವರಲ್ಲದೆ, ಶೇ 3ರಷ್ಟು ಸಂತ್ರಸ್ತೆಯರು ಬಾಂಗ್ಲಾದೇಶ, ನೇಪಾಳ, ಥಾಯ್ಲೆಂಡ್, ಉಜ್ಬೆಕಿಸ್ತಾನ್, ರಷ್ಯಾಕ್ಕೆ ಸೇರಿದವರಾಗಿದ್ದಾರೆ' ಎಂದು ಸೈಬರಾಬಾದ್ ಪೊಲೀಸರು ತಿಳಿಸಿದರು.

'₹1 ಲಕ್ಷಕ್ಕೆ ಪದವಿ, ₹20 ಲಕ್ಷಕ್ಕೆ ಪಿಎಚ್‌ಡಿ ಮಾರಾಟ'

ಒಂದನೇ ಪುಟದಿಂದ

'ದೂರ ಶಿಕ್ಷಣದ ಮೂಲಕ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಪಿಎಚ್‌ಡಿ ಪಡೆಯಬಹುದೆಂದು ವೆಂಕಟೇಶ್ವರ ಇನ್‌ಸ್ಟಿಟ್ಯೂಟ್ ಹೆಸರಿನಲ್ಲಿ ಜಾಹೀರಾತು ನೀಡಲಾಗುತ್ತಿತ್ತು. ಅದನ್ನು ನಂಬಿ ವಿದ್ಯಾರ್ಥಿಗಳು, ಇನ್‌ಸ್ಟಿಟ್ಯೂಟ್ ಸಿಬ್ಬಂದಿಯನ್ನು ಸಂಪರ್ಕಿಸುತ್ತಿದ್ದರು. ₹ 1 ಲಕ್ಷದಿಂದ ₹ 20 ಲಕ್ಷದವರೆಗೂ ಹಣ ಪಡೆಯುತ್ತಿದ್ದ ಆರೋಪಿಗಳು, ನಕಲಿ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ನೀಡಿ ವಿದ್ಯಾರ್ಥಿಗಳನ್ನು ವಂಚಿಸುತ್ತಿದ್ದರೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.

ಯುವಕನ ದೂರು: 'ಪಿಯುಸಿ ಮುಗಿಸಿದ್ದ ನಗರದ ಯುವಕನೊಬ್ಬ, ಜಾಲತಾಣದ ಮೂಲಕ ಇನ್‌ಸ್ಟಿಟ್ಯೂಟ್ ಸಿಬ್ಬಂದಿಯನ್ನು ಸಂಪರ್ಕಿಸಿದ್ದರು. ದೂರ ಶಿಕ್ಷಣದ ಮೂಲಕ ಬಿ.ಕಾಂ ಪದವಿ ಪಡೆಯಬೇಕೆಂದು ಹೇಳಿದ್ದರು. ಪರೀಕ್ಷೆ ಇಲ್ಲದೇ ಅಂಕಪಟ್ಟಿ ನೀಡುವುದಾಗಿ ಹೇಳಿದ್ದ ಆರೋಪಿಗಳು, ಯುವಕನಿಂದ ₹ 40 ಸಾವಿರ ಪಡೆದಿದ್ದರು' ಎಂದು ತಿಳಿಸಿದರು.

'ಯುವಕನಿಗೆ ಬಿ.ಕಾಂ ಮೊದಲ ಹಾಗೂ ಎರಡನೇ ವರ್ಷದ ಅಂಕಪಟ್ಟಿ ನೀಡಿದ್ದರು. ಕೊನೆ ವರ್ಷದ ಅಂಕಪಟ್ಟಿ ಕೇಳಿದಾಗ, ಮತ್ತಷ್ಟು ಹಣ ಕೇಳಿದ್ದರು. ಅನುಮಾನಗೊಂಡ ಯುವಕ, ಅಂಕಪಟ್ಟಿ ಬಗ್ಗೆ ಪರಿಶೀಲಿಸಿದಾಗ ನಕಲಿ ಎಂಬುದು ಗೊತ್ತಾಗಿತ್ತು. ಬಳಿಕವೇ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು. ತನಿಖೆಯನ್ನು ಸಿಸಿಬಿ ಪೊಲೀಸರಿಗೆ ವಹಿಸಲಾಗಿತ್ತು' ಎಂದು ಹೇಳಿದರು.

ಮೂರು ಕಡೆ ದಾಳಿ, ಪರಿಶೀಲನೆ: 'ಮಹಾಲಕ್ಷ್ಮಿ ಲೇಔಟ್, ಮಾರತ್ತಹಳ್ಳಿ ಹಾಗೂ ಕೊಡಿಗೇಹಳ್ಳಿಯಲ್ಲಿರುವ ವೆಂಕಟೇಶ್ವರ ಇನ್‌ಸ್ಟಿಟ್ಯೂಟ್ ಕಚೇರಿಗಳ ಮೇಲೆ ಸಿಸಿಬಿಯ ಮೂರು ಪ್ರತ್ಯೇಕ ತಂಡಗಳು ದಾಳಿ ಮಾಡಿದ್ದವು' ಎಂದು ಪ್ರತಾಪ್ ರೆಡ್ಡಿ ತಿಳಿಸಿದರು.

'ನಕಲಿ ಅಂಕಪಟ್ಟಿಗಳನ್ನು ಆರೋಪಿಗಳು ಕಚೇರಿಯಲ್ಲೇ ತಯಾರಿಸುತ್ತಿದ್ದರು. ಇದಕ್ಕಾಗಿ ವಿಶ್ವವಿದ್ಯಾಲಯಗಳ ಮುದ್ರೆಗಳನ್ನು ಬಳಸುತ್ತಿದ್ದರು. ಎಸ್ಸೆಸ್ಸೆಲ್ಸಿ, ಪಿಯುಸಿ, ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿಬಿಎ, ಎಂಜಿನಿಯರಿಂಗ್, ಎಂಬಿಎ ಕೋರ್ಸ್‌ಗಳ ನಕಲಿ ಅಂಕಪಟ್ಟಿಗಳನ್ನು ₹ 30 ಸಾವಿರದಿಂದ ₹ 1 ಲಕ್ಷಕ್ಕೆ ಮಾರುತ್ತಿದ್ದರು. ₹10 ಲಕ್ಷದಿಂದ ₹ 20 ಲಕ್ಷ ಪಡೆದು ವಿವಿಧ ವಿಶ್ವವಿದ್ಯಾಲಯಗಳ ಪಿಎಚ್‌ಡಿ ಪದವಿ ಪ್ರಮಾಣ ಪತ್ರಗಳನ್ನೂ ಆರೋಪಿಗಳು ಮಾರಾಟ ಮಾಡುತ್ತಿದ್ದರು' ಎಂದು ವಿವರಿಸಿದರು.

'ಬಿಲಾಸಪುರದ ಡಾ. ಸಿ.ವಿ. ರಾಮನ್ ವಿಶ್ವವಿದ್ಯಾಲಯ, ಆಂಧ್ರಪ್ರದೇಶದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಶಿಲ್ಲಾಂಗ್ ವಿಲಿಯಂ ಕ್ಯಾರಿಯಾ ವಿಶ್ವವಿದ್ಯಾಲಯ, ಗುಜರಾತ್ ಕಲೊರಕ್ಸ್ ಶಿಕ್ಷಕರ ವಿಶ್ವವಿದ್ಯಾಲಯ, ಪಶ್ಚಿಮ ಬಂಗಾಳದ ಸ್ವಾಮಿ ವಿವೇಕಾನಂದ ಗ್ಲೋಬಲ್ ವಿಶ್ವವಿದ್ಯಾಲಯ, ಸಿಕ್ಕಿಂ ಇಐಐಎಲ್‌ಎಂ ವಿಶ್ವವಿದ್ಯಾಲಯ, ಹರಿಯಾಣ ವಿ.ಎಸ್. ಪ್ರಸನ್ನ ಭಾರತಿ ವಿಶ್ವವಿದ್ಯಾಲಯ ಹಾಗೂ ಹಿಮಾಚಲ ಪ್ರದೇಶ ಐಇಸಿ ವಿಶ್ವವಿದ್ಯಾಲಯಗಳ ನಕಲಿ ಅಂಕಪಟ್ಟಿಗಳು ಕಚೇರಿಯಲ್ಲಿ ಸಿಕ್ಕಿವೆ' ಎಂದು ತಿಳಿಸಿದರು.

'ಕಂಪನಿಗಳಲ್ಲಿ ಕೆಲಸ'

'ವೆಂಕಟೇಶ್ವರ ಇನ್‌ಸ್ಟಿಟ್ಯೂಟ್‌ನಿಂದ ನಕಲಿ ಅಂಕಪಟ್ಟಿಗಳನ್ನು ಖರೀದಿಸಿದ್ದ ಕೆಲವರು, ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಮಾಹಿತಿ ಇದೆ. ಅವರೆಲ್ಲರನ್ನೂ ಪತ್ತೆ ಮಾಡಲು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಜಾಲದ ಪ್ರಮುಖ ಆರೋಪಿ ಶ್ರೀನಿವಾಸ್ ರೆಡ್ಡಿ ಎಂಬಾತ ವೆಂಕಟೇಶ್ವರ ಇನ್‌ಸ್ಟಿಟ್ಯೂಟ್ ಸ್ಥಾಪಿಸಿದ್ದ. ಸದ್ಯ ಈತ ತಲೆಮರೆಸಿಕೊಂಡಿದ್ದಾನೆ' ಎಂದರು.

ದತ್ತ ಪೀಠ: ಪೂಜಾ ಕೈಂಕರ್ಯ

ಪ್ರಜಾವಾಣಿ ವಾರ್ತೆ



ಗಿರಿಯಲ್ಲಿ ದತ್ತ ಪಾದುಕೆ ದರ್ಶನಕ್ಕೆ ಸಾಲುಗಟ್ಟಿ ನಿಂತಿದ್ದ ಭಕ್ತರು.

ಚಿಕ್ಕಮಗಳೂರು: ಅನಸೂಯಾ ಜಯಂತಿ ಅಂಗವಾಗಿ ನಗರದಲ್ಲಿ ಮಂಗಳವಾರ ಸಂಕೀರ್ತನಾ ಯಾತ್ರೆ ವಿಜೃಂಭಣೆಯಿಂದ ನಡೆಯಿತು. ಮಹಿಳೆಯೊಬ್ಬರು ವಿ.ಡಿ. ಸಾವರ್ಕರ್ ಅವರ ಭಾವಚಿತ್ರ ಕೈಯಲ್ಲಿ ಹಿಡಿದು ಮೆರವಣಿಗೆಯಲ್ಲಿ ಸಾಗಿದರು.

ಮೆರವಣಿಗೆಯು ಬೋಳರಾಮೇಶ್ವರ ದೇಗುಲದಿಂದ ಹೊರಟು ರತ್ನಗಿರಿ ರಸ್ತೆಯ ಕಾಮಧೇನು ಗಣಪತಿ ದೇಗಲ ಬಳಿ ಸಂಪನ್ನಗೊಂಡಿತು. ಜಿಲ್ಲೆ, ಹೊರ ಜಿಲ್ಲೆಗಳ ಮಹಿಳೆಯರು ಪಾಲ್ಗೊಂಡಿದ್ದರು.

ಗಿರಿಶ್ರೇಣಿಯ ಶ್ರೀಗುರುದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ದರ್ಗಾ/ಸಂಸ್ಥೆಯ ದತ್ತ ಪೀಠದಲ್ಲಿ ಈ ಬಾರಿ ಅರ್ಚಕರು ಪೂಜೆ ಸಲ್ಲಿಸಿದರು. ಭಕ್ತರಿಗೆ ತೀರ್ಥ ನೀಡಿದರು.

'ದತ್ತ ಪಾದುಕೆಗಳಿಗೆ ಷೋಡಶ ಉಪಚಾರ ಕೈಂಕರ್ಯ, ಅಭಿಷೇಕ ನೆರವೇರಿಸಲಾಯಿತು. ಪೂಜೆ ಸಲ್ಲಿಸಲಾಯಿತು' ಎಂದು ಅರ್ಚಕ ಕೆ.ಶ್ರೀಧರ 'ಪ್ರಜಾವಾಣಿ'ಗೆ ತಿಳಿಸಿದರು.

ಒಂದೇ ಬಣ್ಣ, ವಿನ್ಯಾಸದ ಸೀರೆ: ಹಲವು ಮಹಿಳೆಯರು ಕೇಸರಿ ಬಣ್ಣದ ಒಂದೇ ವಿನ್ಯಾಸದ ಸೀರೆ ಉಟ್ಟಿದ್ದರು.

'ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸೀರೆ ವಿತರಿಸಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಕೊಟ್ಟಿಲ್ಲ' ಎಂದು ಕಡೂರು ತಾಲ್ಲೂಕಿನ ಮಹಿಳೆಯೊಬ್ಬರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ರಸ್ತೆಯಲ್ಲಿ ಮೊಳೆ: ಗಿರಿಶ್ರೇಣಿ ಮಾರ್ಗದ ರಸ್ತೆ ತಿರುವುಗಳಲ್ಲಿ ಮೊಳೆಗಳನ್ನು ಹರಡಿ ವಿಧ್ವಂಸಕ ಕೃತ್ಯದ ಸಂಚು ಮಾಡಲಾಗಿದೆ. ಪೊಲೀಸರು ತನಿಖೆ ನಡೆಸಿ ಕ್ರಮ ಜರುಗಿಸಬೇಕು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಒತ್ತಾಯಿಸಿದರು.

'ಗಿರಿಶ್ರೇಣಿ ರಸ್ತೆಯಲ್ಲಿ ಮೊಳೆಗಳು ಸಿಕ್ಕಿವೆ. ತನಿಖೆ ನಡೆಯಲಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

ಅವಿಶ್ವಾಸ ನಿರ್ಣಯ: ವಿಮಾನದಲ್ಲಿ ಬಂದ ಗ್ರಾ.ಪಂ ಸದಸ್ಯರು

ರಾಣೆಬೆನ್ನೂರು (ಹಾವೇರಿ): ಬೆಂಗಳೂರಿನ ರೆಸಾರ್ಟ್‌ನಲ್ಲಿ 40 ದಿನ ತಂಗಿದ್ದ ತಾಲ್ಲೂಕಿನ ದೇವರಗುಡ್ಡ ಗ್ರಾಮ ಪಂಚಾಯಿತಿಯ 9 ಸದಸ್ಯರು ವಿಮಾನದಲ್ಲಿ ಹುಬ್ಬಳ್ಳಿಗೆ ಬಂದಿದ್ದು, ಮಂಗಳವಾರ ಅವಿಶ್ವಾಸ ನಿರ್ಣಯ ಮಂಡನೆಯಲ್ಲಿ ಪಾಲ್ಗೊಂಡರು.

ಗ್ರಾಮ ಪಂಚಾಯಿತಿ ಸದಸ್ಯ ಬಲ 13 ಆಗಿದ್ದು, ಅಧಿಕಾರಕ್ಕಾಗಿ ಎರಡು ಗುಂಪುಗಳ ನಡುವೆ ಜಟಾಪಟಿ ನಡೆದಿತ್ತು. ಗ್ರಾ.ಪಂ. ಅಧ್ಯಕ್ಷ ಮಾಲತೇಶ ನಾಯರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಗಿದ್ದು, ಹೊಸ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಬಾಕಿ ಉಳಿದಂತಾಗಿದೆ.

'ಮಾಲತೇಶ ನಾಯರ್ 15 ತಿಂಗಳ ನಂತರ ಸದಸ್ಯ ಸುರೇಶ ತಳಗೇರಿ ಅವರಿಗೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡುವ ಒಪ್ಪಂದವಾಗಿತ್ತು. ಆದರೆ, ಅವರು ಬಿಟ್ಟುಕೊಡಲಿಲ್ಲ. ಅವಿಶ್ವಾಸ ಮಂಡನೆ ವೇಳೆ ಸದಸ್ಯರನ್ನು ಸೆಳೆಯಬಹುದು ಎಂದು ಸದಸ್ಯರನ್ನು ಬೆಂಗಳೂರಿಗೆ ಕಳುಹಿಸಲಾಗಿತ್ತು' ಎಂದು ಗ್ರಾಮ ಪಂಚಾಯಿತಿ ಆಡಳಿತದಲ್ಲಿ ಪ್ರಭಾವವುಳ್ಳ ಮಾಲತೇಶ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ಸಂತೋಷ ಭಟ್ ಗುರೂಜಿ 'ಪ್ರಜಾವಾಣಿ'ಗೆ ತಿಳಿಸಿದರು. ಉಪವಿಭಾಗಾಧಿಕಾರಿ ಶಿವಾನಂದ ಉಳ್ಳಾಗಡ್ಡಿ ಅವಿಶ್ವಾಸ ಪ್ರಕ್ರಿಯೆ ನಡೆಸಿಕೊಟ್ಟರು.

ಮೂವರು ಪೊಲೀಸರ ಅಮಾನತು

ತುಮಕೂರು: ಸೈಕಲ್ ಕಳ್ಳತನ ಪ್ರಕರಣದ ವಿಚಾರಣೆಗಾಗಿ ಠಾಣೆಗೆ ಕರೆದೊಯ್ದಿದ್ದ ಹನುಮಂತರಾಯಪ್ಪ (58) ಪೊಲೀಸರಿಂದ ಹಲ್ಲೆಗೆ ಒಳಗಾಗಿ ಸಾವನ್ನಪ್ಪಿದರು ಎನ್ನಲಾದ ಪ್ರಕರಣದಲ್ಲಿ ಮೂವರು ಪೊಲೀಸರನ್ನು ಅಮಾನತು ಮಾಡಲಾಗಿದೆ. ಜಯನಗರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಓಂಕಾರೇಶ್ವರ, ಕಾನ್‌ಸ್ಟೆಬಲ್‌ಗಳಾದ ರಾಜು, ಮಂಜಪ್ಪ ಮಸಾಲವಾರ ಅಮಾನತುಗೊಳಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆದೇಶ ಮಾಡಿದ್ದಾರೆ.

ಐಸಿಯುವಿನಲ್ಲಿ ನಿರ್ದೇಶಕ ಭಗವಾನ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕ ಎಸ್.ಕೆ.ಭಗವಾನ್ ಆರೋಗ್ಯದಲ್ಲಿ ಏರುಪೇರಾಗಿದ್ದು, ಚಿಕಿತ್ಸೆಗಾಗಿ ನಗರದ ಜಯದೇವ ಹೃದ್ರೋಗ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಅವರಿಗೆ 20–25 ವರ್ಷದಿಂದಲೂ ಹೃದಯದಲ್ಲಿ ಸಮಸ್ಯೆ ಇದೆ. ಹೃದಯ ಬಡಿತದ ಏರುಪೇರಿನಿಂದಾಗಿ ಉಸಿರಾಟದ ಸಮಸ್ಯೆ ಉದ್ಭವಿಸಿತ್ತು. ವಯಸ್ಸಿನ ಕಾರಣದಿಂದಾಗಿ ಅವರ ಹೃದಯ ಬಹಳ ದುರ್ಬಲವಾಗಿದೆ. ಶ್ವಾಸಕೋಶದ ಸೋಂಕು ಇದೆ. ಐಸಿಯುನಲ್ಲಿ ಚಿಕಿತ್ಸೆ ಮುಂದುವರಿದಿದ್ದು, ಆರೋಗ್ಯ ಸುಧಾರಿಸಿದೆ' ಎಂದು ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ಅರ್ಜಿ ಸಲ್ಲಿಸದಿದ್ದರೂ ಅನುದಾನ!

ಒಂದನೇ ಪುಟದಿಂದ

ಧನಸಹಾಯ ನಿಯಮದ ಪ್ರಕಾರ ಶುದ್ಧ ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುತ್ತಿರುವ ಸಂಘ–ಸಂಸ್ಥೆಗಳಿಗೆ ಮಾತ್ರ ವಿಶೇಷ ಸಂದರ್ಭದಲ್ಲಿ ಆರ್ಥಿಕ ನೆರವು ನೀಡುವ ಅಧಿಕಾರ ಸರ್ಕಾರಕ್ಕಿದೆ. ಈ ಅವಕಾಶದಡಿ ನ್ಯೂಯಾರ್ಕ್ ಕನ್ನಡ ಕೂಟದ ಇಂಡಿಯಾ ಡೇ ಪರೇಡ್ ಕಾರ್ಯಕ್ರಮ, ತರಳಬಾಳು ಜಗದ್ಗುರು ಶಾಖಾ ಮಠದ 'ಶಿವಸಂಧಾನ' ಕಾರ್ಯಕ್ರಮ, ಕರ್ನಾಟಕ ರಕ್ಷಣಾ ವೇದಿಕೆಯ ಬೆಳ್ಳಿ ಹಬ್ಬ ಕಾರ್ಯಕ್ರಮ, ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್‌ನ ಅಖಿಲ ಭಾರತ ಹರಿದಾಸ ಸಾಹಿತ್ಯ ಸಮ್ಮೇಳನ ಸೇರಿ ವಿವಿಧ ಸಂಸ್ಥೆಗಳ ಕಾರ್ಯಕ್ರಮಕ್ಕೆ ಸರ್ಕಾರದಿಂದ 2022–23ನೇ ಸಾಲಿಗೆ ₹ 2 ಕೋಟಿವರೆಗೂ ಅನುದಾನ ನೀಡಲಾಗಿದೆ.

ಮರೆಯಾದ ಪಾರದರ್ಶಕತೆ: 'ಪ್ರಭಾವ ಬಳಸಿದವರಿಗೆ ಅನುದಾನ ಎಂಬ ವಾತಾವರಣ ನಿರ್ಮಾಣವಾಗಿದೆ. ನಿಯಮಿತವಾಗಿ ಕಾರ್ಯಕ್ರಮಗಳನ್ನು ನಡೆಸಿ, ಧನಸಹಾಯಕ್ಕೆ ಅರ್ಜಿ ಸಲ್ಲಿಸಿದವರಿಗೆ ಆರ್ಥಿಕ ನೆರವಿನ ಖಚಿತತೆ ಇಲ್ಲವಾಗಿದೆ. ಧನಸಹಾಯ ಯೋಜನೆಯಲ್ಲಿ ಪಾರದರ್ಶಕತೆ ಮರೆಯಾಗಿದೆ' ಎಂದು ಕಲಾವಿದ ಜಯಸಿಂಹ ಎಸ್. ಬೇಸರ ವ್ಯಕ್ತಪಡಿಸಿದರು.

'ಸರ್ಕಾರದ ಈ ನಡೆಯಿಂದ ಸಂಘ–ಸಂಸ್ಥೆಗಳು ಧನಸಹಾಯ ಯೋಜನೆಯ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಿವೆ' ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ತಿಳಿಸಿದರು.

ಲೋಕಗುರು ದತ್ತಾತ್ರೇಯ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ದತ್ತಜಯಂತಿ

ನಮ್ಮ ಜೀವನವನ್ನು ನಮಗೆ ಸಹನೀಯಗೊಳಿಸುವಲ್ಲಿ ಗುರುವಿನ ಪಾತ್ರ ದೊಡ್ಡದು. ಗುರು ಎಂದರೆ ಅರಿವಿನ ಮೂರ್ತರೂಪ. ಅರಿವು ಇಲ್ಲದಿದ್ದರೆ ಜೀವನದ ಸಂಕಟಗಳನ್ನು ಪರಿಹರಿಸಿಕೊಳ್ಳುವುದು ಕಷ್ಟ. ಹೀಗೆ ನಮ್ಮ ಜೀವನಕ್ಕೆ ಒದಗುವ ಅರಿವನ್ನು ನಮಗೆ ಕಾಣಿಸುವವನೇ ಗುರು. 'ಅರಿವು' – ಇದು ಲೌಕಿಕ ತಿಳಿವಳಿಕೆಯನ್ನು ನೀಡುವ ಸಾಮಾನ್ಯಜ್ಞಾನವೂ ಹೌದು, ಲೋಕೋತ್ತರವಾದ ಬೆಳಕನ್ನು ಕಾಣಿಸಬಲ್ಲ ವಿಶೇಷಜ್ಞಾನವೂ ಹೌದು.

ನಮ್ಮ ಸಂಸ್ಕೃತಿಯಲ್ಲಂತೂ ಗುರುತತ್ತ್ವಕ್ಕೆ ತುಂಬ ಎತ್ತರದ ಸ್ಥಾನವನ್ನು ನೀಡಲಾಗಿದೆ. ಇದಕ್ಕೆ ಕಾರಣವಾದರೂ ಸ್ಪಷ್ಟ: ಅರಿವಿನ ಶಕ್ತಿಯ ಮೂಲವೇ ಗುರುತತ್ತ್ವ ಆಗಿರುವುದರಿಂದ ಇಂಥದೊಂದು ಮನ್ನಣೆ ದಕ್ಕಿದೆ. ಈ ಕಾರಣದಿಂದಲೇ ಗುರುವನ್ನು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಸಂಗಮವನ್ನಾಗಿ ಒಕ್ಕಣಿಸಿರುವುದು. ತ್ರಿಮೂರ್ತಿಗಳ ಸ್ವರೂಪದಲ್ಲಿ ನಮ್ಮ ಸಂಸ್ಕೃತಿ ಕಾಣಿಸಿರುವ ಗುರುತತ್ತ್ವದ ಮತ್ತೊಂದು ವಿಶೇಷ ಆಯಾಮವೇ ಅವಧೂತಗುರು ದತ್ತಾತ್ರೇಯ.




ಲೋಕಕ್ಕೆ ಅರಿವನ್ನು ನೀಡಬಲ್ಲ ಗುರು ಹೇಗಿರಬೇಕು ಎಂಬುದಕ್ಕೆ ಅಪೂರ್ವ ಸಂಕೇತವಾಗಿದೆ ಅವಧೂತತತ್ತ್ವ. ಗುರುವಿನ ಉದ್ದೇಶ ಲೋಕಕ್ಕೆ ಅರಿವನ್ನು ನೀಡುವುದು; ಆ ಮೂಲಕ ಜನರ ಬವಣೆಗಳನ್ನು ಪರಿಹರಿಸುವುದು; ಪ್ರಪಂಚದಲ್ಲಿ ಆನಂದವನ್ನು ನೆಲೆಯಾಗಿಸುವುದು. ಇಂಥ ವಿಶಾಲ ಭಾವ–ಬುದ್ಧಿಗಳ ಪ್ರಪಂಚದಲ್ಲಿ ವಿಹರಿಸುತ್ತಿರುವಂಥ ಗುರುವು ಜಗತ್ತಿನ ಎಣಿಕೆಗೆ ಸುಲಭವಾಗಿ ದಕ್ಕಲಾರ. ಮಾತ್ರವಲ್ಲ, ಅವನಿಗೆ ಜಗತ್ತಿನ ಯಾವ ಅಂಟು–ಕೊಳೆಗಳೂ ಸೋಂಕಲಾರವು. ಅವಧೂತನ ಕಲ್ಪನೆಯಲ್ಲಿ ಕಾಣುವ ಪ್ರಧಾನ ಲಕ್ಷಣಗಳೇ ಇವು. ಮೊದಲನೆಯದಾಗಿ ಅವನು ನಮ್ಮ ಊಹೆಯನ್ನು ಮೀರಿದವನಾಗಿರುತ್ತಾನೆ; ಗುರುವಾದವನು, ಎಂದರೆ ಜ್ಞಾನಿಯಾದವನು ಸಾಮಾನ್ಯವಾಗಿ 'ಹೀಗೇ ಇರುತ್ತಾನೆ' ಎಂಬ ಕಲ್ಪನೆಯನ್ನು ನಾವು ಮಾಡಿಕೊಂಡಿರುತ್ತೇವೆ. 'ಅವನು ಸದಾ ಶುಭ್ರವಾಗಿರುತ್ತಾನೆ; ಒಳ್ಳೆಯ ಬಟ್ಟೆಯನ್ನು ತೊಟ್ಟಿರುತ್ತಾನೆ; ಅವನ ಹಾವ–ಭಾವಗಳು ನಮ್ಮ ಮನಸ್ಸನ್ನು ಆಕರ್ಷಿಸುವಂತೆ ಇರುತ್ತವೆ.' ಹೀಗೆಲ್ಲ ನಾವು ಅಂದುಕೊಳ್ಳುತ್ತೇವೆ. ಆದರೆ ಅವಧೂತ ಹೀಗೆ ಇರುವವನಲ್ಲ; ಅವನು ಪರಮಜ್ಞಾನಿಯೇ ಹೌದು; ಹೀಗೆಂದು ಅವನನ್ನು ನಾವು ಸುಲಭವಾಗಿ ಗುರುತಿಸಲಾರೆವು. ಅವನು ಬಾಲನಂತಿರಬಹುದು, ಉನ್ಮತ್ತನಂತೆ ಇರಬಹುದು, ಪಿಶಾಚದಂತೆಯೂ ಇರಬಹುದು – ಎನ್ನುತ್ತದೆ, ಪರಂಪರೆ. ಈ ಮಾತಿನ ಅರ್ಥ ಹಲವು ಪದರಗಳಲ್ಲಿ ಹರಡಿಕೊಂಡಿದೆ. ಜಗತ್ತು ನನ್ನನ್ನು 'ಜ್ಞಾನಿ ಎಂದು ಗುರುತಿಸಬಹುದು' ಎಂಬ ಆಕರ್ಷಣೆಯನ್ನೂ ಬಯಕೆಯನ್ನೂ ಸಹಜವಾಗಿಯೇ ಕಳೆದುಕೊಂಡವನಾಗಿರುತ್ತಾನೆ, ಅವಧೂತ ಎಂಬುದು ಇಲ್ಲಿರುವ ಸ್ವಾರಸ್ಯ.


ಲೋಕದ ಆದರಕ್ಕೂ ಅನಾದರಕ್ಕೂ ಗಮನ ಕೊಡದಂಥ ಮಾನಸಿಕತೆ ಹೇಗೆ ಒದಗುತ್ತದೆ? ಇದೇನು ಸುಲಭವಾಗಿ ದಕ್ಕುವಂಥ ಸಂಗತಿಯಲ್ಲ. ಅವಧೂತನು ಜಗತ್ತಿನ ವಿವರಗಳನ್ನು 'ಇದು ಶ್ರೇಷ್ಠ' ಎಂದೋ, ಅಥವಾ 'ಇದು ಕನಿಷ್ಠ' ಎಂದೋ ಲೆಕ್ಕಾಚಾರ ಮಾಡುವವನಲ್ಲ; ಅವನು ಎಲ್ಲೆಲ್ಲೂ ಎಲ್ಲರಲ್ಲಿಯೂ ಏಕಭಾವವನ್ನೇ ಕಾಣುತ್ತಾನೆ. ಗುರುವಾದವನು – ಎಂದರೆ ದಿಟದ ಅರಿವನ್ನು ಪಡೆದಿರುವವನು – ಲೋಕವನ್ನು ಕಾಣಬೇಕಾದ ಕ್ರಮವೇ ಇದಲ್ಲವೆ? ಯಾರಿಗೆ ಶ್ರೇಷ್ಠ–ಕನಿಷ್ಠಗಳ ಗೊಡವೆಯಿಲ್ಲವೋ ಅವರಿಗೆ ಸಂಮಾನ–ಅವಮಾನಗಳ ಬಗ್ಗೆ ಗಮನವಾದರೂ ಏಕಿದ್ದೀತು?

ಜಗತ್ತಿನಲ್ಲಿ ಒಳಿತು ನೆಲೆಯಾಗಬೇಕೆಂಬ ತುಡಿತದಿಂದ ಕ್ರಿಯಾಶೀಲರಾಗಿರುವವರು ಅಹಂಕಾರ–ಮಮಕಾರಗಳನ್ನು ತ್ಯಾಗಮಾಡಬೇಕಷ್ಟೆ. ಇಂಥವನೇ ಲೋಕಗುರುವಾಗಲು ಸಾಧ್ಯ. ಅವಧೂತಗುರು ದತ್ತಾತ್ರೇಯನ ಪ್ರತೀಕದಲ್ಲಿ ಇಂಥದೊಂದು ಕಾಣ್ಕೆ ಅಡಗಿದೆ. 'ನಾನು ತಿನ್ನುವುದು, ಮಾಡುವುದು, ಕೊಡುವುದು – ಪ್ರತಿಯೊಂದು ಕೂಡ ನನ್ನದಲ್ಲ; ನಾನು ಸದಾ ಶುದ್ಧ; ಆ ಶುದ್ಧತತ್ತ್ವಕ್ಕೆ ಅಹಂಕಾರ–ಮಮಕಾರಗಳೂ ಇಲ್ಲ, ಹುಟ್ಟು–ಸಾವುಗಳೂ ಇಲ್ಲ' ಎಂಬ ಮಹಾತತ್ತ್ವದ ಸಾಕಾರರೂಪವೇ ದತ್ತಾತ್ರೇಯ. ❖

ತಂತ್ರಜ್ಞಾನ



ಹಾಲು ಕೊಡುವ 'ಡೇರಿ' ಇರುವೆ!



ಕೊಳ್ಳೇಗಾಲ ಶರ್ಮ

ಇರುವೆ ಎಂದರೆ ಹಾಲು, ಸಕ್ಕರೆಗೆ ಮುತ್ತುವ ಕೀಟ ಎಂದು ನೀವು ನಂಬಿದ್ದರೆ ಇದೋ ಹೊಸ ಸುದ್ದಿ. ಕೆಲವು ಇರುವೆಗಳು ಹಾಲು ಕರೆಯುತ್ತವೆಯಂತೆ. ಈ ಹಾಲು ಇರುವೆಗಳ ಮೊಟ್ಟೆಯ ಪಾಲನೆಗೆ ಅವಶ್ಯಕ ಎಂದು ಮೊನ್ನೆ 'ನೇಚರ್' ಪತ್ರಿಕೆಯಲ್ಲಿ ಅಮೆರಿಕೆಯ ರಾಕ್‌ಫೆಲರ್ ವಿಶ್ವವಿದ್ಯಾನಿಲಯದಲ್ಲಿ ಸಮಾಜ ಮತ್ತು ಸಾಮಾಜಿಕ ನಡವಳಿಕೆಗಳ ವಿಕಾಸವನ್ನು ಅಧ್ಯಯನ ಮಾಡುವ ಡೇನಿಯಲ್ ಕ್ರೊನಿಯೆ ಮತ್ತು ಸಂಗಡಿಗರು ವರದಿ ಮಾಡಿದ್ದಾರೆ.

ಇರುವೆಗಳ ಜಗತ್ತು ಮನುಷ್ಯನದಕ್ಕಿಂತಲೂ ಜಟಿಲವಾದ ಸಮಾಜ. ಅಲ್ಲಿ ಸಾವಿರಾರು, ಕೆಲವೊಮ್ಮೆ ಲಕ್ಷಾಂತರ ಇರುವೆಗಳು ಒಟ್ಟಾಗಿ, ಒಂದೇ ಗೂಡಿನಲ್ಲಿ ಸಾಮರಸ್ಯದಿಂದ ವಾಸಿಸುತ್ತವೆ. ತಂತಮ್ಮ ಕರ್ತವ್ಯಗಳನ್ನು ಹಂಚಿಕೊಂಡು, ಚಾಚೂ ತಪ್ಪದೆ ಮಾಡುತ್ತವೆ. ಇವೆಲ್ಲವನ್ನೂ ಅವಕ್ಕೆ ಕಲಿಸುವವರು ಯಾರೂ ಇಲ್ಲ.

ಗೂಡಿನಲ್ಲಿ ಸದಾ ಬ್ಯುಸಿಯಾಗಿರುವಂತೆ ಕಾಣುವ ಸಹಸ್ರಾರು ಇರುವೆಗಳನ್ನು ವಿಜ್ಞಾನಿಗಳು ಕಾರ್ಮಿಕರು ಎನ್ನುತ್ತಾರೆ. ಇವುಗಳಿಗೆ ಗೂಡಿನಲ್ಲಿ ರಾಣಿ ಇಟ್ಟಿರುವ ಮೊಟ್ಟೆಗಳನ್ನು ಪಾಲಿಸಿ, ಪೋಷಿಸಿ, ರಕ್ಷಿಸಿ ಬೆಳೆಸುವುದಷ್ಟೆ ಕೆಲಸ. ಇದಕ್ಕಾಗಿ ಕೆಲವು ಇರುವೆಗಳಲ್ಲಿ ಆಹಾರವನ್ನು ಸಂಪಾದಿಸುವ ಕಾರ್ಮಿಕರು, ಗೂಡನ್ನು ರಕ್ಷಿಸಲು ಕಾದಾಡುವ ಸೈನಿಕರು, ಗೂಡು ಕಟ್ಟುವ ಇರುವೆಗಳಲ್ಲದೆ, ಗೂಡಿನೊಳಗೆ ಬೂಸುಗಳನ್ನು ಬೆಳೆಸಿ ಆಹಾರವನ್ನಾಗಿ ಕೊಡುವ ಕೃಷಿಕ ಇರುವೆಗಳೂ ಇರುತ್ತವೆ. ಇವೆಲ್ಲದರ ಜೊತೆಗೆ ಇದೀಗ ಹಾಲು ಕೊಡುವ ವರ್ಗವೂ ಇದೆ ಎನ್ನುತ್ತದೆ, ಈ ಸಂಶೋಧನೆ.

ಇರುವೆಗಳ ಈ ಹಾಲಿಗೂ ನಾವು ಬಳಸುವ ಹಸು ಇಲ್ಲವೇ ತಾಯಿಯ ಹಾಲಿಗೂ ವ್ಯತ್ಯಾಸವಿದೆ ಎನ್ನಿ. ವಿಜ್ಞಾನಿಗಳು ಹಾಲು ಎಂದು ಕರೆದಿದ್ದರೂ, ಇದು ದೇಹದಿಂದ ಒಸರುವ ಒಂದು ದ್ರವ. ಅದರಲ್ಲಿಯೂ ಮೊಟ್ಟೆ ಒಡೆದು, ಹುಳುವಾಗಿ, ಆ ಹುಳು ಬೆಳೆದು ಗೂಡು ಕಟ್ಟಿಕೊಂಡು ಇರುವ ಪ್ಯೂಪ ಎನ್ನುವ ಹಂತದಲ್ಲಿ ಒಸರುವ ದ್ರವ. ಈ ಪ್ಯೂಪ ಒಡೆದಾಗ ಹೊಸದೊಂದು ಇರುವೆ ಹೊರ ಬರುತ್ತದೆ. ಇದು ಥೇಟ್ ರೇಷ್ಮೆ ಹುಳುವಿನಲ್ಲಿ ನಡೆಯುವ ಬೆಳವಣಿಗೆಯಂತೆಯೇ. ಅದರಲ್ಲೇನು ವಿಶೇಷ ಎಂದಿರಾ?

ವಿಶೇಷವಿದೆ. ಕ್ರೊನಿಯೆ ತಂಡ ಮೊದಲಿಗೆ 'ಊಸೇರಿಯಾ ಬಿರೋಯ್' ಎನ್ನುವ ಇರುವೆಯಲ್ಲಿ ಈ ಬಗೆಯ ನಡವಳಿಕೆಯನ್ನು ಗುರುತಿಸಿತು. ಈ ಇರುವೆಗಳಲ್ಲಿ ಮೊಟ್ಟೆ ಒಡೆದು ಹೊರ ಬಂದ ಹುಳುಗಳು ಸ್ವಲ್ಪ ಕಾಲ ಬೆಳೆದು ನಂತರ ಗೂಡು ಕಟ್ಟಿ ಪ್ಯೂಪಗಳಾಗುತ್ತವೆ. ಹುಳುಗಳು ಬೆಳೆಯುವ ಹಂತದಲ್ಲಿ ಹಾವುಗಳು ಪೊರೆ ಬಿಡುವ ಹಾಗೆ, ಹಳೆಯ ಚರ್ಮವನ್ನು ಬಿಸಾಡಿ, ಹೊಸ ಚರ್ಮ ಹೊದೆಯುತ್ತವೆ. ಪ್ಯೂಪವಾಗುವುದಕ್ಕೂ ಮೊದಲು ಹೀಗೆಯೇ ಆಗುತ್ತದಷ್ಟೆ. ಆಗ ಹೊರಗೆಸೆದ ಹಳೆಯ ಚರ್ಮ ದ್ರವದಂತೆ ಅಂಟಂಟಾಗಿ ಉಳಿಯುತ್ತದೆ. ಪ್ಯೂಪಗಳು ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡುತ್ತದೆ. ಇದು ಪ್ಯೂಪಗಳಿಗೆ ಉಪಕಾರಿಯಂತೂ ಅಲ್ಲ. ಸಾವಿರಾರು ಜೀವಿಗಳು ಒಟ್ಟಿಗಿರುವ ಕಡೆ ಇಂತಹ ಅಂಟು ವಿನಾಶಕಾರಿ.

> ಹಾಲು ಕರೆದು ಮರಿಗಳಿಗೆ ಉಣಿಸುವ ಗೌಳಿಗ ಇರುವೆಗಳೂ ಇವೆಯಂತೆ...

ಊಸೇರಿಯಾ ಬಿರೋಯ್ ಇರುವೆಗಳಲ್ಲಿ ಕಾರ್ಮಿಕ ಇರುವೆಗಳು ಪ್ಯೂಪಗಳಿಗೆ ಅಂಟಿಕೊಂಡ ಈ ದ್ರವವನ್ನು ಹೆಕ್ಕಿ ನುಂಗುವುದನ್ನು ವಿಜ್ಞಾನಿಗಳು ಕಂಡಿದ್ದರು. ಇದು ಕೇವಲ ಗೂಡನ್ನು ಶುಚಿಗೊಳಿಸುವ ಕ್ರಮವಷ್ಟೆ ಎಂದು ಭಾವಿಸಿದ್ದರು. ಆದರೆ ಇದೀಗ ಕ್ರೊನಿಯೆ ತಂಡ ನಡೆಸಿರುವ ಅಧ್ಯಯನ, ಹಾಗೂ ಜತನದಿಂದ ಮಾಡಿದ ಪ್ರಯೋಗಗಳು ಇದು ಉದ್ದೇಶಪೂರ್ವಕವಾಗಿ ಸ್ರವಿಸಿದ ದ್ರವ. ಮುಂದಿನ ಪೀಳಿಗೆಗೆ ಆಹಾರವೊದಗಿಸುವ ಕ್ರಮ ಎಂದು ಸೂಚಿಸಿವೆ.


ಶುಚಿಗೊಳಿಸುವ ಇರುವೆಗಳು ಪ್ಯೂಪದಿಂದ ಒಸರಿದ ದ್ರವವನ್ನು ಸೇವಿಸಿದ ನಂತರ ಅದನ್ನು ಮೊಟ್ಟೆಯೊಡೆದ ಹೊರ ಬಂದಿರುವ ಹುಳುಗಳಿಗೆ ಉಣಿಸುತ್ತವಂತೆ. ಇದನ್ನು ಕ್ರೊನಿಯೆ ತಂಡ ಅರಿತಿದ್ದು ಹೀಗೆ. ಈ ತಂಡ ಪ್ಯೂಪಗಳನ್ನು ಗುಂಪಿನಿಂದ ಬೇರ್ಪಡಿಸಿ, ಒಬ್ಬಂಟಿಯಾಗಿ ಬೆಳೆಸಿತು. ಹೀಗೆ ಒಂಟಿಯಾಗಿರಿಸಿದ ಪ್ಯೂಪಗಳ ಮೈ ಕಪ್ಪಾಗುತ್ತಿತ್ತು. ತದನಂತರ ಐದು ದಿನಗಳ ಕಾಲ ಅವುಗಳ ಮೈ ಮೇಲೆ ಜೇನಿನಂತೆ ಮಿನುಗುವ ದ್ರವ ಸಂಗ್ರಹವಾಗುತ್ತಿತ್ತು. ಪ್ರತಿಯೊಂದು ಪ್ಯೂಪವೂ ಹೀಗೆ ಸುಮಾರು ಇಪ್ಪತ್ತೈದರಿಂದ ಮೂವತ್ತು ಮೈಕ್ರೊಲೀಟರು ದ್ರವವನ್ನು ಸುರಿಸುತ್ತಿತ್ತು. ಇರುವೆಯ ಗಾತ್ರಕ್ಕೆ ಹೋಲಿಸಿದರೆ ನಾವು ಬಕೆಟುಗಳಲ್ಲಿ ನೀರು ಸಂಗ್ರಹಿಸಿದ ಹಾಗೆ ಇತ್ತು ಈ ಪ್ರಮಾಣ. ಗೂಡಿನಲ್ಲಿ ಒಟ್ಟಿಗೇ ಇದ್ದ ಇದೇ ಕುಲದ ಪ್ಯೂಪಗಳು ಬಲು ಶುಚಿಯಾಗಿದ್ದುವು. ಅವುಗಳ ಮೈಮೇಲೆ ದ್ರವ ಇರಲೇ ಇಲ್ಲ. ಹಾಂ. ಈ ದ್ರವ ಬಲು ಪೌಷ್ಟಿಕ ವಸ್ತು. ಅದರಲ್ಲಿ ಪ್ರೊಟೀನು ಹಾಗೂ ಪೊರೆ ಬಿಡಲು ಪ್ರಚೋದಿಸುವ ಹಾರ್ಮೋನುಗಳು ಸಮೃದ್ಧಿಯಾಗಿವೆ ಎಂದು ಕ್ರೊನಿಯೆ ತಂಡ ಪತ್ತೆ ಮಾಡಿದೆ. ರೇಷ್ಮೆ ಹುಳು, ಚಿಟ್ಟೆಗಳ ಪ್ಯೂಪಗಳು ಬಿಸಾಡಿದ ಪೊರೆಗಳಲ್ಲಿಯೂ ಇದೇ ರಾಸಾಯನಿಕಗಳಿರುತ್ತವೆ ಎನ್ನುವುದು ಕಾಕತಾಳೀಯವಿರಲಿಕ್ಕಿಲ್ಲ. ಇಷ್ಟೊಂದು ಪೌಷ್ಟಿಕವಾದ ದ್ರವ ಎಲ್ಲಿ ಹೋಯಿತು ಎನ್ನುವುದನ್ನು ಪತ್ತೆ ಮಾಡಲು ಪ್ರಯೋಗಗಳನ್ನು ನಡೆಸಿದರು. ಪ್ಯೂಪಗಳು ಕಪ್ಪಾಗುತ್ತಿದ್ದಂತೆಯೇ ಅವುಗಳ ಹೊಟ್ಟೆಯೊಳಗೆ ನೀಲಿ ದ್ರವವೊಂದನ್ನು ಚುಚ್ಚಿದರು. ಇಂತಹ ಪ್ಯೂಪಗಳಿಂದ ಒಸರಿದ ದ್ರವವೂ ನೀಲಿಯಾಗಿತ್ತು.

ಅನಂತರ ಗಮನಿಸಿದಾಗ, ಪ್ಯೂಪಗಳ ಆರೈಕೆ ಮಾಡುತ್ತಿದ್ದ ಇರುವೆಗಳ ಹೊಟ್ಟೆ ನೀಲಿಗಟ್ಟಿತ್ತು. ಪ್ಯೂಪಗಳು ಯಾವುವೂ ಸತ್ತಿರಲಿಲ್ಲವಾದ್ದರಿಂದ ಅವನ್ನು ಇರುವೆಗಳು ತಿಂದಿರಲಿಕ್ಕಿಲ್ಲ. ಪ್ಯೂಪಗಳು ಒಸರಿದ ಈ ರಸವನ್ನು ಸೇವಿಸಿದ್ದರಿಂದಲೇ ಅವು ನೀಲಿಯಾಗಿವೆ ಎಂದು ಕ್ರೊನಿಯೆ ತಂಡ ಊಹಿಸಿದೆ.


ಅಷ್ಟೇ ಅಲ್ಲ. ರಸ ಒಸರುವ ಪ್ಯೂಪಗಳು ಇರುವೆಗಳನ್ನು ಆಕರ್ಷಿಸುತ್ತವೆ ಎಂದೂ ಇವರು ಗುರುತಿಸಿದ್ದಾರೆ. ರಸ ಒಸರದಂತೆ ಪ್ಯೂಪಗಳ ಹಿಂಬದಿಯನ್ನು ಮುಚ್ಚಿಬಿಟ್ಟರೆ, ಅದರ ಬಳಿಗೆ ಇರುವೆಗಳು ಬರುವುದೇ ಇಲ್ಲ. ರಸ ಹೆಚ್ಚು ಒಸರಿರುವ ಪ್ಯೂಪದ ಬಳಿಗೆ ಹೆಚ್ಚು ಇರುವೆಗಳು ಮುತ್ತಿಕೊಂಡಿರುತ್ತವೆ.

ಈ ಇರುವೆಗಳು ಗೂಡಿನ ತುಂಬ ಪ್ಯೂಪಗಳೇ ಇರುವ ಋತುವಿನಲ್ಲಿ ಇಡುವ ಮೊಟ್ಟೆಗಳನ್ನು ಪ್ಯೂಪಗಳ ಮೇಲೆಯೇ ಇಡುತ್ತವೆ ಎನ್ನುವುದು ವಿಶೇಷ. ಈ ಋತುವಿನಲ್ಲಿ ಸಾಮಾನ್ಯವಾಗಿ ಇರುವೆಯ ಲಾರ್ವಗಳು ತಿನ್ನುವ ಕೀಟಗಳನ್ನು ಇಟ್ಟರೂ ಅವನ್ನು ಗಮನಿಸದೆ ಪ್ಯೂಪದ ಮೇಲೆಯೇ ಮೊಟ್ಟೆಗಳನ್ನು ಇಡುತ್ತವೆಯಂತೆ. ಬಹುಶಃ ಮೊಟ್ಟೆಗಳಿಗೆ ಉತ್ತಮ ಪೋಷಕಾಂಶಗಳನ್ನು ಒದಗಿಸಲು ಹೀಗೆ ಮಾಡುತ್ತಿರಬೇಕು. ಪ್ಯೂಪದಿಂದ ಒಸರುವ ದ್ರವ ಇವಕ್ಕೆ ಪೌಷ್ಟಿಕ ಆಹಾರವಾಗಿರಬೇಕು ಎನ್ನುತ್ತಾರೆ ಕ್ರೊನಿಯೆ.

ಪ್ಯೂಪದ ದ್ರವವನ್ನು ಕೇವಲ ಊಸೇರಿಯಾ ಬಿರೋಯ್ ಇರುವೆಗಳಷ್ಟೆ ಬಳಸುವುದಿಲ್ಲ. ಇನ್ನೂ ಹಲವು ಪ್ರಬೇಧಗಳಲ್ಲಿ ಪ್ಯೂಪದ ರಸವನ್ನು ಇರುವೆಗಳು ಹೀರುವುದನ್ನು ಕ್ರೊನಿಯೆ ತಂಡ ಗುರುತಿಸಿದೆ. ಹೀಗಾಗಿಯೇ, ತ್ಯಾಜ್ಯದಂತಹ ಈ ದ್ರವವನ್ನು ಹಾಲಿಗೆ ಸಮಾನವೆಂದಿದ್ದಾರೆ. ಇರುವೆಗಳನ್ನೇ ಜೀವನ ಪರ್ಯಂತ ಅಧ್ಯಯನ ಮಾಡಿದ್ದ ಇ. ಓ. ವಿಲ್ಸನ್ ಅವನ್ನು ನಿಗೂಢ ಜೀವಿಗಳು ಎಂದು ಕರೆದಿದ್ದರು. ನಿಜವೇ. ಬೆಂಗಳೂರು ನಗರದಲ್ಲಿಯೇ ನಾಲ್ಕುನೂರಕ್ಕೂ ಹೆಚ್ಚು ಬಗೆಯ ಇರುವೆಗಳಿವೆಯಂತೆ. ಇನ್ನು ಈ ಪ್ರಪಂಚದಲ್ಲಿರುವ ಒಟ್ಟಾರೆ ಇರುವೆಗಳ ಬಗೆಗಳಲ್ಲಿ ಯಾವು, ಯಾವುವುಗಳಲ್ಲಿ ಇನ್ನೂ ಏನೇನು ರಹಸ್ಯಗಳಿವೆಯೋ ಯಾರಿಗೆ ಗೊತ್ತು?



ಪ್ಯೂಪದಿಂದ ಒಸರುವ ದ್ರವವನ್ನು ಕುಡಿಯುತ್ತಿರುವ ಇರುವೆ



ಮಾತುಗಳ ಕನ್ನಡಕ

ನೇಸರ ಕಾಡನಕುಪ್ಪೆ

ಶ್ರವಣದೋಷ ಸಮಸ್ಯೆ ಇರುವವರಿಗೆ ಪರಿಹಾರವಾಗಿ ಅನೇಕ ರೀತಿಯ ಉಪಕರಣಗಳನ್ನು ಶೋಧಿಸಲಾಗಿದೆ. ಸಂಪೂರ್ಣವಾಗಿ ಶಬ್ದ ಕೇಳದೇ ಇದ್ದರೂ ಅಲ್ಪಸ್ವಲ್ಪವಾದರೂ ಕೇಳುವಂತೆ ಸಾಧನಗಳು ಈಗ ಸಹಾಯ ಮಾಡುತ್ತಿವೆ. ಜೊತೆಗೆ, ದೈಹಿಕವಾಗಿ ಕೆಲವು ಸಮಸ್ಯೆಗಳಿದ್ದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ದೋಷ ಪರಿಹಾರ ಮಾಡುವ ವಿಧಾನಗಳೂ ಈಗ ಬಳಕೆಯಲ್ಲಿವೆ. ಆದರೆ, ಈಗೊಂದು ಸರಳ ತಂತ್ರಜ್ಞಾನವೊಂದರ ಶೋಧವಾಗಿದೆ. ಮಾತುಗಳನ್ನು ಆಲಿಸಿ, ಅವನ್ನು ಅಕ್ಷರಗಳಾಗಿ ಪರಿವರ್ತಿಸಿ ಪರದೆಯ ಮೇಲೆ ಮೂಡಿಸುವ ಕನ್ನಡಕವೊಂದನ್ನು ವಿಜ್ಞಾನಿಗಳು ಸಂಶೋಧಿಸಿದ್ದಾರೆ.

ಈ ಕನ್ನಡಕಕ್ಕೆ 'ಎಕ್ಸ್‌ರಾಯ್' (XRAI) ಎಂದು ಹೆಸರಿಡಲಾಗಿದೆ. ಮಿಶೆಲ್ ಫೆಲ್ಡ್‌ಮ್ಯಾನ್ ಎಂಬ ವಿಜ್ಞಾನಿಯೊಬ್ಬರು ಈ ಕನ್ನಡಕವನ್ನು ಸಂಶೋಧಿಸಿ ಅದನ್ನು ಈಗಾಗಲೇ ಮಾರುಕಟ್ಟೆಗೂ ಬಿಡುಗಡೆ ಮಾಡಿದ್ದಾರೆ. ಈ ಕನ್ನಡಕದ ಕೆಲಸ ಬಹು ಸರಳ – ಮಾತುಗಳನ್ನು ಕೇಳಿಸಿಕೊಳ್ಳುವುದು; ಕೇಳಿಸಿದ ಮಾತುಗಳನ್ನು ಕನ್ನಡಕದ ಪರದೆಯ ಮೇಲೆ ಮೂಡಿಸುವುದು. ಈ ಕನ್ನಡಕವನ್ನು ಧರಿಸಿರುವವರು ಪರದೆಯ ಮೇಲೆ ಮೂಡುವ ಅಕ್ಷರಗಳನ್ನು ಓದಿಕೊಳ್ಳುವ ಮೂಲಕ ವಿಷಯಗಳನ್ನು ಸುಲಭವಾಗಿ ಅರ್ಥೈಸುವಂತೆ ಮಾಡುವುದು ಇದರ ಒಟ್ಟಾರೆ ಉದ್ದೇಶವಾಗಿದೆ.

ಕೃತಕ ಬುದ್ಧಿಮತ್ತೆಯ ಮೂಲಕ ಈ ಕನ್ನಡಕವು ಕೆಲಸ ಮಾಡುತ್ತದೆ. ಕನ್ನಡಕದ ಒಳಗೆ ಇರಿಸಿರುವ ಸಾಫ್ಟ್‌ವೇರ್, ಮೈಕ್ರೋಫೋನ್ ಮೂಲಕ ಮಾತುಗಳನ್ನು ಆಲಿಸುತ್ತದೆ. ಸಾಫ್ಟ್‌ವೇರ್‌ಗೆ ಮುಂಚಿತವಾಗಿ ವಿವಿಧ ಭಾಷೆಗಳನ್ನು ಅಡಕಗೊಳಿಸಿರಬೇಕು. ಅಡಕಗೊಳಿಸಿದ ಭಾಷೆಗಳನ್ನು ಕನ್ನಡಕವು ಅರ್ಥ ಮಾಡಿಕೊಂಡು ಅಕ್ಷರಗಳನ್ನಾಗಿ ಪರಿವರ್ತಿಸಿ ಅದನ್ನು ಪರದೆಯ ಮೇಲೆ ಮೂಡಿಸುತ್ತದೆ. ಅಷ್ಟೇ ಅಲ್ಲ; ಕೇವಲ ಮಾತುಗಳಲ್ಲದೇ ಕೆಲವು ವಿಶೇಷ ಶಬ್ದಗಳು, ಉದಾಹರಣೆಗೆ, ಸಂಗೀತ, ಸ್ಫೋಟ, ಕೆಲವು ದೈಹಿಕ ಸಂಜ್ಞೆಗಳನ್ನೂ ತನ್ನಲ್ಲಿರುವ ಕ್ಯಾಮೆರಾ ಹಾಗೂ ಮೈಕ್ರೋಫೋನ್ ಮೂಲಕ ಗುರುತಿಸಿ ಅದನ್ನು ಅಕ್ಷರಗಳಲ್ಲಿ ಹೇಳುವ ಸಾಮರ್ಥ್ಯವನ್ನು ಈ ಕನ್ನಡಕವು ಹೊಂದಿರುವುದು ವಿಶೇಷವಾಗಿದೆ.

ಶ್ರವಣದೋಷದ ಸಮಸ್ಯೆ ಇರುವವರಿಗೆ ತುಟಿಗಳ ಚಲನೆಯನ್ನು ಗುರುತಿಸಿ ಅರ್ಥೈಸಿಕೊಂಡು ಮಾತುಗಳನ್ನು ಗ್ರಹಿಸುವ ತರಬೇತಿಯನ್ನು ನೀಡಲಾಗಿರುತ್ತದೆ. ಆದರೂ, ಕೆಲವೊಮ್ಮೆ ತುಟಿಗಳ ಚಲನೆಯ ವೇಗ ಹೆಚ್ಚಿರುವಾಗ ಅದನ್ನು ಗ್ರಹಿಸಲಾಗದ ಮಿತಿ ಬಂದೊದಗುತ್ತದೆ. ಆದರೆ, ಈ ಕನ್ನಡಕವನ್ನು ಧರಿಸಿದರೆ ಈ ಸಮಸ್ಯೆ ಬರಲಾರದು. ಏಕೆಂದರೆ, ಇಲ್ಲಿ ತುಟಿಗಳ ಚಲನೆಯನ್ನು ಗ್ರಹಿಸುವುದು ಕೃತಕ ಬುದ್ಧಿಮತ್ತೆ. ಅದಕ್ಕೆ ದಣಿವಾಗದು. ಜೊತೆಗೆ, ಅದರ ಲೆಕ್ಕಾಚಾರ ಸಾಮರ್ಥ್ಯ ಹೆಚ್ಚಿರುವ ಕಾರಣ ಸೆಕೆಂಡಿಗೆ ಕನಿಷ್ಠವೆಂದರೂ 100 ಶಬ್ದಗಳನ್ನು ಗ್ರಹಿಸುವ ಸಾಮರ್ಥ್ಯ ಇರುತ್ತದೆ. ಇಷ್ಟು ಅಗಾಧ ಸಾಮರ್ಥ್ಯ ಇಲ್ಲದೇ ಇದ್ದರೂ, ಕೆಲವೊಮ್ಮೆ ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸುವಾಗ ಕೆಲಸಕ್ಕೆ ಬರಬಹುದು ಎಂಬ ಅಂದಾಜಿನಿಂದ ಈ ಸಾಮರ್ಥ್ಯವನ್ನು ಈ ಕನ್ನಡಕಕ್ಕೆ ನೀಡಲಾಗಿದೆ.

'ಸಿನಿಮಾಗಳನ್ನು ನೋಡುವಾಗ ಸಾಮಾನ್ಯ ಪ್ರೇಕ್ಷಕರೂ ಈಗ 'ಸಬ್‌ಟೈಟಲ್' ಜೊತೆಗೆ ವೀಕ್ಷಿಸುವುದು ಅಭ್ಯಾಸವಾಗಿದೆ. ಅದು ಶ್ರವಣದೋಷವುಳ್ಳ ಜನರಿಗೆ ದೊಡ್ಡ ವರವೇ ಸರಿ. ಆದರೂ ಕೆಲವೊಮ್ಮೆ ಎಲ್ಲ ಸಿನಿಮಾಗಳಿಗೂ 'ಸಬ್‌ಟೈಟಲ್' ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಈ ಕನ್ನಡಕವು ಬಳಕೆಗೆ ಬರುತ್ತದೆ. ಜೊತೆಗೆ, ಇದು ಕೇವಲ ಸಿನಿಮಾ ವೀಕ್ಷಣೆಗೆ ಮಾತ್ರ ಬಳಕೆಯಾಗದೇ, ದಿನನಿತ್ಯದ ಜೀವನದಲ್ಲೂ ಬಳಕೆಯಾಗುವುದರಿಂದ ಸ್ನೇಹಿತರು, ಕುಟುಂಬ ಸದಸ್ಯರು, ಸಹೋದ್ಯೋಗಿಗಳು – ಇತ್ಯಾದಿ ವ್ಯಕ್ತಿಗಳ ಜೊತೆಗೆ ಮಾತುಕತೆ ನಡೆಸುವಾಗ ಮಾತುಗಳನ್ನು ಪರಿಪೂರ್ಣವಾಗಿ ಅರ್ಥೈಸಿಕೊಳ್ಳುವುದು ಸಾಧ್ಯವಾಗುತ್ತದೆ' ಎಂದು 'ಎಕ್ಸ್‌ರಾಯ್' ಸಹ ಸಂಸ್ಥಾಪಕ ಹಾಗೂ ಮುಖ್ಯ ಮಾರುಕಟ್ಟೆ ಅಧಿಕಾರಿ ಮಿಶೆಲ್ ಫೆಲ್ಡ್‌ಮ್ಯಾನ್ ವ್ಯಾಖ್ಯಾನಿಸಿದ್ದಾರೆ.

ಜಾಗತಿಕವಾಗಿ ಈಗಾಗಲೇ ಅಮೇಜಾನ್ ಮಾದರಿಯ ಇ-ಕಾಮರ್ಸ್ ಜಾಲತಾಣಗಳಲ್ಲಿ ಈ ಕನ್ನಡಕವು ಮಾರಾಟಕ್ಕೆ ಲಭ್ಯವಿದೆ. ಸದ್ಯಕ್ಕೆ ಈ ಕನ್ನಡಕದ ಬೆಲೆ 350 ಅಮೆರಿಕನ್ ಡಾಲರ್‌ಗಳು. ಭಾರತಕ್ಕೂ ಸದ್ಯದಲ್ಲೇ ಈ ಕನ್ನಡಕವು ಕೊಳ್ಳಲು ಸಿಗಲಿದೆ. ಅಂದಹಾಗೆ, ಈ ಕನ್ನಡಕವನ್ನು ಶ್ರವಣದೋಷವುಳ್ಳವರೇ ಧರಿಸಬೇಕು ಎಂದೇನೂ ಇಲ್ಲ; ಯಾರು ಬೇಕಾದರೂ ಧರಿಸಬಹುದು. ಗ್ರಹಿಕಾ ಸಾಮರ್ಥ್ಯ ಕಡಿಮೆ ಇರುವವರು, ಗದ್ದಲ ಹೆಚ್ಚಿರುವ ಸ್ಥಳಗಳಲ್ಲಿ ಕೆಲಸ ಮಾಡುವವರು ಇದನ್ನು ಧರಿಸಿ ಮಾತುಗಳನ್ನು ಸಮರ್ಥವಾಗಿ ಅರ್ಥ ಮಾಡಿಕೊಳ್ಳುವುದೂ ಇದರಿಂದ ಸಾಧ್ಯವಾಗುತ್ತದೆ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಮಾದರಿ ಪ್ರಶ್ನೋತ್ತರ

ಎಸ್ಸೆಸ್ಸೆಲ್ಸಿ

6) ಏಕಲಿಂಗಿ ಹೂವು ಯಾವುದು?

ಉತ್ತರ:- ಒಂದು ಹೂವು ಕೇವಲ ಕೇಸರಗಳನ್ನೋ ಅಥವಾ ಶಲಾಕಗಳನ್ನೋ ಹೊಂದಿದ್ದರೆ ಅದು ಏಕಲಿಂಗಿ ಹೂವು ಎನ್ನುವರು **ಉದಾ:**- ಪಪಾಯ, ಕಲ್ಲಂಗಡಿ


7) ಗೋಳೀಯ ದರ್ಪಣದ ವಕ್ರತಾ ಕೇಂದ್ರ ಎಂದರೇನು?

ಉತ್ತರ:- ಗೋಳೀಯ ದರ್ಪಣದ ಪ್ರತಿಫಲಿಸುವ ಮೇಲ್ಮೈ ಗೋಳದ ಒಂದು ಭಾಗವನ್ನು ರೂಪಿಸುತ್ತದೆ. ಈ ಗೋಳದ ಕೇಂದ್ರವನ್ನು ವಕ್ರತಾ ಕೇಂದ್ರ ಎನ್ನುವರು.

8) ಪ್ರಭೇದಿಕರಣಕ್ಕೆ ಕಾರಣವಾಗುವ ಅಂಶಗಳನ್ನು ಹೆಸರಿಸಿ

ಉತ್ತರ:- ಭಿನ್ನತೆಗಳು, ಭೌಗೋಳಿಕ ಬೇರ್ಪಡುವಿಕೆ.

9) ಕೊಟ್ಟಿರುವ ಚಿತ್ರವನ್ನು ಗಮನಿಸಿ ಚಿತ್ರವು ಸೂಚಿಸುವ ದೃಷ್ಟಿ ದೋಷವನ್ನು ಹೆಸರಿಸಿ. ಮತ್ತು ಆ ಡೃಷ್ಟಿ ದೋಷವನ್ನು ಸರಿಪಡಿಸಲು ಉಪಯೋಗಿಸುವ ಮಸೂರವನ್ನು ತಿಳಿಸಿ



ಉತ್ತರ:- * ಸಮೀಪ ದೃಷ್ಟಿದೋಷ(ಮಯೊಪಿಯಾ)
* ನಿಮ್ನ ಮಸೂರ

10) 15 ಸೆಂ.ಮೀ ಸಂಗಮದೂರವನ್ನು ಹೊಂದಿರುವ ನಿಮ್ನ ದರ್ಪಣದ ಮುಂದೆ 25 ಸೇಂ.ಮೀ ದೂರದಲ್ಲಿ ವಸ್ತುವನ್ನು ಇರಿಸಿದೆ. ಸ್ಪಷ್ಟ ಬಿಂಬವನ್ನು ಪಡೆಯಲು ಪರದೆಯನ್ನು ದರ್ಪಣದಿಂದ ಎಷ್ಟು ದೂರದಲ್ಲಿ ಇರಿಸಬೇಕು?

ಉತ್ತರ:– u = 25cm - ನಿಮ್ನ ದರ್ಪಣ

f = 15cm

V = ?

ದರ್ಪಣ ಸೂತ್ರ

$$\frac{1}{f}=\frac{1}{v}+\frac{1}{u}\ldots\ldots\therefore$$

$$\frac{1}{15}=\frac{1}{v}+\frac{1}{25}$$

$$\frac{1}{v}=\frac{1}{25}-\frac{1}{15}$$

$$\frac{1}{v}=\frac{3-5}{75}$$

$$v=\frac{-75}{2}=-37.5cm$$

$$\therefore v=-37cm$$

ಸ್ಪಷ್ಟ ಪ್ರತಿಬಿಂಬವನ್ನು ಪಡೆಯಲು ಪರದೆಯನ್ನು 37.5 ಸೆಂ.ಮೀ ದೂರದಲ್ಲಿ ಇರಿಸಬೇಕು.

11) ಪಳೆಯುಳಿಕೆ ಇಂಧನ ಎಂದರೇನು? ಉದಾ ಕೊಡಿ

ಉತ್ತರ:- ಲಕ್ಷಾಂತರ ವರ್ಷಗಳ ಹಿಂದೆ ಭೂಮಿಯಡಿಯಲ್ಲಿ ಹುದುಗಿದ್ದ ಸಸ್ಯ ಮತ್ತು ಪ್ರಾಣಿಗಳು ಆಕ್ಸಿಜನ್ ಸಂಪರ್ಕವಿಲ್ಲದ ಅಪಾರ ಒತ್ತಡ ಮತ್ತು ಉಷ್ಣತೆಗೆ ಒಳಗಾಗಿ ರೂಪುಗೊಂಡ ಇಂಧನಕ್ಕೆ ಪಳಯುಳಿಕೆ ಇಂಧನಗಳು ಎನ್ನುವರು

ಉದಾ:- ಕಲ್ಲಿದ್ದಲು ಮತ್ತು ಪೆಟ್ರೋಲಿಯಂ

12) ಕೋಶೀಯ ರಚನೆಗಳ ಮೇಲಿನಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವು ಯಾವುದರಿಂದ ಆಗಬಹುದಾಗಿದೆ?

ಉತ್ತರ:- ಪ್ರತಿ ಹೊಸ ಪೀಳಿಗೆಯು ಈ ಮೊದಲೇ ಅಸ್ತಿತ್ವದಲ್ಲಿರುವ ಜೀವಿಗಳ ಡಿಎನ್‌ಎ ಪ್ರತಿಗಳ ಸಂಯೋಜನೆಯಿಂದ ಉಂಟಾದ ಪಕ್ಷದಲ್ಲಿ ಪ್ರತಿ ಹೊಸ ಪೀಳಿಗೆಯು ಹಿಂದಿನ ಪೀಳಿಗೆ ಹೊಂದಿರುವುದಕ್ಕಿಂತ ಎರಡು ಪಟ್ಟು ಹೆಚ್ಚು ಪ್ರಮಾಣದ ಡಿಎನ್‌ಎಯನ್ನು ಹೊಂದಿರಬೇಕಾಗುತ್ತದೆ. ಇದರಿಂದ ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವಿರುತ್ತದೆ

13) ಪಟ್ಟಿ:1ರಲ್ಲಿ ಸಾಧನಗಳ ಹೆಸರನ್ನು ಪಟ್ಟಿ-2ರಲ್ಲಿ ಅವುಗಳ ಅನುರೂಪ ಕಾರ್ಯಗಳನ್ನು ನೀಡಲಾಗಿದೆ. ಅವುಗಳನ್ನು ಹೊಂದಿಸಿ ಬರೆಯಿರಿ

ಪಟ್ಟಿ: 1

(ಎ) ದಿಕ್ಪರಿವರ್ತಕ	(ಬಿ) ಫ್ಯೂಸ್
(ಸಿ) ಗೆಲ್ವನೋ ಮೀಟರ್	(ಡಿ) ವಿದ್ಯುತ್ ಜನಕ

ಪಟ್ಟಿ-2

1) ಒಂದು ಮಂಡಲದಲ್ಲಿ ವಿದ್ಯುತ್ ಪ್ರವಾಹದ ಉಪಸ್ಥಿತಿಯನ್ನು ಕಂಡುಹಿಡಿಯುತ್ತದೆ.
2) ಯಾಂತ್ರಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುತ್ತದೆ.
3) ವಿಭವಾಂತರವನ್ನು ಅಳೆಯುತ್ತದೆ.
4) ವಾಹಕದ ಚಲನೆಯ ದಿಕ್ಕನ್ನು ತೋರಿಸುತ್ತದೆ.
5) ವಿದ್ಯುತ್ ಉಪಕರಣಗಳನ್ನು ರಕ್ಷಿಸುತ್ತದೆ.
6) ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುತ್ತದೆ.
7) ವಿದ್ಯುತ್ ಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ.


ಉತ್ತರ:- ಎ-6 ಬಿ-5 ಸಿ-1 ಡಿ-2

14) ಯಾವುದಕ್ಕೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು?

ಉತ್ತರ:- ಅಲ್ಯುಮಿನಿಯಂ ಆಕ್ಸೈಡ್ ಸತುವಿನ ಆಕ್ಸೈಡ್‌ಗಳಂಥ ಕೆಲವು ಲೋಹದ ಆಕ್ಸೈಡ್‌ಗಳು ಆಮ್ಲೀಯ ಹಾಗೂ ಪ್ರತ್ಯಾಮ್ಲೀಯ ಗುಣಗಳೆರಡನ್ನೂ ಪ್ರದರ್ಶಿಸುತ್ತವೆ. ಇಂತಹ ಲೋಹದ ಆಕ್ಸೈಡ್‌ಗಳು ಆಮ್ಲ ಮತ್ತು ಪ್ರತ್ಯಾಮ್ಲಗಳೆರಡರ ಜೊತೆಗೂ ಪ್ರತಿವರ್ತಿಸಿದಾಗ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತವೆ. ಇವುಗಳಿಗೆ ಉಭಯಧರ್ಮಿ **(amphoteric)** ಆಕ್ಸೈಡ್‌ಗಳು ಎನ್ನುವರು.

15) ಅಮೀಬಾದ ಕೋಶವಿಭಜನೆಯ ಚಿತ್ರ ಬರೆಯಿರಿ

ಉತ್ತರ:-



16) ಲೈಂಗಿಕತೆಯ ಹಿನ್ನೆಲೆಯಲ್ಲಿ ಉಂಟಾಗುವ ರೋಗಗಳು ಯಾವುವು?

ಉತ್ತರ:- ಗೊನೋರಿಯಾ, ಸಿಫಿಲಿಸ್ ಮತ್ತು ಏಡ್ಸ್

ಮಾದರಿ ಪ್ರಶ್ನೋತ್ತರ

ರಸಾಯನವಿಜ್ಞಾನ

ಪಿಯುಸಿ

8) ಯಾವುದಕ್ಕೆ ಆಲ್ಕೈಲಿಡೀನ್ ಎನ್ನುವರು?


ಉತ್ತರ:- ಒಂದೇ ಬಗೆಯ ಹ್ಯಾಲೋಜನ್‌ನ್ನು ಹೊಂದಿರುವ ಡೈ ಹ್ಯಾಲೋ ಆಲ್ಕೇನ್‌ಗಳನ್ನು ಆಲ್ಕೈಲಿಡೀನ್ ಅಥವಾ ಆಲ್ಕೈಲೀನ್ ಡೈ ಹ್ಯಾಲೈಡ್‌ಗಳು ಎನ್ನುವರು..

9) ಬಗೆಯ ಹ್ಯಾಲೋಜನ್‌ನ್ನು ಹೊಂದಿರುವ ಡೈ ಹ್ಯಾಲೋ ಸಂಯುಕ್ತಗಳ ವರ್ಗಿಕರಣವನ್ನು ಬರೆಯಿರಿ ಪುಟ-3: ಸಂ-2


ಉತ್ತರ:- ಒಂದೇ ಬಗೆಯ ಹ್ಯಾಲೋಜನ್‌ನ್ನು ಹೊಂದಿರುವ ಡೈ ಹ್ಯಾಲೋ ಸಂಯುಕ್ತಗಳನ್ನು 'ಜೆಮಿನಲ್ ಹ್ಯಾಲೈಡ್'ಗಳು (ಹ್ಯಾಲೋಜನ್ ಪರಮಾಣುಗಳು ಒಂದೇ ಕಾರ್ಬನ್‌ಗೆ ಬಂಧಿಸಿರುವ) ಮತ್ತು 'ವಿಸಿನಲ್ ಹ್ಯಾಲೈಡ್‌ಗಳು(ಹ್ಯಾಲೋಜನ್ ಪರಮಾಣುಗಳು ಅಕ್ಕ ಪಕ್ಕದ ಕಾರ್ಬನ್‌ನೊಂದಿಗಿರುವ) ಎಂದು ವರ್ಗೀಕರಿಸಿದೆ.

10) ಈ ಕೆಳಗಿನವುಗಳ ಉತ್ಪನ್ನಗಳ ಬರೆಯಿರಿ.

ಪುಟ-8: ಸಂ-2 ಉತ್ತರ:-



ಉತ್ತರ



11) ಹ್ಯಾಲೋ ಆಲ್ಕೇನ್‌ಗಳು ಮತ್ತು ಹ್ಯಾಲೋ ಆರೀನ್‌ಂಗಳ ಭೌತಿಕ ಲಕ್ಷಣಗಳನ್ನು ಬರೆಯಿರಿ. ಪುಟ- 9: ಸಂ-2

ಉತ್ತರ:- ಹ್ಯಾಲೋ ಆಲ್ಕೇನ್‌ಗಳು ಮತ್ತು ಹ್ಯಾಲೋ ಆರೀನ್‌ಗ ಳ ಭೌತಿಕ ಲಕ್ಷಣಗಳು:- ಶುದ್ದವಾದ ಆಲ್ಕೈ ಹಾಲೈಡ್‌ಗಳು ವರ್ಣರಹಿತವಾಗಿರುತ್ತವೆ ಆದರೆ ಬ್ರೋಮೈಡ್‌ಗಳು ಮತ್ತು ಅಯೋಡೈಡ್‌ಗಳು ಬೆಳಕಿಗೆ ತೆರೆದಿಟ್ಟಾಗ ಬಣ್ಣವನ್ನು ಪಡೆಯುತ್ತವೆ. ಆವಿಯಾಗುವ ಹ್ಯಾಲೋಜನ್ ಸಂಯುಕ್ತಗಳು ಸುವಾಸನೆಯನ್ನು ಹೊಂದಿವೆ.

12) ಹ್ಯಾಲೋ ಆಲ್ಕೈನ್‌ಗಳ ಕ್ರಿಯೆಗಳನ್ನು ಯಾವ ಯಾವ ಗುಂಪುಗಳಾಗಿ ವಿಂಗಡಿಸಬಹುದು? . ಪುಟ- 11: ಸಂ-2

ಉತ್ತರ:-ಹ್ಯಾಲೋ ಆಲ್ಕೈನ್‌ಗಳ ಕ್ರಿಯೆಗಳನ್ನು ಈ ಕೆಳಗಿನ ಗುಂಪುಗಳಾಗಿ ವಿಂಗಡಿಸಬಹುದು.

(i) ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆಗಳು
(ii) ವರ್ಜ್ಯನ ಕ್ರಿಯೆಗಳು
(iii) ಲೋಹಗಳೊಂದಿಗಿನ ಕ್ರಿಯೆಗಳು

13) ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆಗಳ ಬಗ್ಗೆ ಬರೆಯಿರಿ

ಉತ್ತರ: ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆಯಲ್ಲಿ ನ್ಯೂಕ್ಲಿಯೋಕಾಂಕ್ಷಿಯು, ಭಾಗಶಃ ಧನಾವೇಶವನ್ನು ಹೊಂದಿದ ಹ್ಯಾಲೋಜನ್‌ನೊಂದಿಗೆ ಬಂಧಿಸಿರುವ ಕಾರ್ಬನ್ ಪರಮಾಣುವಿನ ಮೇಲೆ ವರ್ತಿಸುತ್ತದೆ. ಆದೇಶ್ಯಕ್ರಿಯೆಯಾದಂತೆ ನಿರ್ಗಮಿಸುವ ಹ್ಯಾಲೋಜನ್ ಪರಮಾಣು, ಹ್ಯಾಲೈಯ್ಡ್ ಆಯಾನ್ ಆಗಿ ಹೊರಹೋಗುತ್ತದೆ. ಈ ಆದೇಶ್ಯ ಕ್ರಿಯೆಯು ನ್ಯೂಕ್ಲಿಯೋಕಾಂಕ್ಷಿಯಿಂದ ಪ್ರಾರಂಭಗೊಳ್ಳುವುದರಿಂದ ಇದನ್ನು ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆ ಎನ್ನುವರು. . **ಪುಟ-11: ಸಂ-2**

14) ಯಾವುದಕ್ಕೆ 'ವಿಲೋಮ ವಿನ್ಯಾಸ' ಎನ್ನುವರು.

ಉತ್ತರ:- ದ್ವೈಅಣ್ವಿಕ ನ್ಯೂಕ್ಲಿಯೋಕಾಂಕ್ಷಿಯ ಸ್ಥಾನಪಲ್ಲಟ ಕ್ರಿಯೆಯನ್ನು SN2 ವಿವರಿಸುತ್ತದೆ. ಒಳಬರುವ ನ್ಯೂಕ್ಲಿಯೋಕಾಂಕ್ಷಿ ಮತ್ತು ಆಲ್ಕೈಲ್ ಹ್ಯಾಲೈಡ್ ಪರಸ್ಪರ ಪ್ರತಿಕ್ರಿಯಿಸಿದಾಗ ಕಾರ್ಬನ್-ಹ್ಯಾಲೈಡ್ ಬಂಧ ವಿಭಜನೆಯಾಗಿ ಕಾರ್ಬನ್-OH ಬಂಧ ಉಂಟಾಗುತ್ತದೆ. ಈ ಎರಡು ಪ್ರಕ್ರಿಯೆಗಳು ಏಕಕಾಲದಲ್ಲಿ ಒಂದೇ ಹಂತದಲ್ಲಿ ನಡೆಯುವುದರಿಂದ 'ಮಧ್ಯಂತರಕಗಳು' ಉಂಟಾಗುವುದಿಲ್ಲ. ಕ್ರಿಯೆ ಮುಂದುವರಿಯುತ್ತಿರುವಂತೆ ನ್ಯೂಕ್ಲಿಯೋಕಾಂಕ್ಷಿ ಮತ್ತು ಕಾರ್ಬನ್ ನಡುವೆ ಬಂಧ ಉಂಟಾಗುವುದರಿಂದ ಕಾರ್ಬನ್ ಪರಮಾಣು ಮತ್ತು ಹೊರಹೋಗುವ ಗುಂಪಿನ ನಡುವಿನ ಬಂಧವು ದುರ್ಬಲವಾಗುವುದು. ಹೀಗಾದಾಗ ಬಿರುಗಾಳಿಗೆ ಹಿಂದು ಮುಂದಾಗಿ ತಿರುಗಿದ ಕೊಡೆಯಂತೆ ಹೊರಹೋಗುವ ಗುಂಪು ಕಾರ್ಬನ್ ಪರಮಾಣುವನ್ನು ಜೋರಾಗಿ ತಳ್ಳುವುದು. ಪರಿಣಾಮವಾಗಿ, ಉಂಟಾಗುವ ಉತ್ಪನ್ನದಲ್ಲಿ ಕಾರ್ಬನ್ ವಿಲೋಮ ವಿನ್ಯಾಸವನ್ನು ಪಡೆಯುತ್ತದೆ. ಈ ಪ್ರಕ್ರಿಯೆಯನ್ನು 'ವಿಲೋಮ ವಿನ್ಯಾಸ' ಎನ್ನುವರು.

15)ಯಾವ ವಿದ್ಯಮಾನವನ್ನು ದ್ಯುತಿ ಸಮಾಂಗತೆ (optical activity) ಎನ್ನುವರು.? ಪುಟ-16: ಸಂ-2

ಉತ್ತರ:-ಕೆಲವು ಸಂಯುಕ್ತಗಳು ಸಮತಲದೃವೀಕೃತ ಬೆಳಕನ್ನು (ಸಾಮಾನ್ಯ ಬೆಳಕನ್ನು ನಿಕೋಲ್‌ಅ ಶ್ರಗದ ಮೂಲಕ ಹಾಯಿಸಿ ಪಡೆದದ್ದು) ತಿರುಗಿಸುವ ಗುಣವನ್ನು ಪಡೆದಿರುತ್ತದೆ. ಅಂತಹ ಸಂಯುಕ್ತಗಳಿಗೆ 'ದ್ಯುತಿ ಪಟುತ್ವ ಸಂಯುಕ್ತಗಳು' ಎನ್ನುವರು. ಕೆಲವು ಸಂಯುಕ್ತಗಳು ಸಮತಲ ದೃವೀಕೃತ ಬೆಳಕನ್ನು ಬಲಕ್ಕೆ ತಿರುಗಿಸುತ್ತದೆ. ಎಂದರೆ ಗಡಿಯಾರದ ಚಲನೆಯ ದಿಕ್ಕಿನಲ್ಲಿ. ಇದನ್ನು ಬಲಭ್ರಾಮಕ (dextrorotatory)) ಎನ್ನುವರು. ಇದನ್ನು ಭ್ರಮಣ ಕೋನಕ್ಕಿಂತ ಮುಂಚೆ ''d' ಅಥವಾ '+' ಚಿಹ್ನೆಯಿಂದ ಸೂಚಿಸುತ್ತಾರೆ. ಸಮತಲ ಧೃವೀಕೃತ ಬೆಳಕನ್ನು ಎಡಕ್ಕೆ ತಿರುಗಿಸಿದರೆ (ಗಡಿಯಾರದ ಚಲನೆಯ ವಿರುದ್ಧ ದಿಕ್ಕಿನಲ್ಲಿ) ಅಂತಹ ಸಂಯುಕ್ತಗಳನ್ನು ಎಡಭ್ರಾಮಕ್ ((laevorotatory) ಎನ್ನುವರು. ಭ್ರಮಣ ಕೋನದ ಮುಂಚೆ 'ಈ' ರೂಪ ಅಥವಾ ಋಣ (–) ಚಿಹ್ನೆಯಿಂದ ಸೂಚಿಸುತ್ತಾರೆ. ಅಂತಹ ಧನ(+) ಮತ್ತು ಋಣ (-) ಸಮಾಂಗಿಗಳ ಸಂಯುಕ್ತಗಳನ್ನು ದ್ಯುತಿಸಮಾಂಗಿ(optical isomer))ಗಳೆಂದು ಮತ್ತು ಆ ವಿದ್ಯಮಾನವನ್ನು ದ್ಯುತಿಸಮಾಂಗತೆ ((optical activity) ಎನ್ನುವರು.

16) ಹ್ಯಾಲೋಆಲ್ಕೇನ್‌ಗಳು ಯಾವದ್ರಾವಕದಲ್ಲಿ ಕರಗುತ್ತದೆ. ಏಕೆ?

ಉತ್ತರ:- ಹ್ಯಾಲೋಆಲ್ಕೇನ್‌ಗಳು ಸಾವಯವ ದ್ರಾವಕದಲ್ಲಿ ಕರಗುತ್ತದೆ. ಏಕೆಂದರೆ ಹ್ಯಾಲೋಲ್ಕೇನ್ ಮತ್ತು ಸಾವಯವ ದ್ರಾವಕಗಳ ನಡುವಿನ ಹೊಸ ಅಂತರಾಣ್ವಿಕ ಆಕರ್ಷಣಾ ಬಲವು ಸರಿ ಸುಮಾರು ಒಂದೇ ಆಗಿರುವುದರಿಂದ, ಹ್ಯಾಲೋಆಲ್ಕೇನ್ ಮತ್ತು ದ್ರಾವಕದ ಅಣುಗಳನ್ನು ಸುಲಭವಾಗಿ ಒಡೆಯಬಹುದು

17) ಯಾವುದಕ್ಕೆ ಅಸಮ್ಮಿತಿ ಕಾರ್ಬನ್ ಅಥವಾ ಸ್ಟಿರಿಯೋ ಕೇಂದ್ರ ಎನ್ನುವರು.? .ಪುಟ-17: ಸಂ-2

ಉತ್ತರ:- ಕೇಂದ್ರ ಚತುಮುಖೀಯ ಕಾರ್ಬನ್ ಪರಮಾಣುವಿನ ಸುತ್ತ ನಾಲ್ಕು ವಿಭಿನ್ನ ಗುಂಪುಗಳು (ವೆಲೆನ್ಸಿ) ಜೋಡಣೆಯಾಗಿದ್ದರೆ, ಅಂತಹ ಕಾರ್ಬನ್‌ನ್ನು ಅಸಮ್ಮಿತಿ ಕಾರ್ಬನ್ ಅಥವಾ ಸ್ಟಿರಿಯೋ ಕೇಂದ್ರ ಎನ್ನುವರು. ಇದರ ಪರಿಣಾಮವಾಗಿ ಅಣುವು ಸಮತಲವನ್ನು ಕಳೆದುಕೊಂಡು ಅಸಮ್ಮಿತಿ ಅಣುವಾಗಿ ಸಾವಯವ ಸಂಯುಕ್ತಗಳ ದ್ಯುತಿಪಟುತ್ವಕ್ಕೆ ಕಾರಣವಾಗುತ್ತದೆ.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಮೋದಿ ಭೇಟಿಗೆ ₹30 ಕೋಟಿ ವೆಚ್ಚದ ಆರೋಪ: ಬಂಧನ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: 135 ಜನರನ್ನು ಬಲಿ ತೆಗೆದುಕೊಂಡ ಮೊರ್ಬಿ ತೂಗು ಸೇತುವೆ ದುರಂತದಲ್ಲಿ ಬದುಕುಳಿದವರನ್ನು ಪ್ರಧಾನಿ ಮೋದಿ ಅವರು ಭೇಟಿಯಾಗಲು ₹30 ಕೋಟಿ ವ್ಯಯಿಸಲಾಗಿದೆ ಎಂದು ಸುಳ್ಳುಸುದ್ದಿ ಟ್ವೀಟ್ ಮಾಡಿದ್ದ ಆರೋಪದ ಮೇಲೆ ತೃಣಮೂಲ ಕಾಂಗ್ರೆಸ್ ರಾಷ್ಟ್ರೀಯ ವಕ್ತಾರ ಸಾಕೇತ್ ಗೋಖಲೆ ಅವರನ್ನು ರಾಜಸ್ಥಾನದ ಜೈಪುರ ವಿಮಾನ ನಿಲ್ದಾಣದಲ್ಲಿ ಸೋಮವಾರ ರಾತ್ರಿ ಅಹಮದಾಬಾದ್ ಸೈಬರ್ ಸೆಲ್ ಪೊಲೀಸರು ಬಂಧಿಸಿದ್ದಾರೆ.

ಸಾಕೇತ್ ಅವರು ವದಂತಿ ಹರಡಿದ ಹಿನ್ನೆಲೆಯಲ್ಲಿ ವಶಕ್ಕೆ ಪಡೆಯಲಾಗಿದೆ. ಇಂಥ ಸುಳ್ಳು ಸುದ್ದಿಗಳನ್ನು ಹರಡುವವರಿಗೆ ಇದು ಎಚ್ಚರಿಕೆಯ ಗಂಟೆ ಎಂದು ಪೊಲೀಸರು ಹೇಳಿದ್ದಾರೆ.

ಸಾಕೇತ್ ಅವರನ್ನು ಇಲ್ಲಿನ ಮೆಟ್ರೊಪಾಲಿಟನ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಸುಳ್ಳು ಸುದ್ದಿ ಹರಡಿದ ಟ್ವೀಟ್ ಸಂಬಂಧ ಮತ್ತಷ್ಟು ವಿಚಾರಣೆಗಾಗಿ ತಮ್ಮ ವಶಕ್ಕೆ ನೀಡುವಂತೆ ಪೊಲೀಸರು ಮನವಿ ಮಾಡಿದರು. ಇದೇ ಗುರುವಾರದವರೆಗೆ ಸಾಕೇತ್ ಅವರನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿ ನ್ಯಾಯಾಲಯ ಆದೇಶಿಸಿದೆ.



ಸಾಕೇತ್ ಗೋಖಲೆ

ಅಹಮದಾಬಾದ್‌ನ ಶಾಹಿಬಾಗ್ ನಿವಾಸಿ, ಬಿಜೆಪಿ ಪದಾಧಿಕಾರಿ ಅಮಿತ್ ಬಾಲ್‌ಚಂದ್ ಕೊಠಾರಿ ಅವರು ನೀಡಿದ ದೂರಿನ ಮೇಲೆ ಎರಡು ದಿನಗಳ ಹಿಂದೆ ಎಫ್‌ಐಆರ್ ದಾಖಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಕಾಂಗ್ರೆಸ್: ರಾಜ್ಯ ಉಸ್ತುವಾರಿ ಬದಲಾವಣೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಕೆಲವು ಸಂಘಟನಾತ್ಮಕ ಹುದ್ದೆಗಳಲ್ಲಿ ಬದಲಾವಣೆಗಳನ್ನು ಮಾಡಿದ್ದಾರೆ. ಪಕ್ಷದಲ್ಲಿ ನಾಯಕತ್ವ ಬದಲಾವಣೆಗಾಗಿ ದನಿ ಎತ್ತಿದ್ದ ಗುಂಪಿನ (ಜಿ–23) ಮುಖಂಡ ಅಖಿಲೇಶ್ ಪ್ರಸಾದ್ ಸಿಂಗ್ ಅವರನ್ನು ಬಿಹಾರ ರಾಜ್ಯ ಘಟಕದ ಮುಖ್ಯಸ್ಥರನ್ನಾಗಿ ನೇಮಿಸಿದ್ದಾರೆ.

ರಾಜಸ್ಥಾನದ ಉಸ್ತುವಾರಿ ಹೊಣೆಗೆ ರಾಜೀನಾಮೆ ನೀಡಿದ್ದ ಅಜಯ್ ಮಾಕನ್ ಅವರ ಜಾಗಕ್ಕೆ ಪಂಜಾಬ್‌ನ ಸುಖ್‌ವಿಂದರ್ ಸಿಂಗ್ ರಾಂಧವ ಅವರು ಬಂದಿದ್ದಾರೆ. ಚಾಲನಾ ಸಮಿತಿಗೂ ರಾಂಧವ ಅವರನ್ನು ನಾಮನಿರ್ದೇಶನ ಮಾಡಲಾಗಿದೆ. ಸೋನಿಯಾ ಗಾಂಧಿ ಅವರ ಆಪ್ತರಾಗಿ ಗುರುತಿಸಿಕೊಂಡಿರುವ ಕುಮಾರಿ ಶೆಲ್ಜಾ ಅವರಿಗೆ ಪ್ರಧಾನ ಕಾರ್ಯದರ್ಶಿ ಹುದ್ದೆಯ ಜೊತೆಗೆ ಛತ್ತೀಸಗಢದ ಉಸ್ತುವಾರಿ ನೀಡಲಾಗಿದೆ.

ದೆಹಲಿ ಘಟಕದ ಉಸ್ತುವಾರಿ ಹೊತ್ತಿರುವ ಶಕ್ತಿಸಿಂಹ ಗೋಹಿಲ್ ಅವರಿಗೆ ಹರಿಯಾಣದ ಉಸ್ತುವಾರಿ ವಹಿಸಲಾಗಿದೆ. ಅಜಯ್ ಮಾಕನ್, ಪಿ.ಎಲ್. ಪೂನಿಯಾ ಹಾಗೂ ವಿವೇಕ್ ಬನ್ಸಲ್ ಅವರಿಗೆ ವಹಿಸಿದ್ದ ಹುದ್ದೆ ಹಾಗೂ ಜವಾಬ್ದಾರಿಗಳಿಂದ ಬಿಡುಗಡೆ ಮಾಡಲಾಗಿದ್ದು, ಅವರು ಪಕ್ಷಕ್ಕೆ ನೀಡಿದ ಕೊಡುಗೆಯನ್ನು ಕಾಂಗ್ರೆಸ್ ಶ್ಲಾಘಿಸಿದೆ.

‘ದುರ್ಬಲ ಮಕ್ಕಳನ್ನು ಶೋಚನೀಯ ಸ್ಥಿತಿಯಲ್ಲಿ ಬಿಂಬಿಸಬೇಡಿ’

ನವದೆಹಲಿ (ಪಿಟಿಐ): ‘ನಿಧಿ ಸಂಗ್ರಹದ ಉದ್ದೇಶಕ್ಕಾಗಿ ಮುದ್ರಣ, ದೃಶ್ಯ, ಸಾಮಾಜಿಕ ಮಾಧ್ಯಮ ಮತ್ತು ವೆಬ್‌ಸೈಟ್‌ಗಳಲ್ಲಿ ಪ್ರಕಟಿಸುವ ಜಾಹೀರಾತುಗಳಲ್ಲಿ ದುರ್ಬಲ ಮಕ್ಕಳನ್ನು ಶೋಚನೀಯ ರೀತಿಯಲ್ಲಿ ತೋರಿಸುವುದನ್ನು ನಿಲ್ಲಿಸಿ’ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಎನ್‌ಸಿಪಿಸಿಆರ್) ಸ್ವಯಂ ಸೇವಾ ಸಂಸ್ಥೆಗಳಿಗೆ (ಎನ್‌ಜಿಒ) ಮಂಗಳವಾರ ಸೂಚಿಸಿದೆ.

ಲಖಿಂಪುರ–ಖೀರಿ ಪ್ರಕರಣ: ಆಶಿಶ್ ಮಿಶ್ರಾ ವಿರುದ್ಧ ದೋಷಾರೋಪ

ಲಖನೌ: ಲಖಿಂಪುರ–ಖೀರಿ ಪ್ರಕರಣಕ್ಕೆ ಸಂಬಂಧಿಸಿ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಮತ್ತು ಇತರ 12 ಮಂದಿಯ ವಿರುದ್ಧ ಇಲ್ಲಿನ ಜಿಲ್ಲಾ ನ್ಯಾಯಾಲಯ ಮಂಗಳವಾರ ದೋಷಾರೋಪ ಹೊರಿಸಿದೆ.

ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಮತ್ತು ಉಳಿದ ಆರೋಪಿಗಳ ವಿರುದ್ಧ 302 (ಕೊಲೆ), 120 ಬಿ (ಕ್ರಿಮಿನಲ್ ಪಿತೂರಿ) ಸೇರಿದಂತೆ ಭಾರತೀಯ ದಂಡ ಸಂಹಿತೆಯ ವಿವಿಧ ಕಲಂಗಳಡಿ ಆರೋಪ ಹೊರಿಸಲಾಗಿದೆ.

ಪ್ರಕರಣದ ಮುಂದಿನ ವಿಚಾರಣೆ ಡಿಸೆಂಬರ್ 16 ರಂದು ನಡೆಯಲಿದೆ ಎಂದು ಸರ್ಕಾರಿ ಅಭಿಯೋಜಕ ಅರವಿಂದ ತ್ರಿಪಾಠಿ ತಿಳಿಸಿದ್ದಾರೆ.

ತಮಿಳುನಾಡಿನ ಹಲವೆಡೆ ಭಾರಿ ಮಳೆ ಮುನ್ಸೂಚನೆ

ಚೆನ್ನೈ: ಬಂಗಾಳ ಕೊಲ್ಲಿಯಲ್ಲಿ ಕಡಿಮೆ ಒತ್ತಡದ ಪ್ರದೇಶ ಸೃಷ್ಟಿಯಾಗುತ್ತಿದೆ. ಇದು ಬುಧವಾರದ ವೇಳೆಗೆ ಚಂಡಮಾರುತವಾಗಿ ಪರಿವರ್ತನೆಯಾಗುವ ಸಾಧ್ಯತೆ ಇದ್ದು, ತಮಿಳುನಾಡಿನ ಹಲವೆಡೆ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮಂಗಳವಾರ ಮುನ್ಸೂಚನೆ ನೀಡಿದೆ.

ರಾಜ್ಯದ ಉತ್ತರ ಭಾಗದ ಜಿಲ್ಲೆಗಳು ಹಾಗೂ ಕಾವೇರಿ ನದಿ ಪಾತ್ರದ ಪ್ರದೇಶಗಳಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯು 10 ರಕ್ಷಣಾ ತಂಡಗಳನ್ನು ರಚಿಸಿದೆ. ಚೆನ್ನೈ, ನಾಗಪಟ್ಟಣ, ಚೆಂಗಲ್‌ಪಟ್ಟು, ತಂಜಾವೂರು, ತಿರುವರೂರ್, ಕಡಲೂರು, ವಿಲ್ಲುಪುರಂ, ಮೈಲಾಡುತುರೈ, ತಿರುವಳ್ಳೂರು ಹಾಗೂ ಕಾಂಚಿಪುರ ಜಿಲ್ಲೆಗಳಿಗೆ ಈ ತಂಡಗಳನ್ನು ಕಳುಹಿಸಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಧರ್ಮ ಎಂಬುದು ಭಗವಂತ ಮತ್ತು ಮನುಷ್ಯನ ಬಗ್ಗೆ ಪ್ರೀತಿಯಲ್ಲದೆ ಬೇರೇನೂ ಅಲ್ಲ.

–ಶಂಕರಾಚಾರ್ಯ

ಸ್ವತಂತ್ರ ಸುದ್ದಿವಾಹಿನಿಯ ಅನುಪಸ್ಥಿತಿ ದೇಶವನ್ನು ಕಾಡುವುದು ಖಚಿತ

ಎನ್‌ಡಿಟಿವಿ ಸುದ್ದಿವಾಹಿನಿಗೆ ಸಂಬಂಧಿಸಿದ ಇತ್ತೀಚಿನ ಬೆಳವಣಿಗೆಯು ಭಾರತದ ಟಿ.ವಿ. ಸುದ್ದಿವಾಹಿನಿ ಪತ್ರಿಕೋದ್ಯಮಕ್ಕೆ ಮತ್ತು ಒಟ್ಟಾಗಿ ಪತ್ರಿಕೋದ್ಯಮಕ್ಕೆ ಬೇಸರದ ಸಂಗತಿ. ಎನ್‌ಡಿಟಿವಿ ಎಂಬ ಹೆಸರು ಉಳಿಯಬಹುದು. ಆದರೆ, ಅದಾನಿ ಸಮೂಹವು ನಿಯಂತ್ರಣಕ್ಕೆ ತೆಗೆದುಕೊಂಡ ಬಳಿಕ ಆ ಸುದ್ದಿವಾಹಿನಿಯ ಆತ್ಮವು ಹೊರಟುಹೋಗಿದೆ. ಎನ್‌ಡಿಟಿವಿ ಸಮೂಹದ ಸಂಸ್ಥಾಪಕರಾದ ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ಅವರು ರಾಜೀನಾಮೆ ನೀಡಿದ್ದಾರೆ. ಪತ್ರಕರ್ತರು ಎನ್‌ಡಿಟಿವಿಯಿಂದ ಹೊರನಡೆಯಲು ಆರಂಭಿಸಿದ್ದಾರೆ. ಜಗತ್ತಿನ ಮೂರನೇ ಅತ್ಯಂತ ಸಿರಿವಂತ ವ್ಯಕ್ತಿ ಗೌತಮ್ ಅದಾನಿ ಮಾಲೀಕತ್ವದ ಅದಾನಿ ಸಮೂಹವು ಎನ್‌ಡಿಟಿವಿಯ ಶೇ 29ರಷ್ಟು ಪಾಲು ಹೊಂದಿದ್ದ ಆರ್‌ಆರ್‌ಪಿಆರ್ ಎಂಬ ಕಂಪನಿಯನ್ನು ಖರೀದಿಸಿದೆ. ಬಳಿಕ ಎನ್‌ಡಿಟಿವಿಯ ಒಂದಿಷ್ಟು ಷೇರುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಿದೆ. ಆರ್‌ಆರ್‌ಪಿಆರ್ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಅದಾನಿ ಸಮೂಹವು ನೇಮಿಸಿದೆ. ಆ ಮೂಲಕ ಎನ್‌ಡಿಟಿವಿ ಮತ್ತು ಆ ಸಮೂಹದ ಇತರ ವಾಹಿನಿಗಳನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತೆಗೆದುಕೊಳ್ಳುವತ್ತ ಮುಂದಡಿ ಇರಿಸಿದೆ. ಒಟ್ಟಿನಲ್ಲಿ ಇದರ ಅರ್ಥ ಏನು ಎಂದರೆ, ನಮಗೆ ತಿಳಿದಿರುವ ಎನ್‌ಡಿಟಿವಿ ಇನ್ನು ಮುಂದೆ ಇರುವುದಿಲ್ಲ.



ಭಾರತದಂತಹ ವೈವಿಧ್ಯಮಯ ಹಾಗೂ ಸಂಕೀರ್ಣ ದೇಶಕ್ಕೆ ಬಹುಧ್ವನಿಗಳು ಮತ್ತು ಬಹುನಿಲುವುಗಳು ಅಗತ್ಯವಾಗಿ ಬೇಕು

ಭಾರತದ ಟಿ.ವಿ. ಸುದ್ದಿವಾಹಿನಿ ಪತ್ರಿಕೋದ್ಯಮದ ಆರಂಭಿಕ ಸಂಸ್ಥೆಗಳಲ್ಲಿ ಎನ್‌ಡಿಟಿವಿಯೂ ಒಂದು. ಶೈಲಿ, ವಿಷಯ ಮತ್ತು ಸ್ಫೂರ್ತಿಯ ವಿಚಾರದಲ್ಲಿ ಟಿ.ವಿ. ಸುದ್ದಿವಾಹಿನಿ ಪತ್ರಿಕೋದ್ಯಮದಲ್ಲಿ ಸಂಸ್ಥೆಯು ಕ್ರಾಂತಿಯನ್ನೇ ಉಂಟು ಮಾಡಿತು. ವರದಿಗಾರಿಕೆ, ಪ್ರಸ್ತುತಿ, ವಿಷಯ ಮತ್ತು ವಿಶ್ಲೇಷಣೆಯಲ್ಲಿ ಸುಮಾರು ಮೂರು ದಶಕಗಳ ಕಾಲ ಈ ಸುದ್ದಿವಾಹಿನಿಯೇ ಮಾನದಂಡವಾಗಿತ್ತು. ದೃಶ್ಯ ಮಾಧ್ಯಮ ಸಂವಹನದ ವ್ಯಾಕರಣ ಮತ್ತು ಭಾಷೆಯನ್ನು ಈ ಸುದ್ದಿವಾಹಿನಿಯು ಸೃಷ್ಟಿ ಮಾಡಿಕೊಟ್ಟಿತು. ಎಲ್ಲಕ್ಕಿಂತ ಮುಖ್ಯವಾಗಿ, ಈ ಸುದ್ದಿವಾಹಿನಿಯು ವಿಶ್ವಾಸಾರ್ಹತೆ ಉಳಿಸಿಕೊಂಡಿತ್ತು. ದೇಶದ ಬಹುತೇಕ ಮಾಧ್ಯಮ ಸಂಸ್ಥೆಗಳು ಪ್ರಲೋಭನೆಗಳು, ಒತ್ತಡಗಳು ಅಥವಾ ಬೆದರಿಕೆಗೆ ಮಣಿದಿದ್ದಾಗ ಈ ಸುದ್ದಿವಾಹಿನಿಯು ಸ್ವತಂತ್ರ ಪತ್ರಿಕೋದ್ಯಮದ ಆದರ್ಶಕ್ಕೇ ಅಂಟಿಕೊಂಡಿತ್ತು. ಪ್ರಣಯ್ ರಾಯ್ ಅವರು ಈ ಸುದ್ದಿವಾಹಿನಿಯ ಮುಖವೇ ಆಗಿದ್ದರು. ಪತ್ರಿಕೋದ್ಯಮದ ಪಾಠಶಾಲೆ ಎಂಬಂತೆಯೂ ಎನ್‌ಡಿಟಿವಿ ಕೆಲಸ ಮಾಡಿದೆ. ಈಗ ದೇಶದಲ್ಲಿ ಕೆಲಸ ಮಾಡುತ್ತಿರುವ ಪ್ರಮುಖ ಪತ್ರಕರ್ತರಲ್ಲಿ ಹಲವರು ಎನ್‌ಡಿಟಿವಿ ಸ್ಟುಡಿಯೊದಲ್ಲಿ ಸುದ್ದಿವಾಹಿನಿ ಪತ್ರಿಕೋದ್ಯಮದ ಪಾಠಗಳನ್ನು ಕಲಿತವರು. ಅವರಲ್ಲಿ ಕೆಲವರು ಕಲಿತ ಪಾಠ ಮರೆತಿದ್ದಾರೆ ಎಂಬುದು ನಿಜ. ಆದರೆ, ಕಲಿಸಿದ ಶಾಲೆ ಎಂದೂ ಆ ಪಾಠಗಳನ್ನು ಮರೆತೇ ಇಲ್ಲ.

ಸರ್ಕಾರಕ್ಕೆ ಹತ್ತಿರವಿದೆ ಎಂದು ಭಾವಿಸಲಾಗಿರುವ ಅದಾನಿ ಸಮೂಹವು ಎನ್‌ಡಿಟಿವಿಯ ನಿಯಂತ್ರಣವನ್ನು ಕೈಗೆ ತೆಗೆದುಕೊಂಡ ಬಳಿಕವೂ ಸುದ್ದಿವಾಹಿನಿಯು ಈ ಹಿಂದೆ ಇದ್ದ ರೀತಿಯಲ್ಲಿಯೇ ಇರಬೇಕು ಎಂದು ನಿರೀಕ್ಷಿಸಲಾಗದು. ಅದಲ್ಲದೆ, ಆ ಸಮೂಹವು ದೇಶದಲ್ಲಿ ಲಕ್ಷಾಂತರ ಕೋಟಿ ರೂಪಾಯಿ ಹೂಡಿಕೆಯನ್ನೂ ಮಾಡಿದೆ. ಆ ಹಿತಾಸಕ್ತಿಯನ್ನೂ ಅದಾನಿ ಸಮೂಹವು ಕಾಯ್ದುಕೊಳ್ಳಬೇಕಿದೆ. ಭಾರತದ ಟಿ.ವಿ. ಸುದ್ದಿವಾಹಿನಿಗಳ ಮತ್ತು ಹಾಗೆ ನೋಡಿದರೆ ಇಡೀ ಪತ್ರಿಕೋದ್ಯಮದ ಹಣಕಾಸು ಸ್ಥಿತಿ ಬಹಳ ದುರ್ಬಲವಾಗಿದೆ, ಪತ್ರಿಕೋದ್ಯಮಕ್ಕೆ ಕಾರ್ಪೊರೇಟ್ ಸ್ಪರ್ಶ ಬೇಕಿದೆ ಮತ್ತು ಅದಕ್ಕೆ ಹೆಚ್ಚಿನ ಹಣದ ಹರಿವಿನ ಅಗತ್ಯವಿದೆ ಎಂಬ ವಾದವೊಂದು ಇದೆ. ಆದರೆ ಇದರಿಂದ ಎಲ್ಲ ಸಂದರ್ಭಗಳಲ್ಲಿಯೂ ಒಳ್ಳೆಯದಾಗುತ್ತದೆ ಎಂದು ಭಾವಿಸಲಾಗದು. ಈ ರೀತಿ ಹಣದ ರೂಪದಲ್ಲಿ ಪಡೆಯುವ ಪ್ರಯೋಜನಕ್ಕೆ ಪ್ರತಿಯಾಗಿ ಪತ್ರಿಕೋದ್ಯಮದ ಸ್ವರೂಪ ಮತ್ತು ಗುಣಮಟ್ಟವನ್ನು ಬಲಿ ಕೊಡಬೇಕಾಗುತ್ತದೆ. ಪ್ರಜಾಪ್ರಭುತ್ವಕ್ಕೆ ಅತ್ಯಗತ್ಯವಾಗಿರುವ ಮಾಧ್ಯಮ ಸ್ವಾತಂತ್ರ್ಯವು ದೇಶದಲ್ಲಿ ಕುಸಿಯುತ್ತಲೇ ಇದೆ. ಅಧಿಕಾರಸ್ಥರ ಮುಂದೆ ಸತ್ಯವನ್ನು ಹೇಳಲು ಹಿಂಜರಿಕೆ ತೋರದಿದ್ದ ಮಾಧ್ಯಮ ಸಂಸ್ಥೆಗಳಲ್ಲಿ ಎನ್‌ಡಿಟಿವಿಯೂ ಒಂದು. ಹೀಗೆ ಮಾಡಿದ್ದಕ್ಕೆ ಈ ಹಿಂದೆ ಸಂಸ್ಥೆಯು ಬೆಲೆ ತೆತ್ತಿದ್ದೂ ಇದೆ. ಭಾರತದಂತಹ ವೈವಿಧ್ಯಮಯ ಮತ್ತು ಸಂಕೀರ್ಣ ದೇಶಕ್ಕೆ ಬಹುಧ್ವನಿಗಳು ಮತ್ತು ಬಹುನಿಲುವುಗಳು ಅಗತ್ಯವಾಗಿ ಬೇಕು. ಮಾಧ್ಯಮಗಳಲ್ಲಿ ಹೆಚ್ಚಿನವು ಒಂದೇ ಧ್ವನಿಯಲ್ಲಿ ಮಾತನಾಡುತ್ತಿವೆ ಮತ್ತು ಅವು ಅಧಿಕಾರಸ್ಥರಿಗೆ ಹಿತವಾಗುವುದನ್ನು ಮಾತ್ರ ಹೇಳುತ್ತಿವೆ. ಇಂತಹ ಸಂದರ್ಭದಲ್ಲಿ ಭಿನ್ನ ಮತ್ತು ಪ್ರಶ್ನೆ ಮಾಡುವ ಧ್ವನಿಯ ಅನುಪಸ್ಥಿತಿಯು ಕಾಡುವುದು ಖಚಿತ.

ದಿನದ ಟ್ವೀಟ್

ಯಾರಾದರೂ ತಿಳಿಹೇಳಿ




ಜಿ-20 ಅಧ್ಯಕ್ಷತೆಯು ಸರದಿಯ ಮೇಲೆ ಬರುವಂಥದ್ದು ಮತ್ತು ಕಮಲದ ಚಿಹ್ನೆ ಬಳಸುವುದು ಐದು ವರ್ಷಗಳ ಅಧಿಕಾರಾವಧಿಯನ್ನು ಖಾತರಿಪಡಿಸದು ಎಂಬುದನ್ನು ಯಾರಾದರೂ ದಯಮಾಡಿ ಬಿಜೆಪಿಗೆ ವಿವರಿಸಿ.

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

ಕಿಡಿನುಡಿ

ಡಿಸೆಂಬರ್ 6ನೆಯ ತಾರೀಕು ಡಾ. ಅಂಬೇಡ್ಕರ್ ಅವರ ಪರಿನಿರ್ವಾಣ ದಿನ. 1789ರ ಫ್ರೆಂಚ್ ಕ್ರಾಂತಿಯ ತತ್ವಗಳೇ ಭಾರತದ ಸಂವಿಧಾನದ ತತ್ವಗಳು ಎಂದು ಅವರು ಹೇಳಿದ್ದರು. ಆದರೆ ಇಂದಿನ ಭಾರತದಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಎಲ್ಲಿವೆ?



ಮಾರ್ಕಂಡೇಯ ಕಾಟ್ಜು, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

25 ವರ್ಷಗಳ ಹಿಂದೆ

ಭಾನುವಾರ, 7-12-1997

• **3 ರೈಲುಗಳಲ್ಲಿ ಬಾಂಬ್ ಸ್ಫೋಟ: 10 ಬಲಿ**

ಚೆನ್ನೈ, ಡಿಸೆಂಬರ್ 6 (ಪಿಟಿಐ): ಅಯೋಧ್ಯೆಯ ಬಾಬ್ರಿ ಮಸೀದಿ ಕೆಡವಿದ ದಿನವಾದ ಇಂದು ತಮಿಳುನಾಡು ಹಾಗೂ ಕೇರಳದ ಮೂರು ರೈಲುಗಳ ಬೋಗಿಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಿಂದ ಕನಿಷ್ಠ 10 ಮಂದಿ ಮೃತಪಟ್ಟು, 69 ಜನರು ಗಾಯಗೊಂಡಿರುವ ಘಟನೆಗಳು ನಡೆದಿವೆ.

ಮದುರೆಗೆ ಹೊರಟಿದ್ದ ಪಾಂಡಿಯನ್ ಎಕ್ಸ್‌ಪ್ರೆಸ್ ರೈಲಿನ ಬೋಗಿಗಳಲ್ಲಿ ಬೆಳಿಗ್ಗೆ 5.15ರ ವೇಳೆಗೆ ತಿರುಚಿನಾಪಳ್ಳಿ ನಿಲ್ದಾಣದಲ್ಲಿ ಬಾಂಬ್ ಸ್ಫೋಟಿಸಿದಾಗ ಐವರು ಸತ್ತು, 15 ಮಂದಿ ಗಾಯಗೊಂಡಿದ್ದಾರೆ.

ಈರೋಡ್‌ನ ಪೆರುಂತುರೈ ಸಮೀಪದ ತೊಟ್ಟಿಪಾಳ್ಯಂನಲ್ಲಿ ಕೊಯಮತ್ತೂರಿಗೆ ಹೊರಟಿದ್ದ ಚೇರನ್ ಎಕ್ಸ್‌ಪ್ರೆಸ್ ರೈಲಿನ ಬೋಗಿಯಲ್ಲಿ ಬೆಳಿಗ್ಗೆ 5.10ರ ವೇಳೆಗೆ ಬಾಂಬ್ ಸ್ಫೋಟಿಸಿ ಇಬ್ಬರು ಮೃತಪಟ್ಟು, 9 ಮಂದಿ ಗಾಯಗೊಂಡಿದ್ದಾರೆ. ಕೇರಳದ ತ್ರಿಶ್ಶೂರ್‌ನಲ್ಲಿ ಚೆನ್ನೈ-ಅಲಪ್ಪುಳ ಎಕ್ಸ್‌ಪ್ರೆಸ್ ರೈಲಿನ ಬೋಗಿಯಲ್ಲಿ ಸಂಭವಿಸಿದ ಬಾಂಬ್ ಸ್ಫೋಟಕ್ಕೆ ಮೂವರು ಮೃತಪಟ್ಟಿದ್ದಾರೆ.

• **11ರಂದು ಬಂಗಾರಪ್ಪ ಹೊಸ ಪಕ್ಷ ಉದಯ**

ಬೆಂಗಳೂರು, ಡಿಸೆಂಬರ್ 6– ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ನೇತೃತ್ವದ ನೂತನ ರಾಜಕೀಯ ಪಕ್ಷವಾದ 'ಕರ್ನಾಟಕ ವಿಕಾಸ ಪಕ್ಷ' ಈ ತಿಂಗಳ 11ರಂದು ಇಲ್ಲಿ ವಿಧ್ಯುಕ್ತವಾಗಿ ಆರಂಭವಾಗಲಿದೆ. ಕಾಂಗ್ರೆಸ್ ಪಕ್ಷವನ್ನು ನಿನ್ನೆಯಷ್ಟೇ ತೊರೆದು ದೆಹಲಿಯಿಂದ ಇಂದು ನಗರಕ್ಕೆ ಆಗಮಿಸಿದ ಬಂಗಾರಪ್ಪ ಅವರು ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರಿಗೆ ಈ ವಿಚಾರ ತಿಳಿಸಿದರು.

50 ವರ್ಷಗಳ ಹಿಂದೆ

ಗುರುವಾರ, 7-12-1972

• **ಕುದುರೆಮುಖ ಕಬ್ಬಿಣ ಅದಿರು ಯೋಜನೆಗೆ ಕೇಂದ್ರದ ಒಪ್ಪಿಗೆ**

ಮಂಗಳೂರು, ಡಿಸೆಂಬರ್ 6– ನೂರತೊಂಬತ್ತು ಕೋಟಿ ರೂಪಾಯಿಗಳ ವೆಚ್ಚದ ಕುದುರೆಮುಖ ಕಬ್ಬಿಣದ ಅದಿರು ಯೋಜನೆಗೆ ಕೇಂದ್ರ ಸರ್ಕಾರ ಕಳೆದ ವಾರ ಆರ್ಥಿಕ ಮಂಜೂರಾತಿ ನೀಡಿತೆಂದು ಇಲ್ಲಿ ತಿಳಿದುಬಂದಿದೆ.

ಕೇಂದ್ರದ ಈ ಮಂಜೂರಾತಿಯಿಂದ ಯೋಜನೆಯಲ್ಲಿ ಸಹಭಾಗಿಗಳಾಗಲಿರುವ ಅಮೆರಿಕದ ಮಾರ್ಕೋನಾ ಕಾರ್ಪೊರೇಷನ್ ಮತ್ತು ಜಪಾನಿನ ಮಾನ್ ಗುಂಪಿನ ಕಂಪನಿಗಳೊಂದಿಗೆ ಷರತ್ತುಗಳ ಬಗೆಗೆ ಚರ್ಚಿಸಿ, ಅಂತಿಮವಾಗಿ ಒಪ್ಪಂದ ಮಾಡಿಕೊಳ್ಳಲು ಕುದುರೆಮುಖ ಯೋಜನೆ ಅಧಿಕಾರಿಗಳಿಗೆ ಅನುಮತಿ ದೊರೆತಂತಾಗಿದೆ.

• **ಬರಗಾಲ ಅಧ್ಯಯನ ಪ್ರಶ್ನೆ: ಮೇಲ್ಮನೆಯಲ್ಲಿ ಸಭಾತ್ಯಾಗ**

ಬೆಂಗಳೂರು, ಡಿಸೆಂಬರ್ 6– ಬರಗಾಲ ಪೀಡಿತ ಪ್ರದೇಶದ ಅಧ್ಯಯನಕ್ಕೆ ವಿರೋಧ ಪಕ್ಷದ ಸದಸ್ಯರೊಬ್ಬರನ್ನು (ಮೇಲ್ಮನೆಯಿಂದ) ಕಳುಹಿಸಬೇಕೆಂಬ ಒತ್ತಾಯಕ್ಕೆ ಸರ್ಕಾರ ಮಣಿಯದಿದ್ದುದನ್ನು ಪ್ರತಿಭಟಿಸಿ ಇಂದು ವಿಧಾನಪರಿಷತ್ತಿನ ವಿರೋಧಪಕ್ಷಗಳ ಎಲ್ಲ ಸದಸ್ಯರೂ ಸಭಾತ್ಯಾಗ ಮಾಡಿದರು.

• **ಅಭಾವ ಪರಿಹಾರ: 'ಸರ್ಕಾರ ವಿಫಲ'**

ಬೆಂಗಳೂರು, ಡಿಸೆಂಬರ್ 6– ರಾಜ್ಯದ ಉತ್ತರ ಭಾಗದಲ್ಲಿ ಬರಗಾಲದ ಭೀಕರ ಪರಿಸ್ಥಿತಿಗೆ ಒಳಗಾಗಿ ನರಳುತ್ತಿರುವ 50 ಲಕ್ಷಕ್ಕೂ ಹೆಚ್ಚು ಜನರಿಗೆ ಪರಿಹಾರವನ್ನು ಒದಗಿಸುವುದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆಯೆಂದು ಸಂಸ್ಥಾ ಕಾಂಗ್ರೆಸ್ಸಿನ ರಾಮಕೃಷ್ಣ ಹೆಗಡೆ ಇಂದು ವಿಧಾನ ಪರಿಷತ್ತಿನಲ್ಲಿ ಕಟುವಾಗಿ ಟೀಕಿಸಿದರು.

ಅತಿ ಹೆಚ್ಚು ಅಡಿಕೆ ಬೆಳೆಯುವ ಕರ್ನಾಟಕದ ಮುಂದಿರುವ ಸವಾಲುಗಳಾದರೂ ಎಷ್ಟು?

ಅಡಿಕೆಯ ನಾಲ್ಕು ಪ್ರಶ್ನೆಗಳು!



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ರಾಜ್ಯದೆಲ್ಲೆಡೆ ವೇಗವಾಗಿ ಪಸರಿಸುತ್ತಿರುವ ಅಡಿಕೆಯ ಎಲೆಚುಕ್ಕೆ ರೋಗದ ತೀವ್ರತೆಯನ್ನು ಖುದ್ದು ಅರಿಯಲು, ತೀರ್ಥಹಳ್ಳಿ ತಾಲ್ಲೂಕಿನ ಗ್ರಾಮವೊಂದರ ತೋಟಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ಭೇಟಿ ನೀಡಿದ್ದರು. ಹವಾಮಾನ ಸಮಸ್ಯೆಗಳಿಂದ ತೊಳಲಾಡುತ್ತಿರುವ ಅಡಿಕೆಗೆ, ನಾಡಿನ ದೊರೆಯೇ ತನ್ನ ಅಂಗಳಕ್ಕೆ ಬಂದಾಗ ಏನನ್ನಿಸಿರಬೇಕು?

ಸಸ್ಯಗಳಿಗೆ ಅದೆಂಥ ಭಾವನೆ ಎಂದು ಕೇಳಬೇಡಿ. ಜೀವಕೋಶಗಳಲ್ಲಿರುವ ಅಯಾನುಗಳ ಸ್ರವಿಸುವ ವಿದ್ಯುತ್ ತರಂಗಗಳು ಹಾಗೂ ಹಾರ್ಮೋನುಗಳ ರಾಸಾಯನಿಕ ಕ್ರಿಯೆಗಳ ಮೂಲಕವೇ ಸಂವೇದನೆಗಳನ್ನು ಗ್ರಹಿಸುವ ಮತ್ತು ಸೂಕ್ತವಾಗಿ ಪ್ರತಿಕ್ರಿಯಿಸುವ ವಿಶಿಷ್ಟ ಸಂವಹನ ಸಾಮರ್ಥ್ಯವು ಸಸ್ಯಗಳಿಗೆ ಇರುವುದು ವಿಜ್ಞಾನ ಲೋಕಕ್ಕೆ ತಿಳಿದಿದೆ. ನಮಗೆ ಅರ್ಥವಾಗುವಂತೆ ಅವನ್ನು ಶಬ್ದಗಳಲ್ಲಿ ಪ್ರಕಟಿಸುವ ಗುಣ ಮಾತ್ರ ಅವಕ್ಕಿಲ್ಲ. ಹೀಗಾಗಿ, ಗಿಡಮರಗಳ ಸಮಸ್ಯೆಗಳ ಕುರಿತಂತೆಲ್ಲ ವಿವಾದಾಸ್ಪದ ಕೃಷಿಕರೋ ಅಥವಾ ತಜ್ಞರೋ ಹೇಳಬೇಕು.

ಇರಲಿ, ಸರ್ಕಾರಕ್ಕೆ ಏರುವರು ಹೇಳಲೇಬೇಕಾದ ಅಡಿಕೆಯ ಅಂಥ ನೋವುಗಳಾವುದೂ ಯಾವುವು? ಮುಖ್ಯಮಂತ್ರಿಯವರು ಆಲಿಸಲೇಬೇಕಾದ ಹಲವು ಮಹತ್ವದ ಸಂಗತಿಗಳು ಅಡಿಕೆಯ ಬಳಿಯಲ್ಲಿರಲು ಕಾರಣವಿದೆ. ಜಗತ್ತಿನ ಒಟ್ಟು ಉತ್ಪಾದನೆಯ ಅರ್ಧಕ್ಕಿಂತಲೂ ಹೆಚ್ಚಿನ ಅಡಿಕೆ ಇಂದು ಭಾರತದಲ್ಲೇ ಬೆಳೆಯುತ್ತಿದೆ. ಇದನ್ನು, ನಮ್ಮ ದೇಶದ ಒಟ್ಟು ಉತ್ಪಾದನೆಯ ಅರ್ಧಕ್ಕಿಂತಲೂ ಹೆಚ್ಚುಭಾಗ ಕರ್ನಾಟಕದ್ದೇ ಆಗಿದ್ದು, ವಾರ್ಷಿಕ ಅದು ಲಕ್ಷ ಟನ್ ಮೀರುತ್ತಿದೆ. ಅಂದರೆ ಜಗತ್ತಿನ ಅಡಿಕೆ ಉತ್ಪಾದನೆಯ ಕಾಲುಭಾಗದಷ್ಟನ್ನು ನಮ್ಮ ರಾಜ್ಯವು!

ಇಲ್ಲಿನ ನೂರಾನಲವತ್ತಕ್ಕೂ ಹೆಚ್ಚು ತಾಲ್ಲೂಕುಗಳಿಗೆ ಈ ವಾಣಿಜ್ಯ ಬೆಳೆ ಈಗ ಹರಡಿಕೊಂಡಿದೆ. ಬೆಂಗಳೂರು ನಗರದ ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನದ ಕೇಂದ್ರವಾಗಿ ಪ್ರಸಿದ್ಧಿಯಾಗಿದ್ದರೆ, ಕರಾವಳಿ ಕೃಷಿ ಭೂಮಿಯು ಜಗತ್ತಿನ ಪಾಲಿಗೆ ಅಡಿಕೆಯ ತವರೂರಾಗುತ್ತಿದೆ! ರಾಜ್ಯದ ಆರ್ಥಿಕತೆ ಹಾಗೂ ಕೃಷಿಕರ ಭವಿಷ್ಯದ ದೃಷ್ಟಿಯಿಂದ ಗಮನಿಸಲೇಬೇಕಾದ ಸಂಗತಿಯಿದು. ಹೀಗಾಗಿ, ಅಡಿಕೆ ಕೃಷಿಯ ಸದ್ಯದ ಸವಾಲುಗಳ ಪರಿಹಾರಕ್ಕೆ ಮುಂದಾಗಲೇಬೇಕಿದೆ. ಅವುಗಳಲ್ಲಿ ನಾಲ್ಕು ಪ್ರಮುಖ ಪ್ರಶ್ನೆಗಳನ್ನು ಇಲ್ಲಿ ಚರ್ಚಿಸೋಣ.

ಮೊದಲನೆಯದು, ಹೆಚ್ಚುತ್ತಿರುವ ರೋಗಬಾಧೆ ಕುರಿತು. ತೀರಾ ಇತ್ತೀಚಿನ ದಶಕಗಳವರೆಗೂ ಕೊಳೆರೋಗ ಬಿಟ್ಟು ಇನ್ನಾವುದೇ ಅಡಿಕೆಯನ್ನು ತೀವ್ರವಾಗಿ ಬಾಧಿಸುತ್ತಿಲ್ಲ. ಆದರೆ, ಜಾಗತಿಕ ಹವಾಮಾನ ಬದಲಾವಣೆ ಹಾಗೂ ಸ್ಥಳೀಯ ನೆಲ- ಜಲ ನಾಶದ ಒಟ್ಟಾರೆ ಪರಿಣಾಮದಿಂದಾಗಿ, ರೋಗಗಳ ವೈವಿಧ್ಯ ಮತ್ತು ತೀವ್ರತೆ ಹೆಚ್ಚುತ್ತಿವೆ. ಈಗ ಸುದ್ದಿಯಲ್ಲಿರುವ ಎಲೆಚುಕ್ಕೆ ರೋಗ ಅಥವಾ ಹಳದಿರೋಗ ಈ ಗಂಭೀರ ಸಮಸ್ಯೆಯ ಮೇಲ್ಪದರ ಮಾತ್ರ. ಸೂಕ್ಷ್ಮಾಣುಜೀವಿ, ಪೋಷಕಾಂಶ ವ್ಯತ್ಯಯದಂತಹವೇ ನೆಪವಾಗಿ ಹತ್ತಾರು ಹೊಸ ರೋಗಗಳು ಈಗ ವಕ್ಕರಿಸುತ್ತಿವೆ.

ಕೃಷಿ ಪರಿಸರದ ಸಮತೋಲನವನ್ನು ಪುನರುಜ್ಜೀವಗೊಳಿಸುವ 'ಸಂಯೋಜಿತ ರೋಗ ನಿರ್ವಹಣೆ' (ಐ.ಪಿ.ಎಮ್) ತಂತ್ರದಿಂದ ಮಾತ್ರ ಇವನ್ನು ನಿಭಾಯಿಸಬಹುದು ಎಂಬುದು ಕೃಷಿ ವಿಜ್ಞಾನಿಗಳ ಅಭಿಪ್ರಾಯ. ಆದರೆ, ತಕ್ಷಣದ ಶಮನವನ್ನು ಮಾತ್ರ ಪರಿಗಣಿಸಿ ಮತ್ತಷ್ಟು ಕ್ರಿಮಿನಾಶಕಗಳ ಸಿಂಪಡಣೆಯ ಶಿಫಾರಸಿನಲ್ಲೇ ಮುಳುಗಿರುವ ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಕೃಷಿ ಇಲಾಖೆಗೆ ವಿವೇಕದ ಕಿವಿಮಾತು ಯಾರು ಹೇಳಬೇಕು?

ಎರಡನೆಯದು, ಅಡಿಕೆ ಕೃಷಿಯು ಮಾಲಿನ್ಯ ಸಮಸ್ಯೆಗೆ ಸಿಲುಕುತ್ತಿರುವ ಸಂಗತಿ. ಬೋರ್ಡೊ ಮಿಶ್ರಣದಂಥ ಸುರಕ್ಷಿತ ಕ್ರಿಮಿನಾಶಕ ಬಿಟ್ಟು, ಕೃತಕ ರಾಸಾಯನಿಕ ಕ್ರಿಮಿನಾಶಕಗಳು ಅಡಿಕೆ ತೋಟವನ್ನು ಪ್ರವೇಶಿಸಿವೆ. ಉದಾಹರಣೆಗೆ, ಹೂವರಳುವ ಸಮಯದಲ್ಲಿ ಕೀಟಬಾಧೆ ನಿವಾರಿಸಲು ಸಿಂಪಡಿಸುತ್ತಿರುವ ಕ್ಲೋರ್‌ಪೈರಿಫೋಸ್ ತರಹದ ಕ್ರಿಮಿನಾಶಕ ಬಳಕೆಯಿಂದಾಗಿ, ತೋಟದ ಸುತ್ತಲ ಜೇನು ಸಂಕುಲಗಳೇ ಬಲಿಯಾಗುತ್ತಿರುವುದು ಮಲೆನಾಡಿನಲ್ಲಿ ದಾಖಲಾಗಿದೆ. ಸಾವಯವ ಪದ್ಧತಿಯಲ್ಲಿಯೇ ವಿಕಾಸವಾಗಿದ್ದ ಪಾರಂಪರಿಕ ಅಡಿಕೆ ಕೃಷಿಯು ವಾಣಿಜ್ಯೀಕರಣದ ಲಾಭಕ್ಕೆ ಮರುಳಾಗಿ ವಿಷಮಯವಾಗುತ್ತಿದೆ. ಕೃಷಿಭೂಮಿ, ಜಲಮೂಲ ಮತ್ತು ಅವನ್ನು ಆಶ್ರಯಿಸಿದ ವೈವಿಧ್ಯಮಯ ಜೀವಸಂಕುಲಗಳ ಮೇಲೆ ಇವು ಬೀರುತ್ತಿರುವ ಮಾರಣಾಂತಿಕ ಪರಿಣಾಮಗಳ ಕುರಿತು ರೈತರು ಹಾಗೂ ವ್ಯಾಪಾರಸ್ಥರನ್ನು ಯಾರು ಎಚ್ಚರಿಸಬೇಕು?

ಮೂರನೆಯದು, ಅಡಿಕೆ ಕ್ಯಾನ್ಸರ್‌ಕಾರಕ ಎಂಬ ಜಾಗತಿಕ ನಿರ್ಧಾರದ ಬಗ್ಗೆ. ಭಾರತದ ಪಾರಂಪರಿಕ ಅಡಿಕೆ ಕೃಷಿ ಹಾಗೂ ವೈವಿಧ್ಯಮಯ ಬಳಕೆಯ ಹೊರತಾಗಿಯೂ ವಿಜ್ಞಾನ ಜಗತ್ತು ಈ ನಿರ್ಣಯಕ್ಕೆ ಬಂದಿದೆ. ಅಡಿಕೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವ ಅರೆಕೊಲೀನ್ ರಾಸಾಯನಿಕದಿಂದಾಗಿ, ಅಡಿಕೆ ಸೇವನೆಯು ನಿಶ್ಚಿತವಾಗಿಯೂ ಕ್ಯಾನ್ಸರ್ ತರುತ್ತದೆ ಎಂದು ಆಧುನಿಕ ವೈದ್ಯಕೀಯ ವಿಜ್ಞಾನ ಸಾರುತ್ತಿದೆ. ಹೀಗಾಗಿ, ವಿಶ್ವ ಆರೋಗ್ಯ ಸಂಸ್ಥೆ ಆಶ್ರಯದ ಅಂತರರಾಷ್ಟ್ರೀಯ ಕ್ಯಾನ್ಸರ್ ಸಂಶೋಧನಾ ಸಂಸ್ಥೆಯು (ಐಎಆರ್‌ಸಿ), ಕ್ಯಾನ್ಸರ್ ಕಾರಣವಾಗಬಲ್ಲ ಪ್ರಮುಖ ನೈಸರ್ಗಿಕ ವಸ್ತುಗಳ ಪಟ್ಟಿಯಲ್ಲಿಯೇ ಅಡಿಕೆಯನ್ನು ಸೇರಿಸಿಬಿಟ್ಟಿದೆ! ದೇಶದಲ್ಲಿ ನಡೆದಿರುವ ಸಂಶೋಧನೆಗಳು, ಸಮ್ಮೇಳನಗಳು, ರಾಜಕೀಯ ಒತ್ತಡ ಹಾಗೂ ಕಾನೂನು ಹೋರಾಟ- ಇವು ಯಾವುದಕ್ಕೂ ಈ ಜಾಗತಿಕ ಅಭಿಪ್ರಾಯವನ್ನು ಕದಲಿಸಲು ಈವರೆಗೂ ಸಾಧ್ಯವಾಗಿಲ್ಲ. ಅಡಿಕೆ ಸೇವನೆ ಅಪಾಯಕಾರಿಯಲ್ಲ ಎಂದು ಜಾಗತಿಕವಾಗಿ ನಿರೂಪಿಸಲು ದೇಶದ ಸಂಶೋಧನಾ ಕ್ಷೇತ್ರ ವಿಫಲವಾಗಿದೆ ತಾನೆ? ಈ ಹೊಣೆಗಾರಿಕೆಯನ್ನು ಯಾರು ಹೊರಬೇಕು?

ಕೊನೆಯದು, ರಾಜ್ಯದಾದ್ಯಂತ ವೇಗವಾಗಿ, ಅವೈಜ್ಞಾನಿಕವಾಗಿ ವಿಸ್ತರಣೆಯಾಗುತ್ತಿರುವ ಅಡಿಕೆ ಕೃಷಿ ಕುರಿತು. ಇತ್ತೀಚಿನವರೆಗೂ ಕರಾವಳಿ, ಮಲೆನಾಡಿನ ಕಾಡಿನ ಕಣಿವೆಗಳ ಸಣ್ಣರೈತರ ತೋಟಗಳಲ್ಲಿ ಮಿಶ್ರಬೆಳೆಯಾಗಿದ್ದ ಅಡಿಕೆ, ಇಂದು ನಾಡಿನೆಲ್ಲೆಡೆ ವಾಣಿಜ್ಯಿಕ ನೆಡುತೋಪಾಗಿ ಹಬ್ಬುತ್ತಿದೆ. ಒಳನಾಡು, ಬಯಲುಸೀಮೆಯಲ್ಲಿ ಕಾಲುವೆ ನೀರಾವರಿ, ಕೊಳವೆಬಾವಿ ಜಲಮೂಲವನ್ನಾಧರಿಸಿ ಬೆಳೆಯಲಾಗುತ್ತಿದೆ. ಇದರ ಪರಿಣಾಮವಾದರೂ ಏನು? ಒಂದೆಡೆ, ಭತ್ತ, ಗೋಧಿ, ಜೋಳ, ಸಿರಿಧಾನ್ಯ, ಹಣ್ಣು ಹಂಪಲಿನಂಥ ಆಹಾರಬೆಳೆಯ ಸಮೃದ್ಧ ಕೃಷಿಕ್ಷೇತ್ರ ಮಾಯವಾಗುತ್ತಿದೆ. ಇನ್ನೊಂದೆಡೆ, ಕಾಡು ಹಾಗೂ ಸಾಮೂಹಿಕ ಭೂಮಿ ಒತ್ತುವರಿ, ಅಂತರ್ಜಲದ ಮಿತಿಮೀರಿದ ಬಳಕೆಯಂತಹ ಪರಿಸರ ನಾಶದ ವಿದ್ಯಮಾನ. ಕೃಷಿ ವಿಸ್ತರಣೆಗೆ ಕನಿಷ್ಠ ಮಾರ್ಗಸೂಚಿಯನ್ನಾದರೂ ತೋರಬಲ್ಲ 'ನೆಲಬಳಕೆ ನೀತಿ'ಯೇ ಇರದಿರುವುದರ ಪರಿಣಾಮವಿದು! ಇದಕ್ಕೆ ಯಾರು ಹೊಣೆ?

ಎಲ್ಲರೂ ಈ ವಾಣಿಜ್ಯ ಬೆಳೆಯ ಲಾಭದ ಹಿಂದೆಯೇ ಓಡತೊಡಗಿರುವುದರಿಂದ, ಅಡಿಕೆ ಕೃಷಿಯ ಮೂಲಭೂತ ಸಮಸ್ಯೆಗಳ ಕುರಿತು ಯಾರೂ ಸೊಲ್ಲೆತ್ತಿರುವಂತಿಲ್ಲ. ಸರ್ಕಾರ ರಚಿಸಿರುವ ಅಡಿಕೆ ಕಾರ್ಯಪಡೆ ಹಾಗೂ ಅಡಿಕೆ ಉದ್ಯಮದಲ್ಲಿ ತೊಡಗಿರುವ ರೈತರ ಸಹಕಾರಿ ಸಂಘಟನೆಗಳಾದರೂ ಈ ಕುರಿತು ಮುಕ್ತ ಚಿಂತನೆಗೆ ತೆರೆದುಕೊಳ್ಳಬೇಕಿತ್ತು. ಆದರೆ, ಅಡಿಕೆ ಆರ್ಥಿಕತೆಯ ಅಸಹಜ ಲಾಭಕ್ಕೆ ಎಲ್ಲರೂ ಮರುಳಾದಂತಿದೆ!

ಹಿಂದಿನ ಎರಡು ದಶಕಗಳ ನಿರ್ಲಕ್ಷ್ಯದಿಂದಾಗಿ ಈ ಸಂಕೀರ್ಣ ಸಮಸ್ಯೆಗಳು ಇಂದು ಬೃಹದಾಕಾರವಾಗಿ ಬೆಳೆಯುತ್ತಿದ್ದು, ನಿಕಟ ಭವಿಷ್ಯದಲ್ಲಿಯೇ ಸ್ಫೋಟಗೊಳ್ಳುವ ಸೂಚನೆಗಳು ಈಗ ಗೋಚರಿಸುತ್ತಿವೆ. ಸರ್ಕಾರ ಈಗಲಾದರೂ ಇವನ್ನು ಗಂಭೀರವಾಗಿ ಪರಿಗಣಿಸಲೇಬೇಕಿದೆ.

ಅಂದಹಾಗೆ, 'ಡೀಪ್ ಲರ್ನಿಂಗ್' ಎಂದು ಕರೆಯಲಾಗುವ ಕೃತಕ ಬುದ್ಧಿಮತ್ತೆ ಆಧಾರಿತ 'ಯಂತ್ರಗಳ ಕಲಿಕೆ' ಕುರಿತ ಆಧುನಿಕ ತಂತ್ರಜ್ಞಾನ ಕ್ಷೇತ್ರದ ಸಂಶೋಧನೆಗಳ ಬಗೆಗೆ ತಮಗೆ ತಿಳಿದಿರಬಹುದು. ಅದನ್ನು ಬಳಸಿಕೊಂಡು ಸಸ್ಯಗಳಲ್ಲಿನ ಸೂಕ್ಷ್ಮ ಸಂವೇದನೆಗಳನ್ನು ಮನುಷ್ಯರು ಅರ್ಥೈಸುವಂತೆ ಶಬ್ದಗಳಾಗಿ ಪರಿವರ್ತಿಸುವಂಥ ವಿಶಿಷ್ಟ ಸಂಶೋಧನೆಗಳೆಲ್ಲ ವಿಜ್ಞಾನಲೋಕದಲ್ಲಿ ಇಂದು ಸಾಗುತ್ತಿವೆ. ಇನ್ನೇನು, ಕೆಲವೇ ದಶಕಗಳಲ್ಲಿ ಗಿಡಮರಗಳ ಅಂತರಂಗವನ್ನು ಶಬ್ದ-ಧ್ವನಿಗಳಲ್ಲಿ ಪ್ರಚುರಗೊಳಿಸಬಲ್ಲ ಮಿನಿಯಂತ್ರಗಳೂ ಮಾರುಕಟ್ಟೆಗೆ ಬಂದಾವು! ಆದರೆ, ತನ್ನ ಸಮಸ್ಯೆಗಳನ್ನೆಲ್ಲ ನಿವೇದಿಸಲು ಆವರೆಗೆ ಕಾಯುವಷ್ಟು ಸಮಯ ಅಡಿಕೆಗೆ ಉಳಿದಿಲ್ಲ.

ಬಿಗಡಾಯಿಸುತ್ತಿರುವ ಅಡಿಕೆ ಕೃಷಿಯ ಪರಿಸ್ಥಿತಿ ಕುರಿತ ಅಧ್ಯಯನಗಳು ಹಾಗೂ ತಜ್ಞರ ಅಭಿಪ್ರಾಯಗಳನ್ನು ಸರ್ಕಾರವು ತ್ವರಿತವಾಗಿ ಆಲಿಸಲೇಬೇಕಿದೆ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ



ಚುರುಮುರಿ



ರೌಡಿ ಎಮ್ಮೆಲ್ಲೆ!

• ಗುರು ಪಿ.ಎಸ್.

'ಏನಣ್ಣೋ, ಮಚ್ಚು, ಲಾಂಗ್ ಬೆನ್ ಹಿಂದೆ ಸಿಗಿಸ್ಕೊಂಡು ಎಲ್ಲಿಗ್ ಹೊಂಟೆ...' ಕುತೂಹಲದಿಂದ ಕೇಳ್ದ ಮುದ್ದಣ್ಣ.

'ಟಿಕೆಟ್ ಕೇಳೋಕೆ...' ಖಡಕ್ ಆಗಿ ಹೇಳ್ದ ರೌಡಿ ವಿಜಿ.

'ಈಗೇನಣ್ಣ, ಆನ್‌ಲೈನ್‌ನಲ್ಲೇ ಬಸ್ಸು, ಟ್ರೈನ್ ಟಿಕೆಟ್ ಬುಕ್ ಮಾಡಬಹುದು, ಅಷ್ಟ್ ದೂರ ಹೋಗಿ ಯಾಕ್ ಎಲ್ರನ್ನ ಹೆದರಿಸಿ ಬರ್ತೀಯ?'

'ಬಸ್ ಟಿಕೆಟ್ ಅಲ್ವೋ, ಪೊಲಿಟಿಕಲ್ ಪಾರ್ಟಿ ಟಿಕೆಟ್, ಎಲೆಕ್ಷನ್‌ಗೆ ನಿಲ್ತೀನಿ ನಾನು' ಮೀಸೆ ತಿರುವಿಕೊಂಡು ಹೇಳ್ದ.

'ಏನಣ್ಣೋ ನೀನು, ಬಾಸ್‌ಗಳಿಗೇ ಬಾಸ್ ಆಗೋಕೆ ಹೋಗ್ತಿದಿಯಾ...'

'ಮತ್ತೆ, ನನ್ ಜೊತೆ ಪೊಲೀಸ್ ಸ್ಟೇಷನ್‌ನಲ್ಲಿ ಫೋಟೊ ಹಾಕಿಸ್ಕೊಂಡಿದ್ದವರೆಲ್ಲ ರಾಜಕೀಯ ಸೇರಿ ಏನೇನೋ ಆಗಿದಾರೆ, ನನಗೂ ಪೊಲಿಟಿಷಿಯನ್ ಆಗಿ, ಎಮ್ಮೆಲ್ಲೆ ಆಗೋ ಅರ್ಹತೆ ಇಲ್ವ?'

'ಖಂಡಿತ ಐತೆ ಬಿಡಣ್ಣ, ಅದ್ ಸರಿ, ಬೆನ್ ಹಿಂದೆ ಮಚ್ಚು ಹಿಡ್ಕೊಂಡವ್ನು, ಕೈಯಲ್ಲಿ ವೈಟ್ ಅಂಡ್ ವೈಟ್ ಪಂಚೆ, ಶರ್ಟು, ಹಾರ- ತುರಾಯಿ ಇರೋ ಬ್ಯಾಗ್ ಬೇರೆ ಹಿಡ್ಕೊಂಡಿದಿಯಾ'.

'ಟಿಕೆಟ್ ಕೊಟ್ಟ ಮೇಲೆ ಮನಃಪರಿವರ್ತನೆ ಆಗುತ್ತಲ್ಲ, ಆಗ ಹಾಕ್ಕೊಳೋಕೆ ಬೇಕಲ್ಲ' ವಿನಯದಿಂದ ಹೇಳ್ದ ವಿಜಿ.

'ಯಾವ ಪಾರ್ಟಿಯವರಿಗೆ ಕೇಳ್ತೀಯಣ್ಣ'.

'ನಮ್ ಸೀನಿಯರ್ಸ್‌ಗೆಲ್ಲ ಆ ಪಾರ್ಟಿಯವರು ಕೊಡ್ತಿದ್ರು, ಈಗ ಈ ಪಾರ್ಟಿಯವ್ರು ನಮ್ಮ ಬಗ್ಗೆ ಸಾಫ್ಟ್‌ಕಾರ್ನರ್‌ನಿಂದ ಮಾತಾಡ್ತಿದಾರೆ, ಹಾಗಾಗಿ ಇವರನ್ನೇ ಕೇಳ್ತೀನಿ'.

'ಅವರು- ಇವರು ಯಾರೂ ಟಿಕೆಟ್ ಕೊಡಲಿಲ್ಲ ಅಂದ್ರೆ...'

'ನಾನೇ ಅವರಿಗೆ ಟಿಕೆಟ್ ಕೊಟ್ಟು ಬರ್ತೀನಿ' ದೃಢ ಮತ್ತು ಗಟ್ಟಿ ದನಿಯಲ್ಲಿ ಹೇಳ್ದ ರೌಡಿ ವಿಜಿ.

'ಮನಃಪರಿವರ್ತನೆ ಆದ್ಮೇಲೂ ಹಾಗೆಲ್ಲ ಮಾಡ್ತಿಯೇನಣ್ಣೋ?'

'ಬಂದ ದಾರಿ ಮರೀಬಾರದಲ್ವ ಮುದ್ದಣ್ಣ, ಅದಕ್ಕೆ ಎಮ್ಮೆಲ್ಲೆ ಆದ್ಮೇಲೂ ಮತ್ತೆ ಮನಃಪರಿವರ್ತನೆ ಮಾಡ್ಕೊತೀನಿ'.

'ಅಂದ್ರೆ?'

'ರೌಡಿ ಎಮ್ಮೆಲ್ಲೆ ಆಗ್ತೀನಿ'!

ಸಂಗತ

ಹೊತ್ತಿಗೆ ಪ್ರಕಟಣೆಯ ಈ ಹೊತ್ತು

ಹೆಚ್ಚುತ್ತಿರುವ ಪ್ರಕಾಶಕರಿಂದ ಲೇಖಕರ ಬೆಳವಣಿಗೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗುತ್ತಿದೆಯೇ ಎನ್ನುವುದು ಈ ಸಂದರ್ಭದ ಮೂಲಭೂತ ಪ್ರಶ್ನೆಯಾಗಿದೆ


• ರಾಜಕುಮಾರ ಕುಲಕರ್ಣಿ

ಕನ್ನಡದಲ್ಲಿ ಪ್ರತಿವರ್ಷ ಅಸಂಖ್ಯಾತ ಪುಸ್ತಕಗಳು ಪ್ರಕಟಗೊಳ್ಳುತ್ತಿವೆ. ಇದಕ್ಕೆ ಪ್ರಕಾಶಕರ ಸಂಖ್ಯೆ ಹೆಚ್ಚುತ್ತಿರುವುದೇ ಮೂಲ ಕಾರಣವಾಗಿದೆ. ಪ್ರತಿವರ್ಷ ಹೊಸಬರು ಪ್ರಕಾಶನ ಕ್ಷೇತ್ರಕ್ಕೆ ಕಾಲಿಡುತ್ತಿದ್ದಾರೆ. ಪುಸ್ತಕಗಳ ಪ್ರಕಟಣೆಯಲ್ಲಿ ಆಶಾದಾಯಕ ಬೆಳವಣಿಗೆ ಗೋಚರಿಸುತ್ತಿರುವ ಈ ಹೊತ್ತಿನಲ್ಲಿ, ಲೇಖಕರ ಸಮಸ್ಯೆಗಳತ್ತಲೂ ಗಮನಹರಿಸಬೇಕಾಗಿದೆ. ಪ್ರಕಾಶಕರಿಂದ ಲೇಖಕರ ಬೆಳವಣಿಗೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗುತ್ತಿದೆಯೇ ಎನ್ನುವುದೇ ಈ ಸಂದರ್ಭದ ಮೂಲಭೂತ ಪ್ರಶ್ನೆಯಾಗಿದೆ.

ಹೊಸ ಲೇಖಕನಾಗಿ ಸಾಹಿತ್ಯಲೋಕಕ್ಕೆ ಕಾಲಿಟ್ಟಿರುವ ಮಿತ್ರ ಇತ್ತೀಚೆಗೆ ನನ್ನನ್ನು ಪುಸ್ತಕ ಮಳಿಗೆಗೆ ಕರೆದೊಯ್ದಿದ್ದ. ಕೆಲವು ತಿಂಗಳುಗಳ ಹಿಂದೆ ಮಿತ್ರನ ಪುಸ್ತಕವನ್ನು ಪ್ರಕಟಿಸಿ ಬಿಡುಗಡೆಗೊಳಿಸಿದ್ದ ಪ್ರಕಾಶಕರ ಪುಸ್ತಕದಂಗಡಿ ಅದಾಗಿತ್ತು. ಆ ಅಂಗಡಿಯಲ್ಲಿ ತನ್ನ ಪ್ರಕಟಿತ ಪುಸ್ತಕವನ್ನು ನನಗೆ ತೋರಿಸಬೇಕೆಂಬ ಉಮೇದಿಯಿಂದ ಕರೆದೊಯ್ದ ಮಿತ್ರನಿಗೆ ಅಲ್ಲಿ ಅವನ ಪುಸ್ತಕ ಕಾಣಿಸದೆ ನಿರಾಸೆಯಾಯಿತು. ಕೆಲಸಗಾರರನ್ನು ಪ್ರಶ್ನಿಸಿದಾಗ ಅವರು ಮಾಲೀಕರ ಕಡೆ ಕೈತೋರಿಸಿದರು. ಮಾಲೀಕರು ಸಾರ್ವಜನಿಕ ಗ್ರಂಥಾಲಯಗಳಿಗೆ ಮತ್ತು ಕಾಲೇಜು ಗ್ರಂಥಾಲಯಗಳಿಗೆ ಪೂರೈಸಲೆಂದು ಪುಸ್ತಕ ಪ್ರಕಟಿಸಿದ್ದೆ ವಿನಾ ಮಳಿಗೆಯಲ್ಲಿಟ್ಟು ಮಾರಾಟ ಮಾಡಲಿಕ್ಕಲ್ಲ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ತಾನು ಪ್ರಕಟಿಸಿದ ಪುಸ್ತಕಕ್ಕೆ ತನ್ನದೇ ಪುಸ್ತಕ ಮಳಿಗೆಯಲ್ಲಿ ಜಾಗ ಕೊಡದ ಪ್ರಕಾಶಕ ಅದು ಹೇಗೆ ನನ್ನ ಪುಸ್ತಕವನ್ನು ಅನೇಕ ಓದುಗರಿಗೆ ಮುಟ್ಟಿಸುತ್ತಾನೆ ಎನ್ನುವುದು ಬರಹಗಾರ ಮಿತ್ರನ ಪ್ರಶ್ನೆಯಾಗಿತ್ತು.

ಪ್ರಕಾಶಕರ ಗೊಡವೆಯೇ ಬೇಡವೆಂದು ನನ್ನ ಇನ್ನೊಬ್ಬ ಮಿತ್ರರು ಸ್ವತಃ ಪ್ರಕಾಶಕರಾಗಿ ಪುಸ್ತಕ ಪ್ರಕಟಿಸಿದ್ದಾರೆ. ನಲವತ್ತು ಸಾವಿರ ರೂಪಾಯಿಗಳನ್ನು ಮುದ್ರಕರಿಗೆ ಪಾವತಿಸಿ ಒಂದು ಸಾವಿರ ಪ್ರತಿಗಳನ್ನು ಪ್ರಕಟಿಸಿದರು. ಹತ್ತು ಸಾವಿರ ರೂಪಾಯಿ ಖರ್ಚು ಮಾಡಿ ಆಯೋಜಿಸಿದ್ದ ಪುಸ್ತಕ ಬಿಡುಗಡೆಯ ದಿನ ನೂರು ಪ್ರತಿಗಳು ಗೌರವಪ್ರತಿಯ ರೂಪದಲ್ಲಿ ಉಚಿತವಾಗಿ ವಿತರಣೆಯಾದವು. ಪರಿಚಯದ ಪುಸ್ತಕ ಮಾರಾಟಗಾರರನ್ನು ಸಂಪರ್ಕಿಸಿದಾಗ 200 ಪ್ರತಿಗಳು ಶೇ 20ರ ರಿಯಾಯಿತಿ ದರದಲ್ಲಿ ಮಾರಾಟವಾದವು. 300 ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯಕ್ಕೆ ಮಾರಾಟ ಮಾಡಿದರೂ ಆ ಹಣ ಇನ್ನೂ ಅವರ ಕೈಸೇರಿಲ್ಲ. ಈಗ ಸುಮಾರು 400 ಪ್ರತಿಗಳು ಮಾರಾಟವಾಗದೆ ಅವರ ಬಳಿ ಉಳಿದುಕೊಂಡಿವೆ. ಒಂದು ಅಂದಾಜಿನ ಪ್ರಕಾರ, ಈ ಪುಸ್ತಕ ಪ್ರಕಟಣೆಯಿಂದ ಅವರಿಗೆ ₹ 20,000 ನಷ್ಟವಾಗಿದೆ. ಒಂದಿಷ್ಟು ಉತ್ತೇಜನ ದೊರೆತಿದ್ದರೆ ಬೇರೆ ಬೇರೆ ಲೇಖಕರ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯನ್ನು ಹಾಕಿಕೊಂಡಿದ್ದರು. ಆದರೆ ಎದುರಾದ ನಿರುತ್ಸಾಹ ಅವರನ್ನು ಶಾಶ್ವತವಾಗಿ ಪುಸ್ತಕ ಪ್ರಕಾಶನದಿಂದ ದೂರಾಗುವಂತೆ ಮಾಡಿತು.

ಕನ್ನಡದ ಕೆಲವು ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳು ಹೆಸರಾಂತ ಲೇಖಕರಿಗೆ ಮಣೆ ಹಾಕುತ್ತಿವೆಯೇ ವಿನಾ ಹೊಸ ಲೇಖಕರ ಪುಸ್ತಕಗಳನ್ನು ಪ್ರಕಟಿಸಲು ಮುಂದಾಗುತ್ತಿಲ್ಲ. ಹಾಗೆ ಮಾಡಿ ಆರ್ಥಿಕವಾಗಿ ಕೈ ಸುಟ್ಟುಕೊಳ್ಳುವುದೇಕೆ ಎನ್ನುವ ಮನೋಭಾವ ಅವರದಾಗಿರಬಹುದು. ಕೆಲವು ಪ್ರಕಾಶಕರು ಅದಾಗಲೇ ಪತ್ರಿಕೆಗಳಲ್ಲಿ ಪ್ರಕಟವಾದ ಬರಹವಾಗಿದ್ದರೆ ಪುಸ್ತಕ ಪ್ರಕಟಿಸಲು ಆಸಕ್ತಿ ತೋರಿಸುವುದಿಲ್ಲ. ಇನ್ನು ಕೆಲವು ಪ್ರಕಾಶಕರು ಪ್ರತಿವರ್ಷ ತಾವು ಆಯೋಜಿಸುವ ಸ್ಪರ್ಧೆಯಲ್ಲಿ ಭಾಗವಹಿಸಿ ಆಯ್ಕೆಯಾಗುವ ಹಸ್ತಪ್ರತಿಗಳನ್ನು ಮಾತ್ರ ಪ್ರಕಟಿಸುವ ಯೋಜನೆ ಹಾಕಿಕೊಂಡಿರುತ್ತಾರೆ. ಮೂರ್ನಾಲ್ಕು ವರ್ಷಗಳಿಗಾಗುವಷ್ಟು ಕೆಲಸವಿದೆಯೆಂದು ಹೊಸ ಲೇಖಕರತ್ತ ಕಣ್ಣೆತ್ತಿಯೂ ನೋಡದ ಪ್ರಕಾಶಕರೂ ಇದ್ದಾರೆ.



ಇನ್ನು ಕೊಟ್ಟಿದ್ದನ್ನೆಲ್ಲ ಪ್ರಕಟಿಸುವ ಪ್ರಕಾಶಕರ ಸಂಖ್ಯೆಯೂ ಬಹಳಷ್ಟಿದೆ. ಇಂಥವರ ದೃಷ್ಟಿಯಲ್ಲಿ ಪುಸ್ತಕ ಪ್ರಕಟಣೆ ಎನ್ನುವುದು ಸಂಖ್ಯಾತ್ಮಕ ಪ್ರಗತಿಯೇ ವಿನಾ ಗುಣಾತ್ಮಕ ಬೆಳವಣಿಗೆಯಲ್ಲ. ಒಂದೇ ದಿನ ಒಂದೇ ವೇದಿಕೆಯಲ್ಲಿ 100ರಿಂದ 200 ಶೀರ್ಷಿಕೆಗಳ ಪುಸ್ತಕಗಳು ಬಿಡುಗಡೆಯಾಗುತ್ತವೆ. ಅದೆಷ್ಟೋ ಸಂದರ್ಭಗಳಲ್ಲಿ, ಅತಿಥಿಗಳಾಗಿರುವ ವಿದ್ವಾಂಸರು ಸಂಖ್ಯೆಗಲ್ಲ ಗುಣಾತ್ಮಕತೆಗೆ ಆದ್ಯತೆ ನೀಡಿ ಎಂದು ವೇದಿಕೆಯಲ್ಲೇ ಕಿವಿಮಾತು ಹೇಳಿದ್ದುಂಟು. ಇಂಥ ಪ್ರಕಾಶಕರಿಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆ ಮತ್ತು ಶಿಕ್ಷಣ ಸಂಸ್ಥೆಗಳ ಗ್ರಂಥಾಲಯಗಳೇ ಕೃಪಾಪೋಷಿತ ಮಂಡಳಿಗಳಾಗಿವೆ. ಒಬ್ಬರೇ ಪ್ರಕಾಶಕರು ಬೇರೆ ಬೇರೆ ಪ್ರಕಾಶನ ಸಂಸ್ಥೆಗಳ ಹೆಸರುಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಿ ಸಾರ್ವಜನಿಕ ಗ್ರಂಥಾಲಯಗಳಿಗೆ ಮಾರಾಟ ಮಾಡಿ ಧನ್ಯರಾಗುತ್ತಾರೆ. ಇಲ್ಲಿ ನಿಜವಾದ ನಷ್ಟವಾಗುವುದು ಗುಣಾತ್ಮಕ ಪುಸ್ತಕಗಳ ಲೇಖಕರಿಗೆ.

ಇಂಗ್ಲಿಷ್ ಭಾಷೆಯ ಪುಸ್ತಕಗಳ ಮಾರಾಟದಲ್ಲಿನ ರಿಯಾಯಿತಿಯ ಧಾರಾಳತನವೇ ಕನ್ನಡ ಪುಸ್ತಕಗಳ ಮಾರಾಟಕ್ಕೆ ಉರುಳಾಗಿ ಪರಿಣಮಿಸಿದೆ. ಇಂಗ್ಲಿಷ್ ಭಾಷೆಯ ಪುಸ್ತಕಗಳನ್ನು ಖರೀದಿಸುವಾಗ ಸಿಗುತ್ತಿರುವ ಹೆಚ್ಚಿನ ರಿಯಾಯಿತಿಯನ್ನು ಓದುಗರು ಕನ್ನಡ ಪುಸ್ತಕಗಳನ್ನು ಖರೀದಿಸುವಾಗಲೂ ನಿರೀಕ್ಷಿಸುತ್ತಿದ್ದಾರೆ.

ಇಂಥ ಸನ್ನಿವೇಶದಲ್ಲಿ ಓದುಗರು ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಮರ್ಶೆಗಳನ್ನು ಓದಿ ಹೊಸ ಲೇಖಕರ ಪುಸ್ತಕಗಳನ್ನು ಖರೀದಿಸುತ್ತಿದ್ದಾರೆ. ಪ್ರತಿವರ್ಷ ಪ್ರಕಟವಾಗುತ್ತಿರುವ ಎಲ್ಲ ಪುಸ್ತಕಗಳ ವಿಮರ್ಶೆಯಾಗುತ್ತಿದೆಯೇ ಎನ್ನುವ ಪ್ರಶ್ನೆ ಮೂಡುತ್ತದೆ. ಕೆಲವೇ ಪುಸ್ತಕಗಳ ವಿಮರ್ಶೆಯು ಇಡೀ ಸಾಹಿತ್ಯಲೋಕದ ವಿಮರ್ಶೆಯಾಗಲಾರದು ಎನ್ನುವ ಹಿರಿಯ ಸಾಹಿತಿ ಕೆ.ವಿ.ತಿರುಮಲೇಶ ಅವರ ಮಾತು ಸತ್ಯಕ್ಕೆ ಹತ್ತಿರವಾಗಿದೆ. ಪರಿಸ್ಥಿತಿ ಹೀಗಿರುವಾಗ, ಹೊಸ ಲೇಖಕರು ಬರವಣಿಗೆಯ ಕ್ಷೇತ್ರದಲ್ಲಿ ಕಾಲೂರಿ ನಿಲ್ಲಲು ಅಗತ್ಯವಾದ ಆಶಾದಾಯಕ ವಾತಾವರಣ ಕಾಣಿಸುತ್ತಿಲ್ಲ ಎನ್ನುವ ಮಾತನ್ನು ಬೇಸರದಿಂದ ಹೇಳಬೇಕಾಗಿದೆ.

ವಾಚಕರ ವಾಣಿ

ನ್ಯಾಯ ಕೇಳುವುದು ಪಿತೂರಿಯೇ?

ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸುವಂತೆ ಕುಮ್ಮಕ್ಕು ನೀಡಿದ ಆರೋಪದ ಮೇಲೆ ಛಾಯಾಗ್ರಾಹಕ ಮಯೂರ ಎಂಬುವರನ್ನು ಪೊಲೀಸರು ಬಂಧಿಸಿರುವುದು (ಪ್ರ.ವಾ., ಡಿ. 4) ಎಷ್ಟು ಸರಿ? ಅತ್ಯಾಚಾರ, ಕಿರುಕುಳಕ್ಕೆ ಒಳಗಾದ ಅಸಹಾಯಕ ಹೆಣ್ಣು ಮಕ್ಕಳಿಗೆ ನ್ಯಾಯ ಕೇಳುವ ದಾರಿ ತೋರಿಸುವುದು ಅಪರಾಧ ಹೇಗಾಗುತ್ತದೆ? ಅದು ಯಾವ ರೀತಿ ಪಿತೂರಿ ಆಗುತ್ತದೆ?

ಮುರುಘಾಮಠದಲ್ಲಿ ಅತ್ಯಾಚಾರಕ್ಕೆ ಒಳಗಾಗಿದ್ದಾರೆ ಎನ್ನಲಾದ ಸಂತ್ರಸ್ತರಿಗೆ ಆಶ್ರಯ ಕೊಟ್ಟ, ಅವರಿಗೆ ನ್ಯಾಯ ಕೊಡಿಸಲು ಬದ್ಧವಾದ ಸಂಸ್ಥೆಯ ಮೇಲೂ ಪ್ರಕರಣ ದಾಖಲಿಸುವುದು ಯಾವ ನ್ಯಾಯ? ಧ್ವನಿ ಇಲ್ಲದವರಿಗೆ ಧ್ವನಿಯಾಗುವುದೂ ಅಪರಾಧವೇ?

ಫ್ಲೋರಾ ಅಚ್ಯುತ್, ಕೆ.ಜಿ.ಎಫ್.

ಚುನಾವಣಾ ಆಯೋಗ: ಪಾರದರ್ಶಕವಾಗಿರಲಿ

ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾನ್ಯ ವ್ಯಕ್ತಿಯಂತೆ ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡಿರುವುದು ಒಂದೆಡೆಯಾದರೆ, ಎರಡೂವರೆ ಗಂಟೆಗಳ ಕಾಲ ರೋಡ್ ಷೋ ಮಾಡಿ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿರುವುದು ಇನ್ನೊಂದೆಡೆ, ಇದನ್ನು ನೋಡಿದರೂ ನೋಡದಂತೆ ವರ್ತಿಸಿರುವ ಚುನಾವಣಾ ಆಯೋಗ ಮತ್ತೊಂದೆಡೆ.

ಚುನಾವಣಾ ಆಯೋಗವು ಪಕ್ಷಾತೀತವಾಗಿ ಮತ್ತು ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು. ಸುಪ್ರೀಂ ಕೋರ್ಟ್ ಇತ್ತೀಚೆಗೆ ಹೇಳಿರುವಂತೆ, ಪ್ರಧಾನಮಂತ್ರಿಯನ್ನೇ ಆಗಲಿ ವಿಚಾರಣೆಗೆ ಒಳಪಡಿಸುವಂತಹ ಅಧಿಕಾರಿಗಳು ಚುನಾವಣಾ ಆಯೋಗದಲ್ಲಿ ಇರಬೇಕು ಎಂಬ ಮಾತು ಇದಕ್ಕೆ ಸೂಕ್ತವಾಗಿ ಅನ್ವಯವಾಗುತ್ತದೆ.

ಸುನೀಲ್ ಟಿ.ಪಿ., ತಳಗವಾದಿ, ಮಳವಳ್ಳಿ

ಕೋಮು ಸಾಮರಸ್ಯಕ್ಕೆ ಬೇಕು ಆದರ್ಶದ ಇತಿಹಾಸ!

ಕೋಮುದ್ವೇಷದ ದಳ್ಳುರಿಯಿಂದ ಇಂದು ಆಗುತ್ತಿರುವ ಅನಾಹುತಗಳನ್ನು ಶಮನಗೊಳಿಸಲು ಒಂದು ಆದರ್ಶ ಇತಿಹಾಸ ಬೇಕಾಗಿತ್ತು. ನಾಡಿನ ಹಿರಿಯ ಇತಿಹಾಸ ತಜ್ಞ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು 'ಮತೀಯ ದ್ವೇಷವಿಲ್ಲದ ಆದಿಲ್‌ಶಾಹಿ ಆಡಳಿತ'ದ ಕುರಿತು ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಮಂಡಿಸಿರುವ ವಿಚಾರ (ಪ್ರ.ವಾ., ಡಿ. 5) ಇಂದಿಗೆ ಪ್ರಸ್ತುತವೆನಿಸಿದೆ. ಬಿಜಾಪುರವನ್ನು (ಇಂದಿನ ವಿಜಯಪುರ) ಆಳಿದ ಆದಿಲ್‌ಶಾಹಿ ಸುಲ್ತಾನರನೇಕರು ಭಾರತೀಯ ಸಂಸ್ಕೃತಿ, ಸಂಗೀತವನ್ನು ಅಪಾರವಾಗಿ ಪ್ರೀತಿಸುತ್ತಿದ್ದರು. ಎರಡನೆಯ ಇಬ್ರಾಹಿಂ ಆದಿಲ್‌ಶಾಹ 'ಕಿತಾಬ್ ಎ-ನವರಸ್' ಹೆಸರಿನ ಸಂಗೀತ ಗ್ರಂಥವನ್ನು ರಚಿಸಿ, ಅದರಲ್ಲಿ ಹಿಂದೂಸ್ಥಾನಿ ಸಂಗೀತದ ಹಲವು ರಾಗಗಳನ್ನು ಪ್ರಸ್ತಾಪಿಸಿರುವುದು ಇದಕ್ಕೆ ನಿದರ್ಶನ. ಈತನು 'ಜಗದ್ಗುರು' ಎಂದು ಕರೆಸಿಕೊಂಡ, ಸೂಫಿ ಸಂತನಾದ ಚಾರಿತ್ರಿಕ ಸುಲ್ತಾನ.

ಜಗದ್ಗುರು ಇಬ್ರಾಹಿಮ್‌ಗೆ ಸಿಗಬೇಕಾಗಿದ್ದ ಗೌರವ ಸಿಕ್ಕಿದ್ದಿದ್ದರೆ ಮತೀಯ ದ್ವೇಷವನ್ನು ಕದಡಲು ರಾಜಕಾರಣಿಗಳಿಗೆ ಆಸ್ಪದವಾಗುತ್ತಿರಲಿಲ್ಲ. ಈಗಲಾದರೂ ಇಬ್ರಾಹಿಮ್‌ಗೆ ಸೂಕ್ತ ಗೌರವ ಸಲ್ಲಲಿ. ಹೈದರಾಬಾದಿನ ಆಸಿಫ್ ವಂಶದ ಸುಲ್ತಾನರು ಮತೀಯ ಸೌಹಾರ್ದ ಕಾಪಾಡಿಕೊಂಡು ಬಂದದ್ದು ಮತ್ತೊಂದು ಆದರ್ಶದ ಇತಿಹಾಸವಾಗಿದೆ. ಇಂದಿನ ಯುವಜನಾಂಗ ಇಂತಹ ಇತಿಹಾಸದ ಕಡೆ ಆಸಕ್ತಿ ತೋರುವುದು ಒಳಿತು.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಅಹವಾಲು ಸಲ್ಲಿಕೆ: ಅಧಿಕಾರಿಗಳ ಕರ್ತವ್ಯಲೋಪ

ಗ್ರಾಮ ವಾಸ್ತವ್ಯದ ಅಂಗವಾಗಿ ಹೆಗ್ಗಡದೇವನಕೋಟೆ ತಾಲ್ಲೂಕಿನ ಕಾಡಂಚಿನ ಗ್ರಾಮಗಳಿಗೆ ಕಂದಾಯ ಸಚಿವರು ಇತ್ತೀಚೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಗ್ರಾಮಸ್ಥರಿಂದ 1,500ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾದದ್ದು, ಜಿಲ್ಲೆಯ ವಿವಿಧೆಡೆಯಿಂದ ಬಂದಿದ್ದ ಜನರಿಂದ ಅಹವಾಲುಗಳ ಮಹಾಪೂರವೇ ಹರಿದುಬಂದಿದ್ದು, ಸ್ಥಳೀಯ ಆಡಳಿತದ ವೈಫಲ್ಯಗಳಿಗೆ ಸಾಕ್ಷಿಯಾಗಿದೆ. ಇದರಲ್ಲಿ ಶೇ 90ರಷ್ಟು ಸಮಸ್ಯೆಗಳು, ಜಿಲ್ಲಾ ಮಟ್ಟದಿಂದ ಹಿಡಿದು ಹೋಬಳಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿನ ವಿವಿಧ ದರ್ಜೆಯ ಅಧಿಕಾರಿಗಳ ವ್ಯಾಪ್ತಿಗೆ ಬರುವಂತಹ ಕೆಲಸಗಳು. ಈ ಅಧಿಕಾರಿಗಳು ನಿಗದಿತ ಕೇಂದ್ರಸ್ಥಾನದಲ್ಲಿ ವಾಸವಿದ್ದು, ಆಗಾಗ್ಗೆ ಗ್ರಾಮಾಂತರ ಪ್ರದೇಶಗಳಿಗೆ ತೆರಳಿ, ಅಲ್ಲಿನವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಅಷ್ಟೊಂದು ಅರ್ಜಿಗಳು ಸಲ್ಲಿಕೆಯಾಗುತ್ತಿರಲಿಲ್ಲ. ಈಗ ಸಚಿವರು ಗ್ರಾಮಾಂತರ ಪ್ರದೇಶಗಳಿಗೆ ಭೇಟಿ ನೀಡಿದರೆ ಮಾತ್ರ ಕೆಲಸಗಳಾಗುತ್ತವೆ ಎಂಬಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ಅಧಿಕಾರಿಗಳ ಕರ್ತವ್ಯಲೋಪ ಎದ್ದು ಕಾಣುತ್ತದೆ.

ಬಹಳಷ್ಟು ಅಧಿಕಾರಿಗಳು ಕೇಂದ್ರಸ್ಥಾನದಲ್ಲಿ ವಾಸವಿಲ್ಲದೆ ತಮಗೆ ಅನುಕೂಲಕರವಾದ ದೂರದ ಊರುಗಳಲ್ಲಿ ವಾಸಿಸುತ್ತಿದ್ದಾರೆ. ಅವರು ಕಚೇರಿಗಳಿಗೆ ಬಂದು ಹೋಗಲು ಬಹಳಷ್ಟು ಸಮಯ ವ್ಯರ್ಥವಾಗುತ್ತಿದೆ. ಹಾಗಾಗಿ ಸಚಿವರು ಆಡಳಿತವನ್ನು ಚುರುಕುಗೊಳಿಸಲು ಕ್ರಮ ತೆಗೆದುಕೊಳ್ಳಬೇಕು. ಅಧಿಕಾರಿಗಳು ಕೇಂದ್ರಸ್ಥಾನದಲ್ಲಿ ವಾಸವಿರುವುದನ್ನು ಕಡ್ಡಾಯಗೊಳಿಸಬೇಕು. ಕೆಲಸಗಳು ಆಗಿಲ್ಲ ಎಂಬ ದೂರುಗಳು ಬಂದರೆ ನಿರ್ದಾಕ್ಷಿಣ್ಯವಾಗಿ ಶಿಸ್ತುಕ್ರಮ ಜರುಗಿಸಲಾಗುವುದು ಎಂಬ ಎಚ್ಚರಿಕೆಯ ಸಂದೇಶವನ್ನು ರವಾನಿಸಬೇಕು.

ಎ.ಬಿ.ಪುಟ್ಟರಾಜ್, ಹುಣಸೂರು

ಗುಣಮಟ್ಟದ ಶಿಕ್ಷಣ ಖಾತರಿಪಡಿಸಬೇಕು

ರಾಜ್ಯದಲ್ಲಿ ನಾಯಿಕೊಡೆಗಳಂತೆ ವಿಶ್ವವಿದ್ಯಾಲಯಗಳು ತಲೆ ಎತ್ತುತ್ತಿವೆ. ಇದರಿಂದ ವಿದ್ಯಾರ್ಥಿಗಳಿಗೆ ಯಾವುದೇ ರೀತಿ ಅನನುಕೂಲ ಆಗದಂತೆ ನೋಡಿಕೊಳ್ಳಬೇಕಿದೆ. ನೂತನ ವಿಶ್ವವಿದ್ಯಾಲಯಗಳು ಗುಣಮಟ್ಟದ ಶಿಕ್ಷಣ ಖಾತರಿಪಡಿಸಲು ಯೋಜನೆಗಳನ್ನು ರೂಪಿಸಬೇಕಿದೆ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕಿದೆ. ಅಗತ್ಯ ಮೂಲಸೌಕರ್ಯವನ್ನು ಕಾಲಮಿತಿಯೊಳಗೆ ಕಲ್ಪಿಸುವ ಬದ್ಧತೆ ಬೇಕು. ಬೋಧಕರು ನೇಮಕವಾಗುವಂತೆ ನೋಡಿಕೊಳ್ಳಬೇಕು. ವಿದ್ಯಾರ್ಥಿಗಳ ಭವಿಷ್ಯಕ್ಕೆ ಯಾವುದೇ ರೀತಿ ಹಾನಿಯಾಗದಂತೆ ನೋಡಿಕೊಂಡಾಗ ಮಾತ್ರ ಹೊಸದಾಗಿ ವಿಶ್ವವಿದ್ಯಾಲಯ ಸ್ಥಾಪಿಸಿದ ಉದ್ದೇಶ ಈಡೇರಲಿದೆ.

ಎಸ್. ಲಕ್ಷ್ಮಿನಾರಾಯಣ, ಶೃಂಗೇರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಖಾಸಗಿ ವಲಯದಲ್ಲಿ ಮೀಸಲಾತಿ
ಆಶಯ ಮತ್ತು ವಾಸ್ತವ



ಸರ್ಕಾರಗಳೇ ಖಾಸಗಿ ಬಂಡವಾಳಶಾಹಿಯ ಹಿಡಿತದಲ್ಲಿವೆ. ಹೀಗಾಗಿ ಬಹುರಾಷ್ಟ್ರೀಯ ಕಂಪನಿಗಳನ್ನು ಒಳಗೊಂಡಂತೆ ಖಾಸಗಿ ವಲಯದ ಎಲ್ಲಾ ಕಡೆ ಮೀಸಲಾತಿ ತರಲು ಸಂವಿಧಾನದ ತಿದ್ದುಪಡಿ ಆಗಬೇಕಾಗುತ್ತದೆ. ಯಾವುದೇ ಪಕ್ಷದ ಸರ್ಕಾರವು ಇಂತಹ ತಿದ್ದುಪಡಿಗೆ ಸಿದ್ಧವಿದೆಯೇ? ಆರ್ಥಿಕ ಜಾಗತೀಕರಣದ ಬೀಜ ಬಿತ್ತಿ ಗಿಡವಾಗಿಸಿದ ಕಾಂಗ್ರೆಸ್ ಆಗಲಿ, ಮಹೋನ್ನತ ಮರವಾಗಿ ಬೆಳೆಸಿದ ಬಿಜೆಪಿಯಾಗಲಿ ಸಾಮಾಜಿಕ ಮೀಸಲಾತಿಗಾಗಿ ಸಂವಿಧಾನಕ್ಕೆ ತಿದ್ದುಪಡಿ ತರುವುದು ಅನುಮಾನ

• ಬರಗೂರು ರಾಮಚಂದ್ರಪ್ಪ



ನಮ್ಮ ದೇಶದಲ್ಲೀಗ ಮುಕ್ತ ಆರ್ಥಿಕ ಪದ್ಧತಿಯ ಪ್ರಖರ ಜಾರಿಯ ಕಾಲ; ಆರ್ಥಿಕ ಪ್ರಭುತ್ವವು ಪ್ರಜಾಪ್ರಭುತ್ವದ ಮೇಲೆ ಸವಾರಿ ಮಾಡುತ್ತಿರುವ ಕಾಲ; ಅಮೆರಿಕದ ಪ್ರಸಿದ್ಧ ಚಿಂತಕರಲ್ಲೊಬ್ಬರಾದ ಹರ್ಬರ್ಟ್ ಅಪ್ತೇಕರ್ ಅವರು ಮುಕ್ತ ಆರ್ಥಿಕ ಪದ್ಧತಿಯ ಬಗ್ಗೆ ತಮ್ಮ 'The Nature of Democracy: Freedom and Revolution' ಎಂಬ ಕೃತಿಯಲ್ಲಿ ಮಾಡಿರುವ ವಿಶ್ಲೇಷಣೆಯು ಇಂಥ ಸನ್ನಿವೇಶದಲ್ಲಿ ಪ್ರಸ್ತುತವೆನಿಸುತ್ತದೆ. ಅವರು ಮುಕ್ತ ಆರ್ಥಿಕ ಪದ್ಧತಿಯ ದುಷ್ಪರಿಣಾಮಗಳನ್ನು ಕುರಿತು ಹೇಳಿರುವ ಪ್ರಮುಖಾಂಶಗಳನ್ನು ಮುಂದಿನಂತೆ ಪಟ್ಟಿ ಮಾಡಬಹುದು: ಅ) ಸರ್ಕಾರವು ಬಂಡವಾಳ ಶಾಹಿಯನ್ನು ನಿಯಂತ್ರಿಸಬಾರದು; ಆದರೆ ಬಂಡವಾಳ ಶಾಹಿಯು ಸರ್ಕಾರವನ್ನು ನಿಯಂತ್ರಿಸಬಹುದು ಆ) ಆರ್ಥಿಕ ಅಸಮಾನತೆಯು ಸಮಾಜದ ಸಹಜ-ಸ್ವಾಭಾವಿಕ ಅಂಶ ಇ) ಸ್ವಾತಂತ್ರ್ಯವೆನ್ನುವುದು ರಾಜಕೀಯಕ್ಕೆ ಮಾತ್ರ ಸಂಬಂಧಿಸಿದ್ದು; ಆರ್ಥಿಕ ವಿಚಾರಗಳಿಗಲ್ಲ.

ಮುಕ್ತ ಆರ್ಥಿಕ ಪದ್ಧತಿಯ ಉದ್ದೇಶ ಮತ್ತು ನೀತಿ ನಿರೂಪಣೆಯ ಈ ಅಂಶಗಳು, ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು 1949ರ ನವೆಂಬರ್ 25ರಂದು ಸಂವಿಧಾನವನ್ನು ಸಮರ್ಪಿಸಿ ಮಾಡಿದ ಭಾಷಣದಲ್ಲಿ ಪ್ರಸ್ತಾಪಿಸಿದ ಮೂರು ಮಾದರಿಯ ಪ್ರಜಾಪ್ರಭುತ್ವಗಳಿಗೆ ವಿರುದ್ಧವಾಗಿದೆ. ಡಾ. ಅಂಬೇಡ್ಕರ್ ಅಭಿಪ್ರಾಯದಲ್ಲಿ ಸಾಮಾಜಿಕ ಪ್ರಜಾಪ್ರಭುತ್ವ, ರಾಜಕೀಯ ಪ್ರಜಾಪ್ರಭುತ್ವ, ಆರ್ಥಿಕ ಪ್ರಜಾಪ್ರಭುತ್ವ-ಈ ಮೂರೂ ಮಾದರಿಗಳು ಮುಖ್ಯ. ಅಂಬೇಡ್ಕರ್ ಅವರ ಪ್ರಕಾರ ರಾಜಕೀಯ ಪ್ರಜಾಪ್ರಭುತ್ವಕ್ಕೆ ಆರ್ಥಿಕ ಪ್ರಜಾಪ್ರಭುತ್ವದ ಆಧಾರ ಮುಖ್ಯವಾದುದು; ಸಾಮಾಜಿಕ ಪ್ರಜಾಪ್ರಭುತ್ವವು ನಾವು ಅನುಸರಿಸಲೇಬೇಕಾದ ಆದರ್ಶ ಮಾದರಿ. ಅವರು ವಿವರಿಸಿರುವಂತೆ, ಸಾಮಾಜಿಕ ಪ್ರಜಾಪ್ರಭುತ್ವವು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ಒಳಗೊಂಡಿರುತ್ತದೆ.

ಹರ್ಬರ್ಟ್ ಅಪ್ತೇಕರ್ ಅವರು ಮುಕ್ತ ಆರ್ಥಿಕ ಪದ್ಧತಿಗೆ ವಿರುದ್ಧವಾಗಿದ್ದರು. ಅಂಬೇಡ್ಕರ್ ಅವರು ಖಾಸಗೀಕರಣವು ಸ್ವಾರ್ಥಕೇಂದ್ರಿತ ಲಾಭಕ್ಕೆ ಮಹತ್ವ ನೀಡುತ್ತದೆಯೆಂದು ಪ್ರತಿಪಾದಿಸಿದ್ದರು. ಖಾಸಗಿ ವಲಯದ ಮೀಸಲಾತಿ ಪ್ರಶ್ನೆಯನ್ನು ಪರಿಶೀಲಿಸುವಾಗ ಇವರಿಬ್ಬರ ವಿಚಾರಧಾರೆ ಮುಖ್ಯವಾಗುತ್ತದೆ. ಮುಕ್ತ ಆರ್ಥಿಕ ಪದ್ಧತಿಯು ಪ್ರಜಾಸತ್ತಾತ್ಮಕ ಸರ್ಕಾರದ ಬೆನ್ನ ಹಿಂದಿನ ಚಾಟಿಯಾಗಿ ವರ್ತಿಸುವ ಶಕ್ತಿಯನ್ನು ಬಂಡವಾಳಶಾಹಿ ಆರ್ಥಿಕತೆಗೆ ನೀಡುತ್ತದೆ. ಅಭಿವೃದ್ಧಿಯು ಆರ್ಥಿಕ ವಿಷಯ ಮಾತ್ರವೆಂದು ಭಾವಿಸುವ ಬಂಡವಾಳಶಾಹಿಯು ಸಾಮಾಜಿಕ ಸತ್ಯಗಳನ್ನು ನಿರ್ಲಕ್ಷಿಸುತ್ತದೆ. ಸಾಮಾಜಿಕ ಶ್ರೇಣೀಕರಣವು ಅಂತರ್ಗತವಾಗಿ ಬೆಳೆದು ಬಂದ ನಮ್ಮ ಸಮಾಜದ ಬಹು ಆಯಾಮಗಳು ಅಂಥವರಿಗೆ ಅಮುಖ್ಯವಾಗುತ್ತವೆ. ಜಾತಿ, ವರ್ಣ ಮತ್ತು ವರ್ಗ ವಿಭಜನೆಯ ಸಮಾಜದ ಕಂದಕಗಳನ್ನು ಮುಚ್ಚುವುದು ಬಂಡವಾಳಶಾಹಿ ಆರ್ಥಿಕ ನೀತಿಯ ಆದ್ಯತೆಯಲ್ಲ. ಆದ್ದರಿಂದ ಮೀಸಲಾತಿಯೂ ಮುಖ್ಯವಲ್ಲ. ಇದು ನಮ್ಮ ಕಾಲದ ದುರಂತ.

ಖಾಸಗಿ ವಲಯಕ್ಕೆ ಸಂಬಂಧಿಸಿದ ಮೀಸಲಾತಿಯ ಹಕ್ಕೊತ್ತಾಯವು ಎರಡು ರೂಪಗಳಲ್ಲಿ ಕೇಳಿಬರುತ್ತಿದೆ. ಒಂದು-ಸ್ಥಳೀಯ ಮೀಸಲಾತಿ, ಎರಡು- ಸಾಮಾಜಿಕ ಮೀಸಲಾತಿ. ಸ್ಥಳೀಯ ಮೀಸಲಾತಿಯು ಆಯಾ ರಾಜ್ಯದ ಸ್ಥಳೀಯ ಅರ್ಹ ಅಭ್ಯರ್ಥಿಗಳಿಗೆ ಖಾಸಗಿ ವಲಯದಲ್ಲಿ ಇಂತಿಷ್ಟು ಉದ್ಯೋಗಗಳನ್ನು ಮೀಸಲಿಡಬೇಕೆಂದು ಬಯಸುತ್ತದೆ. ಇದಕ್ಕೆ ಸ್ಪಂದಿಸಿ ಕೆಲವು ರಾಜ್ಯಗಳು ಆಯಾ ಸರ್ಕಾರದ ವ್ಯಾಪ್ತಿಯಲ್ಲಿರುವ ಖಾಸಗಿ ಉದ್ದಿಮೆಗಳಲ್ಲಿ ಸ್ಥಳೀಯ ಮೀಸಲಾತಿ ನೀತಿಯನ್ನು ಜಾರಿ ಮಾಡಲು ಆದೇಶಗಳನ್ನು ಹೊರಡಿಸಿವೆ. ಕರ್ನಾಟಕದ ಸರೋಜಿನಿ ಮಹಿಷಿ ವರದಿ ಮತ್ತು ಜಾರಿ ಕುರಿತ ವಿಷಯದ ಪ್ರಸ್ತಾಪ ಇಲ್ಲಿ ಪ್ರಸ್ತುತವಾಗುತ್ತದೆ. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯವರಾಗಿದ್ದಾಗ ರಚಿತವಾದ ಸರೋಜಿನಿ ಮಹಿಷಿ ಸಮಿತಿಯು 1984ರ ಜೂನ್ 13ರಂದು ಮಧ್ಯಂತರ ವರದಿಯನ್ನೂ 1986ರ ಡಿಸೆಂಬರ್ 30ರಂದು ಅಂತಿಮ ವರದಿಯನ್ನೂ ನೀಡಿತು. ಒಟ್ಟು 58 ಶಿಫಾರಸುಗಳಲ್ಲಿ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ 12 ಶಿಫಾರಸುಗಳನ್ನು ಹೊರತುಪಡಿಸಿ ಉಳಿದ ಶಿಫಾರಸುಗಳನ್ನು ಒಪ್ಪಿ ಹೆಗಡೆಯವರ ಸರ್ಕಾರವು ಆದೇಶ ಹೊರಡಿಸಿತು.

ಮುಂದೆ ಬಂಗಾರಪ್ಪನವರು ಮುಖ್ಯಮಂತ್ರಿಯವರಾದಾಗ 1990ರ ನವೆಂಬರ್‌ನಲ್ಲಿ ಇಲಾಖಾವಾರು ವಿಂಗಡಣೆ ಮಾಡಿ ವರದಿ ಜಾರಿಗೆ ತೀವ್ರತೆ ತರಲಾಯಿತು. ಮುಕ್ತ ಆರ್ಥಿಕ ಪದ್ಧತಿಯಾಗಲಿ, ಬಹುರಾಷ್ಟ್ರೀಯ ಕಂಪನಿಗಳ ಆಗಮನವಾಗಲಿ ಸರೋಜಿನಿ ಮಹಿಷಿ ಸಮಿತಿಯ ಕಾಲದಲ್ಲಿ ಇರಲಿಲ್ಲ ಎಂಬುದನ್ನು ಗಮನಿಸಬೇಕು. ಇತರೆ ಕೆಲವು ರಾಜ್ಯಗಳೂ ತಂತಮ್ಮ ಸರ್ಕಾರಗಳ ವ್ಯಾಪ್ತಿಯಲ್ಲಿ ಸ್ಥಳೀಯ ಮೀಸಲಾತಿಯನ್ನು ನೀಡಿವೆ. ಮಹಾರಾಷ್ಟ್ರದಲ್ಲಿ ಶೇ 80, ಆಂಧ್ರಪ್ರದೇಶದಲ್ಲಿ ಶೇ 75, ಮಧ್ಯಪ್ರದೇಶದಲ್ಲಿ ಶೇ 70 ಮತ್ತು ಹರಿಯಾಣದಲ್ಲಿ ಮಾಹೆಯಾನ ಮೂವತ್ತು ಸಾವಿರ ಸಂಬಳದ ಎಲ್ಲ ಹುದ್ದೆಗಳು ಸ್ಥಳೀಯರಿಗೆ ಮೀಸಲು. ಆಂಧ್ರ ಮತ್ತು ಹರಿಯಾಣ ಸರ್ಕಾರದ ಕಾಯ್ದೆಗಳು ಕೋರ್ಟಿನ ಅಂಗಳಕ್ಕೆ ಬಂದವು. ಆಂಧ್ರ ಪ್ರದೇಶದ ಮೀಸಲಾತಿಗೆ ತಡೆ ನೀಡಲಾಗಿದೆ. ಹರಿಯಾಣದ ಕಾಯ್ದೆಯನ್ನು 2022ರ ಫೆಬ್ರವರಿ ಮೂರರಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. ತಡೆಯಾಜ್ಞೆ ತರಲಾಯಿತು. ಆದರೆ 2022ರ ಫೆಬ್ರವರಿ ಹದಿನೇಳರಂದು ಸುಪ್ರೀಂ ಕೋರ್ಟು ಈ ತಡೆಯಾಜ್ಞೆಯನ್ನು ತೆರವುಗೊಳಿಸಿತು. ಆದರೂ ಅಂತಿಮ ವಿಚಾರಣೆಯನ್ನು ಹೈಕೋರ್ಟಿಗೆ ಬಿಟ್ಟಿತು.

ಖಾಸಗಿ ವಲಯದಲ್ಲಿ ಸ್ಥಳೀಯ ಮೀಸಲಾತಿಯ ಸ್ಥಿತಿಗತಿಯೇ ಹೀಗಿರುವಾಗ ಸಾಮಾಜಿಕ ಮೀಸಲಾತಿಗೆ ಅವಕಾಶ ಕಲ್ಪಿಸುವ ಕನಸು ನನಸಾಗಲು ಸಾಧ್ಯವೇ? ಈ ದಿಸೆಯಲ್ಲಿ ಪ್ರಯತ್ನವೊಂದು ನಡೆಯಿತು. 2006ರಲ್ಲಿ ಅಂದಿನ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವು ಖಾಸಗಿ ವಲಯದಲ್ಲಿ ಸಾಮಾಜಿಕ ಮೀಸಲಾತಿ ಕಲ್ಪಿಸುವ ಕುರಿತ ಸಮಾಲೋಚನೆಗೆ ಒಂದು ಸಮನ್ವಯ ಸಮಿತಿಯನ್ನು ರಚಿಸಿತು. ಇದರಲ್ಲಿ ಖಾಸಗಿ ಉದ್ದಿಮೆಯ ಪ್ರತಿನಿಧಿಗಳೂ ಇದ್ದರು. ಒಟ್ಟು ಒಂಬತ್ತು ಸಭೆಗಳು ನಡೆದವು.

ಮೊದಲನೇ ಸಭೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಖಾಸಗಿ ಉದ್ದಿಮೆಗಳು ಸ್ವಯಂಪ್ರೇರಿತವಾಗಿ ಕೌಶಲ ತರಬೇತಿ ನೀಡುವ ಬಗ್ಗೆ ಚರ್ಚಿಸಲಾಯಿತು. ಒಂಬತ್ತನೇ ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇ 25ರಷ್ಟು ಅವಕಾಶ ನೀಡುವ ಬಗ್ಗೆ ಖಾಸಗಿ ಉದ್ದಿಮೆದಾರರಲ್ಲಿ 'ಮನವಿ' ಮಾಡಲಾಯಿತು. ಆದರೆ ಕಡೆಗೆ ತರಬೇತಿ, ಸಂಶೋಧನೆಗೆ ಸಹಾಯ, ಶಿಷ್ಯವೇತನ ಮುಂತಾದ ಪ್ರೋತ್ಸಾಹಕ ಕ್ರಮಗಳಿಗೆ ಸೀಮಿತವಾಯಿತು. ಸಾಮಾಜಿಕ ಮೀಸಲಾತಿಯ ಕ್ರಮವು ಕನಸಾಗಿಯೇ ಉಳಿಯಿತು.

ಖಾಸಗಿ ವಲಯದಲ್ಲಿ ಮೀಸಲಾತಿ ಕಲ್ಪಿಸಲು ಸಂವಿಧಾನದಲ್ಲಿ ಅವಕಾಶವಿದೆಯೆ ಎಂಬ ಪ್ರಶ್ನೆಯನ್ನು ಪರಿಶೀಲಿಸಬಹುದು. ಸಂವಿಧಾನದ 15(4) ಮತ್ತು 16(4)ರ ಪ್ರಕಾರ ಸರ್ಕಾರದ ಅಧೀನದಲ್ಲಿರುವ ಉದ್ಯೋಗಗಳಲ್ಲಿ ಸಾಮಾಜಿಕ ಮೀಸಲಾತಿ ನೀಡುವ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಬಹುರಾಷ್ಟ್ರೀಯ ಖಾಸಗಿ ಉದ್ದಿಮೆಗಳು ಪ್ರಜಾಸತ್ತಾತ್ಮಕ ಸರ್ಕಾರದ ಅಧೀನದಲ್ಲಿ ಇಲ್ಲ ಎನ್ನುವುದೇ ವಿಪರ್ಯಾಸ! ಹರ್ಬರ್ಟ್ ಅಪ್ತೇಕರ್ ಅವರು ಹೇಳಿದಂತೆ ಸರ್ಕಾರಗಳೇ ಖಾಸಗಿ ಬಂಡವಾಳಶಾಹಿಯ ಹಿಡಿತದಲ್ಲಿವೆ. ಹೀಗಾಗಿ ಬಹುರಾಷ್ಟ್ರೀಯ ಕಂಪನಿಗಳನ್ನು ಒಳಗೊಂಡಂತೆ ಖಾಸಗಿ ವಲಯದ ಎಲ್ಲಾ ಕಡೆ ಮೀಸಲಾತಿ ತರಲು ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕಾಗುತ್ತದೆ. ಯಾವುದೇ ಪಕ್ಷದ ಸರ್ಕಾರವು ಇಂತಹ ತಿದ್ದುಪಡಿಗೆ ಸಿದ್ಧವಿದೆಯೇ? ಆರ್ಥಿಕ ಜಾಗತೀಕರಣದ ಬೀಜ ಬಿತ್ತಿ ಗಿಡವಾಗಿಸಿದ ಕಾಂಗ್ರೆಸ್ ಆಗಲಿ, ಮಹೋನ್ನತ ಮರವಾಗಿ ಬೆಳೆಸಿದ ಬಿಜೆಪಿಯಾಗಲಿ ಸಾಮಾಜಿಕ ಮೀಸಲಾತಿಗಾಗಿ ಸಂವಿಧಾನಕ್ಕೆ ತಿದ್ದುಪಡಿ ತರುವುದು ಅನುಮಾನ.

ಈಗಂತೂ ಸರ್ಕಾರಿ ಉದ್ದಿಮೆಗಳನ್ನೆಲ್ಲ ಖಾಸಗಿ ಬಂಡವಾಳಗಾರರ ಬಾಗಿಲಿಗೊಯ್ದು ಅರ್ಪಿಸುತ್ತಿದ್ದು, ಖಾಸಗಿ ವಲಯದಲ್ಲಿ ಸಾಮಾಜಿಕ ಮೀಸಲಾತಿಯನ್ನು ಊಹಿಸುವುದಕ್ಕೂ ಸಾಧ್ಯವಿಲ್ಲದ ಸನ್ನಿವೇಶವಿದೆ. ಹಾಗಾದರೆ ಸರ್ಕಾರದಿಂದ ಹೊರಗುಳಿದ ವಲಯಗಳಲ್ಲಿ ಮೀಸಲಾತಿ ಸಾಧ್ಯವೇ ಇಲ್ಲವೆ? 2005ರಲ್ಲಿ ಅಂದಿನ ಕೇಂದ್ರ ಸರ್ಕಾರವು ಸಂವಿಧಾನಕ್ಕೆ 93ನೇ ತಿದ್ದುಪಡಿ ತಂದು ಅನುದಾನಿತವಷ್ಟೇ ಅಲ್ಲ, ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೂ ಸಾಮಾಜಿಕ ಮೀಸಲಾತಿಯನ್ನು ವಿಸ್ತರಿಸಿತು. ಇದು ಸಂವಿಧಾನ ವಿರೋಧಿ ಎಂದು ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಲಾಯಿತು (ಅಶೋಕ್ ಕುಮಾರ್ ಠಾಕೂರ್ ಮತ್ತು ಕೇಂದ್ರ ಸರ್ಕಾರದ ನಡುವಣ ಪ್ರಕರಣ). 93ನೇ ತಿದ್ದುಪಡಿಯು ಸಂವಿಧಾನದ ಮೂಲ ಆಶಯಗಳನ್ನು ಉಲ್ಲಂಘಿಸಿಲ್ಲ ಎಂದು ಸುಪ್ರೀಂ ಕೋರ್ಟು ತೀರ್ಪು ನೀಡಿತು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಮಾನದಂಡಗಳನ್ನು ಒಟ್ಟಿಗೆ ಪರಿಗಣಿಸಬೇಕೆಂದು ಸೂಚಿಸಿತು. ವಾಸ್ತವಿಕ ವಿಚಿತ್ರವೆಂದರೆ ಈಗ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಜಾರಿಯಲ್ಲಿ ಇಲ್ಲ. ಅಷ್ಟೇ ಅಲ್ಲ. ಕೆಲವು ಅನುದಾನಿತ ಶಿಕ್ಷಣ ಸಂಸ್ಥೆಗಳು ಮೀಸಲಾತಿಯಿಂದ ದೂರವುಳಿಯಲು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಹಿಂದೇಟು ಹಾಕುತ್ತಿವೆ.

ಸಾಮಾಜಿಕ ನ್ಯಾಯವೆನ್ನುವುದು ಕೇವಲ ಸರ್ಕಾರಿ ವಲಯದ ಪರಿಕಲ್ಪನೆಯಲ್ಲ. ಅದು ಇಡೀ ಸಮಾಜದ ಸಮಸ್ತ ವಲಯಗಳಿಗೂ ಸಂಬಂಧಿಸಿದ ನ್ಯಾಯ ಪರಿಕಲ್ಪನೆ. ಖಾಸಗಿ ವಲಯವು ಸಮಾಜದ ಭಾಗವಾಗಿದ್ದು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಬೇಕಲ್ಲವೇ? ಉತ್ತರ, ಆರ್ಥಿಕ ಪ್ರಭುತ್ವದ ಅಂಗಳಲ್ಲಿದೆ. ಹಕ್ಕೊತ್ತಾಯ ಪ್ರಜಾಪ್ರಭುತ್ವದ ಕೈಯ್ಯಲ್ಲಿದೆ.

ಲೇಖಕ: ಮಾಜಿ ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಗುಜರಾತ್, ಹಿಮಾಚಲ ಪ್ರದೇಶ ವಿಧಾನಸಭೆ ಹಾಗೂ ದೆಹಲಿ ಮಹಾನಗರ ಪಾಲಿಕೆ ಚುನಾವಣಾ ಫಲಿತಾಂಶ ಕುರಿತು ಹೊರಬಿದ್ದಿರುವ ಮತಗಟ್ಟೆ ಸಮೀಕ್ಷೆಗಳ ಭವಿಷ್ಯ ನಂಬಲರ್ಹವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



'ಸೌಲಭ್ಯ ಬೇಕು, ಕೆಲಸ ಕೊಡುವುದಿಲ್ಲ ಎಂದರೆ ಹೇಗೆ?'



ಸ್ಥಳೀಯರಿಗೆ ಉದ್ಯೋಗದಲ್ಲಿ ಮೀಸಲಾತಿಯನ್ನು ಶಾಸನದತ್ತವಾಗಿ ದೊರಕಿಸಿಕೊಡಬೇಕಾದುದು ರಾಜ್ಯ ಸರ್ಕಾರದ ಕರ್ತವ್ಯ. ಸಂವಿಧಾನಕ್ಕೆ ಅಗತ್ಯ ತಿದ್ದುಪಡಿ ತರುವ ಮೂಲಕ ಕನ್ನಡಿಗರಿಗೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಉದ್ಯೋಗ ಸಿಗುವಂತೆ ನೋಡಿಕೊಳ್ಳಬೇಕಿದೆ. ಕೆಲವು ರಾಜ್ಯಗಳಲ್ಲಿ ಅಲ್ಲಿನ ಸ್ಥಳೀಯರಿಗೆ ಮೀಸಲಾತಿ ನೀಡುವ ಕಾನೂನು ಜಾರಿಗೆ ತರಲಾಗಿದೆ. ಈ ಮಾರ್ಗವನ್ನು ಕರ್ನಾಟಕವೂ ಅನುಸರಿಸಬೇಕು.

ಕೈಗಾರಿಕೆಗಳನ್ನು ತೆರೆಯಲು ಉದ್ಯಮಿಗಳು ರಾಜ್ಯಕ್ಕೆ ಬರುತ್ತಾರೆ. ಕೈಗಾರಿಕೆಗಾಗಿ ಜನರು ತಮ್ಮ ಭೂಮಿ ಬಿಟ್ಟುಕೊಡುತ್ತಾರೆ. ಉದ್ದಿಮೆಗೆ ಬೇಕಾದ ನೀರು ಮೊದಲಾದ ಸವಲತ್ತುಗಳನ್ನು ಸರ್ಕಾರ ಒದಗಿಸುತ್ತದೆ. ಜೊತೆಗೆ ಪರಿಸರವೂ ನಿಧಾನಕ್ಕೆ ಹಾನಿಗೆ ಒಳಗಾಗುತ್ತದೆ. ಭೂಮಿ, ನೀರು ಮತ್ತಿತರೆ ಸವಲತ್ತುಗಳನ್ನು ಕೊಟ್ಟು, ಪರಿಸರದ ಅಡ್ಡ ಪರಿಣಾಮಗಳನ್ನೂ ಎದುರಿಸುವ ಸ್ಥಳೀಯರಿಗೆ, ಆ ಕೈಗಾರಿಕೆಯಲ್ಲಿ ಕೆಲಸ ಮಾಡಲು ಅವಕಾಶ ನೀಡುವುದಿಲ್ಲ ಎಂದರೆ ಒಪ್ಪುವುದಾದರೂ ಹೇಗೆ?

ರಾಜಕೀಯ ಪಕ್ಷಗಳ ಇಚ್ಛಾಶಕ್ತಿ ಕೊರತೆ ಹಾಗೂ ಹೈಕಮಾಂಡ್ ಭಯ ಆವರಿಸಿರುವುದೇ ರಾಜಕೀಯ ಪಕ್ಷಗಳು ಈ ದಿಸೆಯಲ್ಲಿ ಕೆಲಸ ಮಾಡಲು ಹಿಂದೇಟು ಹಾಕುವುದಕ್ಕೆ ಕಾರಣ. ದೆಹಲಿಯವರು ಏನಂದುಕೊಳ್ಳುತ್ತಾರೋ ಎಂಬ ಭಯದಲ್ಲಿ ಕನ್ನಡಿಗರಿಗೆ ಮೀಸಲಾತಿ ಕೊಡಿಸುವ ಗೋಜಿಗೆ ಪಕ್ಷಗಳು ಮುಂದಾಗುತ್ತಿಲ್ಲ. ಉತ್ತರ ಪ್ರದೇಶದಲ್ಲಿ ಅಲ್ಲಿನ ಸ್ಥಳೀಯರಿಗೆ, ಬಿಹಾರದಲ್ಲಿ ಬಿಹಾರಿ ಭಾಷಿಕರಿಗೆ ಉದ್ಯೋಗ ಸಿಗಬೇಕು. ಹಾಗೆಯೇ ಕನ್ನಡದವರಿಗೆ ಕರ್ನಾಟಕದಲ್ಲಿ ಉದ್ಯೋಗ ಸಿಗಬೇಕು ಎಂಬುದರಲ್ಲಿ ಯಾವ ತಪ್ಪೂ ಇಲ್ಲ.

ಅರುಣ್ ಜಾವಗಲ್, ಕನ್ನಡಪರ ಹೋರಾಟಗಾರ

'ಸಂವಿಧಾನದ ಆಶಯಗಳಿಗೆ ವಿರೋಧವಲ್ಲ'



ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ಅನ್ನೋದಕ್ಕಿಂತ ಸ್ಥಳೀಯರಿಗೆ ಮೀಸಲಾತಿ ಅನ್ನೋದು ಈ ವಿಚಾರವನ್ನು ಸರಿಯಾಗಿ ಮುಂದಿಡುವ ಕ್ರಮ ಅನಿಸುತ್ತದೆ. ಇದನ್ನು ಭಾಷೆಗೆ ಸೀಮಿತಗೊಳಿಸಲಾಗದು, ಕರ್ನಾಟಕದಲ್ಲೇ ಹುಟ್ಟಿ ಬೆಳೆದಿರುವ ಕರ್ನಾಟಕದವರೇ ಆಗಿರುವ ಅನೇಕ ಭಾಷೆ ಮಾತಾಡುವ ಜನರು ನಮ್ಮ ನಾಡಿನಲ್ಲಿದ್ದಾರೆ. ಒಂದುಮಟ್ಟಿಗೆ ಹೆಚ್ಚುತ್ತಿರುವ ವಲಸೆ, ಅದರಿಂದ ಉಂಟಾಗಿರುವ ಪಲ್ಲಟಗಳೂ ಸ್ಥಳೀಯರಿಗೆ ಮೀಸಲಾತಿ ಸಿಗಬೇಕೆಂಬ ಕೂಗು ಏಳುವುದಕ್ಕೆ ಕಾರಣವಾಗಿದೆ. ಈ ವಿಚಾರದಲ್ಲಿ ಸಮತೋಲನದ ಒಂದು ನಿಲುವನ್ನು ಹೊಂದಬೇಕಾದದ್ದು ಅತ್ಯಗತ್ಯ. ಸಂವಿಧಾನದಲ್ಲಿ ಮೀಸಲಾತಿಯನ್ನು ಒಳಗೊಂಡದ್ದರ ಆಶಯ, ಆರ್ಥಿಕವಾಗಿ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಮತ್ತು ಚಾರಿತ್ರಿಕವಾಗಿ ಶೋಷಣೆಗೊಳಗಾಗಿರುವ ಅಂಚಿಗೊತ್ತಲ್ಪಟ್ಟಿರುವ ಸಮುದಾಯಗಳ ಮೇಲ್ಚಲನೆಗೆ ಅವಕಾಶವಾಗುವಂತೆ ಪ್ರಾತಿನಿಧ್ಯ ಒದಗಿಸುವುದು.

ಈ ಹಿನ್ನೆಲೆಯಲ್ಲಿ ನೋಡಿದರೂ ಸ್ಥಳೀಯರಿಗೆ ಮೀಸಲಾತಿ ಎಂಬುದು ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಲ್ಲ. ಏಕೆಂದರೆ ಉತ್ತಮ ಹುದ್ದೆಗಳಿಗೆಲ್ಲ ಹೊರಗಿನಿಂದ 'ಪ್ರತಿಭಾವಂತ'ರನ್ನು ಕರೆತರುತ್ತೇವೆಂಬ ಹಟದ ಕಾರಣಕ್ಕೂ ಈ ಮೀಸಲಾತಿಯ ಹಕ್ಕೊತ್ತಾಯ ಹಲವು ಸಂದರ್ಭಗಳಲ್ಲಿ ಜೋರಾಗಿ ಎದ್ದಿದೆಯೆಂಬುದನ್ನೂ ಮರೆಯುವಂತಿಲ್ಲ. ಒಟ್ಟಾರೆಯಾಗಿ ಮೀಸಲಾತಿಯೆಂಬುದೊಂದು ರಾಜಕೀಯ ಹಕ್ಕಿನ ಪ್ರಶ್ನೆ. ಅದನ್ನು ರಾಜಕೀಯ ಪಕ್ಷಗಳು ಬೇರೆ ಬೇರೆ ರೀತಿಗಳಲ್ಲಿ ನಿರ್ವಹಿಸುತ್ತವೆ. ವಾಸ್ತವದಲ್ಲಿ ಸಂವಿಧಾನ ನೀಡಿರುವ ಮೀಸಲಾತಿಯ ವ್ಯಾಖ್ಯಾನದಿಂದ ಹೊರತಾಗಿ ಜಾರಿಗೆ ಬಂದಿರುವುದು 'ಇಡಬ್ಲ್ಯುಎಸ್ ಕೋಟಾ'ದ ಪದ್ಧತಿ. ಅದನ್ನು ವಿರೋಧಿಸಬೇಕಿದೆಯೇ ಹೊರತು ಸ್ಥಳೀಯರಿಗೆ ಮತ್ತು ಶೋಷಿತರಿಗೆ ಮೀಸಲಾತಿ ಬೇಕೆಂಬ ಇಂದಿನ ಹಕ್ಕೊತ್ತಾಯವನ್ನಲ್ಲ!

ಮಲ್ಲಿಗೆ ಸಿರಿಮನೆ, ಸಾಮಾಜಿಕ ಕಾರ್ಯಕರ್ತೆ

'ಕನ್ನಡಪರ ನಿಲುವಿನ ಜನಪ್ರತಿನಿಧಿಗಳನ್ನೇ ಆರಿಸಿ'



ಕರ್ನಾಟಕದಲ್ಲಿ ಕನ್ನಡಕ್ಕೆ, ಕನ್ನಡಿಗರಿಗೆ ಆದ್ಯತೆ ಸಿಗಬೇಕು ಎಂಬುದು ನಿರ್ವಿವಾದ. ಕನ್ನಡ ಭಾಷೆ, ಕನ್ನಡಿಗರ ಅಸ್ಮಿತೆ ಮತ್ತು ಅಸ್ತಿತ್ವ ಉಳಿಯಬೇಕೆಂದರೆ ನಮ್ಮ ನೆಲದ ಸಂಪತ್ತು ಮತ್ತು ಸಂಪನ್ಮೂಲಗಳಲ್ಲಿ ನಮಗೆ ನ್ಯಾಯಯುತವಾದ ಪಾಲನ್ನು ಖಾತರಿಪಡಿಸುವಂತೆ ಇಲ್ಲಿನ ಉದ್ಯೋಗಗಳಲ್ಲಿ ಸ್ಥಳೀಯರಿಗೆ ಗಣನೀಯ ಪ್ರಮಾಣವನ್ನು ಮೀಸಲಿಡಲೇಬೇಕು.

ಆಯಾ ರಾಜ್ಯದ ಸ್ಥಳೀಯರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಕುರಿತಂತೆ, 'ಹಿಂದೂ, ಹಿಂದಿ, ಹಿಂದೂಸ್ತಾನ್', 'ಒಂದು ದೇಶ...', ಕಾರ್ಯಸೂಚಿಗಳಲ್ಲಿ ಮುಳುಗಿರುವ ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರವನ್ನು ಎಚ್ಚರಿಸುವ ಕೆಲಸವನ್ನು ರಾಜ್ಯಗಳು ಮಾಡಬೇಕಿದೆ. ಈ ಸಂಬಂಧ ಸಂವಿಧಾನ ತಿದ್ದುಪಡಿ ಮಾಡುವಂತೆ ಎಲ್ಲ ರಾಜ್ಯಗಳು ಒಕ್ಕೂಟ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು. ಕನ್ನಡಿಗರಿಗೆ ರಾಜ್ಯದಲ್ಲಿ ಕಡ್ಡಾಯವಾಗಿ ಉದ್ಯೋಗ ನೀಡುವಂತಹ ಕಾಯ್ದೆಗಳನ್ನು ತರುವ ಅಗತ್ಯವಿದೆ. ತಮ್ಮನ್ನು ಸಂಸತ್ತಿನಲ್ಲಿ ಪ್ರತಿನಿಧಿಸಲೆಂದು ಆರಿಸಿ ಕಳಿಸಿದ ಸಂಸದರು, ತಮ್ಮ ಕರ್ತವ್ಯ ಮರೆತು ಪಕ್ಷದ ಬಾಲಬಡುಕರಾದಾಗ, ಜನರು ಅವರನ್ನು ಗಟ್ಟಿದನಿಯಲ್ಲಿ ಪ್ರಶ್ನಿಸಬೇಕಿದೆ. ಹಾಗೆಯೇ ಈ ನಾಡಿನ ಮಾಧ್ಯಮಗಳು ಸಹ ಜನರ ದನಿಯಾಗಿ ಇದನ್ನು ನಿರಂತರವಾಗಿ ಮಾಡಬೇಕಿದೆ.

ತಮ್ಮ ಉದ್ಯೋಗಗಳನ್ನು ಕಾಪಾಡಿ ತಮಗೇ ಕೊಡಿಸುವ ಪಕ್ಷಗಳನ್ನೇ ಚುನಾವಣೆಯಲ್ಲಿ ಆಯ್ಕೆ ಮಾಡುವ ಪ್ರಬುದ್ಧತೆಯನ್ನು ಜನರು ಪ್ರದರ್ಶಿಸುವ ಸಮಯ ಬಂದಿದೆ. ಆಗ ಜನಪ್ರತಿನಿಧಿಗಳು ತಾವಾಗಿಯೇ ದಾರಿಗೆ ಬರುತ್ತಾರೆ.

ಸಂಜ್ಯೋತಿ ವಿ.ಕೆ., ಚಿತ್ರ ನಿರ್ದೇಶಕಿ, ಬೆಂಗಳೂರು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಇರಾನ್‌ನಲ್ಲಿ ಮಹಿಳೆಯರು** ಕಡ್ಡಾಯವಾಗಿ ಹಿಜಾಬ್ ಧರಿಸುವುದರ ಮೇಲ್ವಿಚಾರಣೆಯ ಜವಾಬ್ದಾರಿ ಹೊತ್ತುಕೊಂಡಿದ್ದ 'ನೈತಿಕ ಪೊಲೀಸ್ ವ್ಯವಸ್ಥೆ'ಯನ್ನು ರದ್ದುಪಡಿಸಲಾಗಿದೆ ಎಂದು ಅಂತರರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿದ್ದವು. ಇರಾನ್‌ನ ಅಟಾರ್ನಿ ಜನರಲ್ ಮೊಹಮ್ಮದ್ ಜಾಫರ್ ಮೊಂಟಜರಿ ಅವರು ಸುದ್ದಿಗೋಷ್ಠಿಯಲ್ಲಿ ನೀಡಿದ್ದ ಹೇಳಿಕೆಯನ್ನು ಬಿಬಿಸಿ, ಎಎಫ್‌ಪಿ ಮೊದಲಾದ ಮಾಧ್ಯಮ ಸಂಸ್ಥೆಗಳು ಉಲ್ಲೇಖಿಸಿದ್ದವು. 80ರ ದಶಕದಲ್ಲಿ ಹಿಜಾಬ್ ಕಡ್ಡಾಯ ಪಾಲನೆಯ ಮೇಲೆ ನಿಗಾ ವಹಿಸಲು 'ಗಶ್ತ್-ಎ-ಇರ್ಷಾದ್' ಎಂಬ ಪಡೆಯನ್ನು ರಚಿಸಲಾಗಿತ್ತು. ಹಿಜಾಬ್ ಧರಿಸದ ಕಾರಣಕ್ಕೆ ಮಹ್ಸಾ ಅಮೀನಿ ಎಂಬ ಯುವತಿ ನೈತಿಕ ಪೊಲೀಸ್ ಪಡೆಯ ವಶದಲ್ಲಿದ್ದಾಗ ಮೃತಪಟ್ಟಿದ್ದರು. ಇದರ ವಿರುದ್ಧ ಇರಾನ್‌ನಲ್ಲಿ ಎರಡು ತಿಂಗಳಿನಿಂದ ದೊಡ್ಡ ಪ್ರಮಾಣದ ಪ್ರತಿಭಟನೆ ನಡೆಯುತ್ತಿದೆ. ಪ್ರತಿಭಟನೆಯಿಂದ ಎಚ್ಚೆತ್ತ ಇರಾನ್ ಸರ್ಕಾರವು ನೈತಿಕ ಪೊಲೀಸ್ ಪಡೆಯನ್ನು ರದ್ದುಪಡಿಸಿದೆ ಎಂದು ವರದಿಯಾಗಿದೆ. ಆದರೆ ಇದು ತಪ್ಪು ವರದಿ.

✓ **ಮೊಂಟಜರಿ ಅವರ** ಹೇಳಿಕೆಯನ್ನು ಮಾಧ್ಯಮಗಳು ತಪ್ಪಾಗಿ ಅರ್ಥೈಸಿ ವರದಿ ಮಾಡಿವೆ ಎಂದು 'ಲಾಜಿಕಲ್ ಇಂಡಿಯನ್ ವೆಬ್‌ಸೈಟ್' ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಮೊಂಟಜರಿ ಅವರು ಈ ನಿರ್ಧಾರ ತೆಗೆದುಕೊಳ್ಳುವ ಪೊಲೀಸ್ ಮುಖ್ಯಸ್ಥ ಅಲ್ಲ. ನೈತಿಕ ಪೊಲೀಸ್ ವ್ಯವಸ್ಥೆಯನ್ನು ಯಾರು ರದ್ದುಮಾಡಿದರು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿಲ್ಲ. ಇರಾನ್ ಸರ್ಕಾರದ ಬೇರಾವುದೇ ಅಧಿಕಾರಿಯಿಂದ ಈ ವಿಷಯವನ್ನು ದೃಢಪಡಿಸಿಕೊಳ್ಳದೇ ಮಾಧ್ಯಮಗಳು ವರದಿ ಮಾಡಿವೆ. ಇರಾನ್ ಪತ್ರಕರ್ತೆ ನತಾಶಾ ಫತೇ ಸೇರಿದಂತೆ ಹಲವು ಪತ್ರಕರ್ತರು ಈ ವಿಚಾರವನ್ನು ಅಲ್ಲಗಳೆದು ಟ್ವೀಟ್ ಮಾಡಿದ್ದಾರೆ. ಇರಾನ್‌ನ ಸರ್ಕಾರಿ ಮಾಧ್ಯಮವೂ ಅಧಿಕಾರಿಯ ಹೇಳಿಕೆಯನ್ನು ಅಲ್ಲಗಳೆದಿದೆ. ಹೀಗಾಗಿ, ನೈತಿಕ ಪೊಲೀಸ್ ವ್ಯವಸ್ಥೆ ರದ್ದುಪಡಿಸಿದ ಸುದ್ದಿ ನಿಜವಲ್ಲ ಎಂದು ವೆಬ್‌ಸೈಟ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ



ಸರ್ವಮತಗಳಿಗೂ ಸಾರವಸ್ತು

ಮೂರಿರಲಿ ವಾದ, ಮುನ್ನೂರಿರಲಿ, ಸಕಲರುಂ |
ಸಾರವಸ್ತುವನೊಂದನೊಪ್ಪಿಕೊಳುವವರೇ ||
ಪಾರಮಾರ್ಥಿಕವನಂತೆಣಿಸಿದ ವ್ಯವಹಾರ |
ಭಾರವಾಗದು ಜಗಕೆ – ಮಂಕುತಿಮ್ಮ || 772 ||

ಪದ-ಅರ್ಥ: ಮೂರಿರಲಿ = ಮೂರು + ಇರಲಿ, ಸಾರವಸ್ತುವನೊಂದನೊಪ್ಪಿಕೊಳುವವರೇ = ಸಾರವಸ್ತುವ + ಒಂದನು + ಒಪ್ಪಿಕೊಳುವವರೇ, ಪಾರಮಾರ್ಥಿಕವನಂತೆಣಿಸಿದ = ಪಾರಮಾರ್ಥಿಕವನು + ಅಂತೆ + ಎಣಿಸಿದ.

ವಾಚ್ಯಾರ್ಥ: ವಾದಗಳು ಮೂರರಿಲಿ ಅಥವಾ ಮುನ್ನೂರೇ ಇರಲಿ, ಎಲ್ಲರೂ ಒಂದು ಅತ್ಯಂತ ಮಿಗಿಲಾದ, ಎಲ್ಲದಕ್ಕೂ ಕಾರಣವಾದ ಶಕ್ತಿಯೊಂದಿದೆ ಎಂದು ನಂಬುತ್ತಾರೆ. ಆ ಪರಮಶಕ್ತಿಯನ್ನು ನೆನೆದು ಮಾಡಿದ ಯಾವುದೇ ವ್ಯವಹಾರ ಜಗತ್ತಿಗೆ ಭಾರವಾಗುವುದಿಲ್ಲ.

ವಿವರಣೆ: ಪ್ರಪಂಚದಲ್ಲಿ ನೂರಾರು ಮತಗಳಿವೆ. ಮತ ಎಂದರೇನು? ಈ ಪದದ ಮೂಲ ಅರ್ಥ 'ತಿಳಿದದ್ದು', 'ಅಭಿಪ್ರಾಯ' ಅಥವಾ 'ನಂಬಿಕೆ'. ಆದರೆ ಬಳಕೆಯಲ್ಲಿ ಮತವೆಂದರೆ ಧಾರ್ಮಿಕ ಅಭಿಪ್ರಾಯ. ಹೀಗಾಗಿ ಹಿಂದೂ ಮತ, ಇಸ್ಲಾಂ ಮತ, ಕ್ರೈಸ್ತ ಮತ, ಬೌದ್ಧ ಮತ, ಜೈನ ಮತ ಎಂಬೆಲ್ಲ ಮತಗಳು ಬಳಕೆಯಾಗಿವೆ. ಅಷ್ಟೇ ಏಕೆ, ಹಿಂದೂ ಮತದಲ್ಲಿಯೇ, ಶೈವ ಮತ, ವೈಷ್ಣವ ಮತ ಎಂದೂ, ಅದ್ವೈತ ಮತ, ವಿಶಿಷ್ಟಾದ್ವೈತ ಮತ, ದ್ವೈತ ಮತ ಎಂಬ ಉಪಭಾಗಗಳಿವೆ. ವಿಶೇಷವೆಂದರೆ ಈ ಎಲ್ಲ ಮತಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳುವಳಿಕೆಗಳನ್ನು ಮಾಡಿಕೊಂಡಿರುವುದು 'ದೇವರು' ಎಂಬ ಚೈತನ್ಯದ ಮೇಲೆ. ಇದು ಇಂದಿನ ಮಾತಲ್ಲ. ಮನುಷ್ಯನೆಂಬ ಪ್ರಾಣಿ ಭೂಮಿಯ ಮೇಲೆ ಹುಟ್ಟಿ ಬಂದಾಗಿನಿಂದ, ತನಗಿಂತ ದೊಡ್ಡದಾದ, ಅಸಾಮಾನ್ಯ ಶಕ್ತಿಯನ್ನು ಹೊಂದಿದ, ಎಲ್ಲವನ್ನೂ ನಿಗ್ರಹಿಸುವ, ಪೋಷಿಸುವ ಶಕ್ತಿಯೊಂದಿದೆ ಎಂದು ನಂಬಿದ್ದಾನೆ. ಅದೇ ಅವರ ಮತ. ಅವು ದೊಡ್ಡ ದೊಡ್ಡ ಅವತಾರಗಳಾಗಿರಬಹುದು, ಅಥವಾ ಚಿಕ್ಕ ಪುಟ್ಟ ದೇವತೆಗಳಾಗಿರಬಹುದು. ಅವೇ ಅವನ ಶ್ರದ್ಧಾಕೇಂದ್ರಗಳಾಗಿವೆ. ಅದಕ್ಕಿಂತ ಮೊದಲು ಅವನಿಗೆ ಬೆಂಕಿ, ಆಕಾಶ, ಗಾಳಿ, ಭೂಮಿ, ನೀರು ಇವೇ ದೇವತೆಗಳಾಗಿದ್ದವು, ಇಂದೂ ಹಾಗೆಯೇ ಉಳಿದಿವೆ. ಈ ಎಲ್ಲ ವಸ್ತುಗಳಲ್ಲಿ ಮನುಷ್ಯ ದೈವಮಹಿಮೆಯನ್ನು ಎಂದರೆ ದೇವರು ಎಂಬ ಕಲ್ಪನೆಯನ್ನು ಮಾಡಿಕೊಂಡು ಪೂಜಿಸಿಕೊಂಡು ಬಂದಿದ್ದಾನೆ. ಅಂತೆಯೇ ಮಾನವ ನಾಗರಿಕತೆಯಲ್ಲಿ ಅತ್ಯಂತ ಪ್ರಭಾವವುಳ್ಳ ಸಂಗತಿ, ಮತ. ಹಾಗಾದರೆ ಪ್ರತಿಯೊಂದು ಮತವೂ ಒಂದು ಅನಂತವಾದ ಸಾರವಸ್ತುವಿದೆಯೆಂದು ನಂಬುತ್ತದೆ. ಆದರೆ ಅವರ ಕಲ್ಪನೆಗಳು ಬೇರೆಯಾಗಿದ್ದಿರಬಹುದು. ಹಾಗೊಂದು ಪರಮವಸ್ತುವಿದೆಯೆಂದು ನಂಬುವುದರಿಂದ ಆಗುವ ಲಾಭವೇನು? ಮೊದಲನೆಯದು ಆ ಶಕ್ತಿ ನಮ್ಮನ್ನು ಕಾಪಾಡುತ್ತದೆ ಎಂಬ ಧೈರ್ಯ. ಮನುಷ್ಯ ಸೋಲಿನಲ್ಲಿ ಮೊಣಕಾಲೂರಿ ಕುಳಿತಾಗ, ಆ ಪ್ರಚಂಡ ಶಕ್ತಿ ಇದೆ ಎಂಬ ನೆನಪೇ ಮುಂದೆ ಸಾಗುವ ಧೈರ್ಯವನ್ನು ಕೊಡುತ್ತದೆ. ಎರಡನೆಯದು, ಆ ಶಕ್ತಿ ನಮ್ಮನ್ನು ಸದಾಕಾಲ ಗಮನಿಸುತ್ತ ನಾವು ಮಾಡುವ ಒಳ್ಳೆಯ ಕಾರ್ಯಗಳಿಗೆ ಶುಭ ಫಲಗಳನ್ನು, ಕೆಟ್ಟ ಕೆಲಸಗಳಿಗೆ ತಕ್ಕ ಶಿಕ್ಷೆಯನ್ನು ಕೊಡುತ್ತದೆಂಬ ನಂಬಿಕೆ ನಮ್ಮನ್ನು ತಪ್ಪಿನ ದಾರಿಯಲ್ಲಿ ಹೋಗುವುದನ್ನು ತಪ್ಪಿಸುತ್ತದೆ. ಇದು ಬದುಕನ್ನು ಕೊಂಚ ಹಗುರಾಗಿಸುತ್ತದೆ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಡಿಸೆಂಬರ್ 7, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ಚತುರ್ದಶಿ ಗಂ. 08-02 ನಕ್ಷತ್ರ: ಕೃತ್ತಿಕಾ ಗಂ. 10-25 ಯೋಗ: ಸಿದ್ಧ ಗಂ. 26-54, ಕರಣ: ವಣಿಜ ಗಂ. 08-02, ವೃಶ್ಚಿಕ ಮಾಸದ 20 ನೇ ದಿನ. ರಾಹುಕಾಲ : ಮಧ್ಯಾಹ್ನ 12-00 –01-30 ಸೂರ್ಯೋದಯ : 06-45 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 12 ಜುಮಾದುಲ್ಲಾವಲ್
ದಿನ ವಿಶೇಷ : ದತ್ತಾತ್ರೇಯ ಜಯಂತಿ
ಅದೃಷ್ಟ ಸಂಖ್ಯೆ : 3, 7

ಮೇಷ: ಹೋಟೆಲ್ ಉದ್ಯಮದವರಿಗೆ ಅಥವಾ ಬೇಕರಿಯವರಿಗೆ ವ್ಯಾಪಾರದಲ್ಲಿ ಹಿನ್ನಡೆ ಉಂಟಾಗಬಹುದು. ಬಂಧುಗಳಿಂದ ಯಾವುದೇ ಸಹಾಯ ನಿರೀಕ್ಷಿಸಬೇಡಿ. ಋಣಬಾಧೆಯಿಂದ ಮುಕ್ತರಾಗಲು ಹೆಚ್ಚಿನ ಗಮನನೀಡಿ.

ವೃಷಭ: ನಿಮ್ಮ ಬುದ್ಧಿವಂತಿಕೆಯ ಕೊರತೆಯಿಂದ ಸಮಸ್ಯೆಯಲ್ಲಿ ಸಿಲುಕುವ ಸಂಭವವಿರುವುದು. ವ್ಯಾಪಾರ ವ್ಯವಹಾರವನ್ನು ನಡೆಸುವಾಗ ಹಣಕಾಸಿನ ವಿಚಾರದಲ್ಲಿ ಗಮನವಿರಲಿ. ದುಡುಕುತನದಿಂದ ಕಾರ್ಯ ಹಾನಿ ಸಂಭವವಿದೆ.

ಮಿಥುನ: ಆಡಿದ ಮಾತುಗಳು ಮುಳ್ಳಾಗುವ ದಿನ. ದಾಖಲೆಯ ಪತ್ರಗಳನ್ನು ಬರೆಸುವ ಸಂದರ್ಭವಿದ್ದಲ್ಲಿ, ಸಂಖ್ಯೆಗಳಲ್ಲಿ ಅಥವಾ ವಾಕ್ಯಗಳಲ್ಲಿ ಹೆಚ್ಚಿನ ಗಮನವಹಿಸಿ ಮತ್ತು ಪರಿಣಿತರ ಅನುಭವವನ್ನು ಕೇಳಿ ಮುನ್ನುಗ್ಗಿ.

ಕರ್ಕಾಟಕ: ಜವಳಿ ವ್ಯಾಪಾರಿಗಳಿಗೆ ಅಧಿಕ ವ್ಯಾಪಾರವಿರುವುದು. ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಯಿಂದಾಗಿ ಈ ದಿನ ನಿರುತ್ಸಾಹಿಯಾಗಿರುತ್ತೀರಿ. ಸಂಜೆಯ ಸಮಯದಲ್ಲಿ ಬೆಲೆ ಬಾಳುವ ವಸ್ತು ಕಾಣೆಯಾಗುವ ಸಂಭವವಿದೆ. ಜಾಗ್ರತೆವಹಿಸಿ.

ಸಿಂಹ: ಸಂಶೋಧನಾ ವೃತ್ತಿಯಲ್ಲಿರುವವರಿಗೆ ಈ ದಿನ ಅಧ್ಯಯನಕ್ಕೆ ಸುಸಮಯ ಅಥವಾ ಅನುಭವ ಸಿಗಲಿದೆ. ದೇಹದಲ್ಲಿ ಪಿತ್ತದ ಅಂಶ ಅಧಿಕವಾಗುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕ.

ಕನ್ಯಾ: ಹಣಕಾಸಿನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸೂಕ್ತ ಕಾಲ. ಷೇರು ವ್ಯವಹಾರಗಳು ಇಂದು ಕೂಡಿ ಬರುವುವು. ನಿಮ್ಮ ಪರೋಪಕಾರದಂತಹ ಒಳ್ಳೆಯ ನಿರ್ಧಾರಗಳಿಂದ ಸಹೋದ್ಯೋಗಿಗಳಿಗೆ ಸಂತಸವಾಗುವುದು.

ತುಲಾ: ಕೆಲಸಗಳ ಬಗ್ಗೆ ಅಧಿಕಾರಿ ವರ್ಗದವರಲ್ಲಿ ಯಾವುದೇ ಚರ್ಚೆಗಳು, ವಾದ ವಿವಾದಗಳು ನಡೆದರೂ, ನಿಮ್ಮ ಕಾರ್ಯ ಸಾಧನೆಗೆ ಅಡ್ಡಿಯಾಗದು. ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕಂಡು ಬರಲಿವೆ.\

ವೃಶ್ಚಿಕ: ಅಪರೂಪದ ಮತ್ತು ಸಂತೋಷಮಯವಾದ ಔತಣ ಕೂಟವೊಂದರಲ್ಲಿ ಭಾಗವಹಿಸುವ ಸಲುವಾಗಿ ಆಮಂತ್ರಣ ಬರಲಿದೆ. ನೂತನ ವಸ್ತ್ರ ಖರೀದಿಯ ಯೋಗ. ಮಿತ್ರರೊಂದಿಗೆ ಮಾತು ಕತೆಗಳಲ್ಲಿ ಕಾಲ ಕಳೆಯುವಿರಿ.

ಧನು: ಕೋರ್ಟ್ ವ್ಯವಹಾರದಲ್ಲಿ ದೇವರ ಕೃಪೆಯಿಂದ ನಿರೀಕ್ಷೆಗೂ ಮೀರಿದ ಜಯ ಸಿಗುವುದು. ಸಂಸ್ಥೆಯೊಂದರ ಸಲಹೆಗಾರರಾಗಿ ನೇಮಕಗೊಂಡಿರುವ ಈ ದಿನ ಸಂಸ್ಥೆಗೆ ನಷ್ಟ ಸಂಭವಿಸುವತಾಗಬಹುದು ಜಾಗ್ರತರಾಗಿರಿ.

ಮಕರ: ಜೀವನೋಪಾಯಕ್ಕೆ ಹಲವು ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ವಾಹನಚಾಲನಾ ವೃತ್ತಿಯವರಿಗೆ ಶುಭವಿದೆ. ರಾಸಾಯನಿಕ ವಸ್ತುಗಳಲ್ಲಿ ಕೆಲಸ ಮಾಡುವವರು ಜಾಗ್ರತರಾಗಿರಿ.


ಕುಂಭ: ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ. ವಾಣಿಜ್ಯ ಸಂಸ್ಥೆಯೊಂದರಲ್ಲಿಕೆಲಸ ಕೊಡಿಸಲು ಅಣ್ಣನ ಸಹಾಯ ಕೇಳಿದರೆ ಶುಭವಾಗುತ್ತದೆ. ಮನೆ ದೇವರಿಗೆ ಹರಕೆ ಸಲ್ಲಿಸುವ ಬಗ್ಗೆ ಯೋಚಿಸಿ.

ಮೀನ: ಸಂಬಂಧವಿಲ್ಲದ ವಿಚಾರಗಳಿಂದ, ವಿವಾದಗಳಿಂದ ದೂರ ಉಳಿಯುವುದು ಶೋಭೆ ತರಲಿದೆ. ದೇಹ ಪ್ರಕೃತಿಗೆ ಅನುಗುಣವಾಗಿ ವೈದ್ಯರು ನೀಡಿರುವ ಸಲಹೆಯನ್ನು ಚಾಚೂ ತಪ್ಪದೆ ಆಚರಿಸಿ.

ಪದಬಂಧ 5161
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಶ್ರುತಿಗೆ ಹೊಂದದ ಸ್ವರ (4)
3.ಅರವತ್ತು ವರ್ಷದ ಹುಟ್ಟುಹಬ್ಬ (4)
5.ಮಾನವಂತನಿಗೆ ತೋರಿದ ಮನ್ನಣೆ (3)
6.ಜಗಳಕ್ಕೊಂದು ಪರ್ಯಾಯ ಪದ (3)
8.ಲಾಂಗೂಲ ಹಿಡಿದಿರುವ ಹುಡುಗ (3)
9.ಪ್ರಶ್ನೆಗೆ ಪೂರಕವಾಗಿ ಹೇಳುವ ಮಾತು (3)
10.ತಿರುಗಿಸಿದರೂ ಇದು ಚಿನ್ನ (3)
12.ಬಿದಿಗೆಯಂದು ಖರೀದಿಸಿದ ಕೊಡ (3)
14.ಈತ ಲೆಕ್ಕ ಬರೆಯುವವನು (4)
15.ಶಕ್ತಿಯನ್ನು ಕಳೆದುಕೊಂಡವನು (4)

ಮೇಲಿಂದ ಕೆಳಕ್ಕೆ
1.ಕಾಗೆ ಬಂಗಾರವಿದು (3)
2.ಸರಸದಲ್ಲೂ ವಿರಸದಲ್ಲೂ ಕಾಣುತ್ತಿರುವ ದ್ರವ (2)
3.ವರಮಾನವುಳ್ಳ ಅರಣ್ಯ (2)
4.ಹುತ್ತ ಇಲ್ಲಿದೆ (3)
7.ಅತಿಯಾಗಿ ಮಾತಾಡುವವನು (5)
8.ಕಡುಬನ್ನು ಹಿಡಿದಿರುವ ಅನುಯಾಯಿ! (5)
9.ಉದಯ ಕಾಲದಲ್ಲಿ ಶೇಖರಿಸಿರುವ ನೀರು (3)
11.ಹೆಪ್ಪುಗಟ್ಟಿದ ವಸ್ತು (3)
12.ಕಂಬಿ ಹಿಂದೆ ತೋರಿದ ಬಿನ್ನಾಣ (2)
13.ತಿರುಗಿದಾಗ ದ್ವೇಷ ಕಾಣಿಸುತ್ತಿದೆಯಲ್ಲಾ! (2)



5160ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಪಾಲಕ 4.ಸರ್ವಜ್ಞ 5.ವರಾತ 6.ವೀಕ್ಷಣೆ 7.ತಕಲಿ 9.ಹತ್ತಿ 10.ಆಟ 12.ಸಲುಗೆ 14.ಮನುಜ 15.ಉಬ್ಧಕ 16.ಸುಳಿವು 17.ರಸಕವಳ.

ಮೇಲಿಂದ ಕೆಳಕ್ಕೆ:
1.ಅನಿರುದ್ಧ 2.ಪಾಶವೀವೃತ್ತಿ 3.ಕವಣೆ 4.ಸತತ 8.ಕವಾಟ 9.ಹಗಲು 10.ಆಮ್ಲಜನಕ 11.ಅಂತರಾಳ 13.ಗೆಲುವು 14.ಮಕರ

ಸುಡೊಕು 5547


	8			5		9		
1			6		4			3
6	5			7			2	4
5		8	9					
	1					7	5	2
4		7					8	
2		5		9			3	
	6		3		5	2		7
3	7	9		6			4	5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5546 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಷೇರುಪೇಟೆ ವಹಿವಾಟು ▼ 208



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18701
ಇಂದಿನ ಅಂತ್ಯ	18642
▼	58
ದಿನದ ಗರಿಷ್ಠ	18654

ವಿನಿಮಯ ದರ

$ ಡಾಲರ್	82.50
£ ಪೌಂಡ್	100.6
€ ಯುರೊ	86.7
¥ ಯೆನ್ (100ಕ್ಕೆ)	60.39

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515(1515)
ಸೋಯಾ (ರಿಫೈನ್ಡ್)	₹1237(1240)
ಸೂರ್ಯಕಾಂತಿ (ರಿಫೈನ್ಡ್)	₹1385(1400)
ಪಾಮೋಲಿನ್	₹945(940)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹301-677
ದ್ವಿತಳಿ (ಬಿ.ವಿ)	₹346-851

ಕೊಬ್ಬರಿ ಧಾರಣೆ

ಅರಸೀಕೆರೆ	₹11475-11560
ತುಮಕೂರು (ಮಿಲ್ಲಿಂಗ್)	₹4800-6200

ಪ್ರಸಕ್ತ ಆರ್ಥಿಕ ವರ್ಷಕ್ಕೆ ಭಾರತದ ಜಿಡಿಪಿ ಬೆಳವಣಿಗೆ ದರ

ಅಂದಾಜು ಹೆಚ್ಚಿಸಿದ ವಿಶ್ವ ಬ್ಯಾಂಕ್



ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರದ ಅಂದಾಜನ್ನು ವಿಶ್ವಬ್ಯಾಂಕ್ ಶೇಕಡ 6.9ಕ್ಕೆ ಹೆಚ್ಚಿಸಿದೆ. ಜಾಗತಿಕ ಆಘಾತಗಳಿಗೆ ಗುರಿಯಾದರೂ ಭಾರತದ ಅರ್ಥ ವ್ಯವಸ್ಥೆಯು ಹೆಚ್ಚು ಉತ್ತಮವಾಗಿ ಚೇತರಿಕೆ ಕಾಣುತ್ತಿದೆ ಎಂದು ಅದು ಹೇಳಿದೆ.

ಎರಡನೆಯ ತ್ರೈಮಾಸಿಕದ ಬೆಳವಣಿಗೆ ಅಂಕಿ-ಅಂಶಗಳು ನಿರೀಕ್ಷೆಗಿಂತಲೂ ಉತ್ತಮವಾಗಿರುವ ಕಾರಣ ಬೆಳವಣಿಗೆ ಅಂದಾಜನ್ನು ಹೆಚ್ಚಿಸಲಾಗಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಭಾರತದ ಜಿಡಿಪಿ ಶೇ 6.3ರಷ್ಟು ಬೆಳವಣಿಗೆ ಸಾಧಿಸಿದೆ. ಅಕ್ಟೋಬರ್ ತಿಂಗಳಲ್ಲಿ ವಿಶ್ವಬ್ಯಾಂಕ್ ಭಾರತದ ಬೆಳವಣಿಗೆ ಅಂದಾಜು ದರವನ್ನು ಶೇ 6.5ಕ್ಕೆ ತಗ್ಗಿಸಿತ್ತು.

ಜಾಗತಿಕ ಆರ್ಥಿಕ ಪರಿಸ್ಥಿತಿಯು ದೇಶದ ಬೆಳವಣಿಗೆಯ ಮೇಲೆ ಪರಿಣಾಮ ಬೀರಲಿದೆಯಾದರೂ, ಪ್ರವರ್ಧಮಾನಕ್ಕೆ ಬರುತ್ತಿರುವ ಇತರ ದೇಶಗಳಿಗೆ ಹೋಲಿಸಿದರೆ ಭಾರತದ ಅರ್ಥ ವ್ಯವಸ್ಥೆಯು ಜಾಗತಿಕ ಪರಿಣಾಮಗಳನ್ನು ನಿಭಾಯಿಸಲು ಹೆಚ್ಚು ಉತ್ತಮ ಸ್ಥಿತಿಯಲ್ಲಿದೆ ಎಂದು ವರದಿ ಹೇಳಿದೆ.

ಜಾಗತಿಕ ಮಟ್ಟದಲ್ಲಿ ಜಾರಿಯಲ್ಲಿರುವ ಬಿಗಿ ಆರ್ಥಿಕ ನೀತಿಗಳು, ವಿಶ್ವದ ಆರ್ಥಿಕ ಬೆಳವಣಿಗೆ ನಿಧಾನವಾಗುತ್ತಿರುವುದು ಹಾಗೂ ಸರಕುಗಳ ಬೆಲೆ ದುಬಾರಿ ಆಗಿರುವ ಕಾರಣ ಭಾರತದ ಬೆಳವಣಿಗೆಯು 2021–22ಕ್ಕಿಂತ ಕಡಿಮೆ ಇರಲಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಅಮೆರಿಕದ ಅರ್ಥ ವ್ಯವಸ್ಥೆಯ ಬೆಳವಣಿಗೆಯು ಶೇ 1ರಷ್ಟು ಕುಸಿದರೆ, ಭಾರತದ ಅರ್ಥ ವ್ಯವಸ್ಥೆಯ ಬೆಳವಣಿಗೆಯು ಶೇ 0.4ರಷ್ಟು ಕುಸಿತ ಕಾಣುತ್ತದೆ.

ಕೇಂದ್ರ ಸರ್ಕಾರವು ಈ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯು ಬಜೆಟ್ ಅಂದಾಜಿಗಿಂತ ಹೆಚ್ಚಾಗಲು ಅವಕಾಶ ಕೊಡುವುದಿಲ್ಲ ಎಂಬ ಭರವಸೆಯನ್ನು ವರದಿ ವ್ಯಕ್ತಪಡಿಸಿದೆ. ವಿತ್ತೀಯ ಕೊರತೆಯು ಒಟ್ಟು ಜಿಡಿಪಿಯ ಶೇ 6.4ರಷ್ಟು ಆಗಲಿದೆ ಎಂದು ಕೇಂದ್ರ ಅಂದಾಜು ಮಾಡಿದೆ.

ವರದಿಯಲ್ಲಿ ಹೇಳಿರುವ ಮಾತುಗಳು

- ವಿವೇಕಯುತ ನಿಯಂತ್ರಣ ಕ್ರಮಗಳು ಅರ್ಥ ವ್ಯವಸ್ಥೆ ಚೇತರಿಕೆ ಕಾಣಲು ನೆರವಾಗಿವೆ
- ಸಾಲ ಪಡೆಯಲು ಮಾರುಕಟ್ಟೆಯನ್ನು ಹೆಚ್ಚು ನೆಚ್ಚಿಕೊಳ್ಳುತ್ತಿರುವುದು ಪಾರದರ್ಶಕತೆಯನ್ನು, ಆರ್ಥಿಕ ನೀತಿಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿದೆ
- ಸರ್ಕಾರದ ಸಾಲಪತ್ರಗಳಲ್ಲಿ ಹೂಡಿಕೆ ಮಾಡುವವರ ಪ್ರಮಾಣವನ್ನು ಸರ್ಕಾರವು ಹೆಚ್ಚು ಮಾಡಿದೆ
- ಹಣದುಬ್ಬರ ನಿಯಂತ್ರಿಸಲು ನಿರ್ದಿಷ್ಟ ಚೌಕಟ್ಟು ರೂಪಿಸಿರುವ ಕಾರಣ ಹಣಕಾಸು ನೀತಿಯ ತೀರ್ಮಾನಗಳಿಗೆ ಹೆಚ್ಚು ವಿಶ್ವಾಸಾರ್ಹತೆ ಸಿಕ್ಕಿದೆ
- ದಿವಾಳಿ ಸಂಹಿತೆ ರೂಪಿಸಿರುವುದು, ರಾಷ್ಟ್ರೀಯ ಪುನರ್‌ರಚನೆ ಕಂಪನಿ ಸ್ಥಾಪಿಸಿರುವುದು ಹಣಕಾಸು ವಲಯದಲ್ಲಿ ಸುಧಾರಣೆ ಕಾಣಲು ನೆರವಾಗಿದೆ

ನೋಟು ರದ್ದತಿ ಪ್ರಕ್ರಿಯೆ ಪರಿಶೀಲನೆ: 'ಸುಪ್ರೀಂ'

ನವದೆಹಲಿ (ಪಿಟಿಐ): ಆರ್ಥಿಕ ನೀತಿಗಳಿಗೆ ಸಂಬಂಧಿಸಿದ ವಿಚಾರಗಳ ಪರಾಮರ್ಶೆಯಲ್ಲಿ ನ್ಯಾಯಾಂಗದ ವ್ಯಾಪ್ತಿ ಸೀಮಿತವಾಗಿದ್ದರೂ, ನ್ಯಾಯಾಲಯವು ಕೈಕಟ್ಟಿ ಕೂರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅಲ್ಲದೆ, ಸರ್ಕಾರವು ತೀರ್ಮಾನವೊಂದನ್ನು ಯಾವ ಬಗೆಯಲ್ಲಿ ಕೈಗೊಂಡಿತ್ತು ಎಂಬುದನ್ನು ಯಾವುದೇ ಸಂದರ್ಭದಲ್ಲಿ ತಾನು ಪರಿಶೀಲಿಸಬಹುದು ಎಂದು ಹೇಳಿದೆ.

ಕೇಂದ್ರ ಸರ್ಕಾರವು 2016ರಲ್ಲಿ ಕೈಗೊಂಡ ನೋಟು ರದ್ದತಿ ತೀರ್ಮಾನ ಪ್ರಶ್ನಿಸಿ ಸಲ್ಲಿಕೆಯಾಗಿರುವ 58 ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಎ. ನಜೀರ್ ಅವರ ನೇತೃತ್ವದ ಪೀಠವು ನಡೆಸುತ್ತಿದೆ.

'ನೋಟು ರದ್ದತಿ ತೀರ್ಮಾನವು ಒಳ್ಳೆಯದೋ, ಕೆಟ್ಟದ್ದೋ ಎಂಬುದನ್ನು ಸರ್ಕಾರವೇ ತೀರ್ಮಾನಿಸಲಿ. ಆದರೆ ತೀರ್ಮಾನ ಕೈಗೊಳ್ಳುವಾಗ ಎಲ್ಲ ಪ್ರಕ್ರಿಯೆಗಳನ್ನು ಅನುಸರಿಸಲಾಗಿತ್ತೇ ಎಂಬುದನ್ನು ನಾವು ಪರಿಶೀಲಿಸಬಹುದು' ಎಂದು ನ್ಯಾಯಪೀಠ ಹೇಳಿದೆ.

ನೋಟು ರದ್ದತಿ ಶಿಫಾರಸು ಮಾಡಿದ ಆರ್‌ಬಿಐ ಕೇಂದ್ರ ಮಂಡಳಿಯ ಸಭೆಯ ಕೋರಂ ವಿವರ ನೀಡುವಂತೆ ಕೋರ್ಟ್ ಸೂಚಿಸಿದೆ. 2016ರ ನವೆಂಬರ್ 8ರಂದು ನಡೆದ ಆರ್‌ಬಿಐ ನಿರ್ದೇಶಕರ ಸಭೆಯ ವಿವರಗಳನ್ನು ಬಹಿರಂಗಪಡಿಸಬೇಕು ಎಂದು ಅರ್ಜಿದಾರರ ಪರವಾಗಿ ಹಾಜರಾದ ಹಿರಿಯ ವಕೀಲ ಪಿ. ಚಿದಂಬರಂ ಅವರು ಮನವಿ ಮಾಡಿದರು.


ಸೀಟ್ ಬೆಲ್ಟ್ ಲೋಪ ಸರಿಪಡಿಸಲಿರುವ ಮಾರುತಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಕಂಪನಿಯು ಸಿಯಾಜ್, ಬ್ರೆಜಾ, ಎರ್ಟಿಗಾ, ಎಕ್ಸ್‌ಎಲ್6 ಮತ್ತು ಗ್ರ್ಯಾಂಡ್ ವಿಟಾರಾ ಮಾದರಿಯ ಒಟ್ಟು 9,125 ವಾಹನಗಳನ್ನು ಹಿಂದಕ್ಕೆ ಕರೆಸಿಕೊಂಡು, ಅವುಗಳ ಮುಂದಿನ ಸಾಲಿನ ಆಸನಗಳ ಸೀಟ್ ಬೆಲ್ಟ್‌ನಲ್ಲಿ ಇರಬಹುದಾದ ದೋಷವನ್ನು ಸರಿಪಡಿಸಿ ಕೊಡಲಿದೆ.

ನವೆಂಬರ್ 2ರಿಂದ 28ರ ನಡುವೆ ತಯಾರಾದ ಈ ಮಾದರಿಯ ವಾಹನಗಳನ್ನು ಹಿಂದಕ್ಕೆ ಕರೆಸಿಕೊಳ್ಳಲಾಗುತ್ತಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಈ ಅವಧಿಯಲ್ಲಿ ತಯಾರಾದ ವಾಹನಗಳಲ್ಲಿ ಲೋಪ ಇದೆಯೇ ಎಂಬುದನ್ನು ಪರಿಶೀಲಿಸಿ, ಅದನ್ನು ಉಚಿತವಾಗಿ ಸರಿಪಡಿಸಿ ಕೊಡಲಾಗುವುದು ಎಂದು ಕಂಪನಿ ಹೇಳಿದೆ. ವಾಹನ ಮಾಲೀಕರಿಗೆ ಕಂಪನಿಯ ಅಧಿಕೃತ ಕಾರ್ಯಾಗಾರಗಳಿಂದ ಸಂದೇಶ ರವಾನೆಯಾಗಲಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಿನಯ್ ಕೆ., ಸಾಗರ

- ಪ್ರಶ್ನೆ: ಖಾಸಗಿ ಬ್ಯಾಂಕ್ ಖಾತೆಯೊಂದರಲ್ಲಿ ನಾನು ತುಸು ಹಣ ಇರಿಸಿದ್ದೆ. ಆದರೆ ಅದು ಕನಿಷ್ಠ ಮೊತ್ತಕ್ಕಿಂತ ಕಡಿಮೆ ಆಗಿದ್ದರಿಂದ ಬ್ಯಾಂಕಿನವರು ನನ್ನ ಖಾತೆಯಿಂದ ಹಣ ಕಡಿತ ಮಾಡುತ್ತ ಸಾಗಿದರು. ಈಗ ಖಾತೆಯಲ್ಲಿ ಹಣ ಶೂನ್ಯಕ್ಕಿಂತ ಕಡಿಮೆ ಆಗಿದೆ, ಮೈನಸ್ ಎಂಟುನೂರು ಆಗಿದೆ. ನನಗೆ ಆ ಖಾತೆ ಬೇಡವಾಗಿದೆ. ಖಾತೆಯನ್ನು ಸ್ಥಗಿತ ಮಾಡಬೇಕು ಎಂದಾದರೆ ಎಂಟುನೂರು ರೂಪಾಯಿ ಕಟ್ಟಿ ಸ್ಥಗಿತ ಮಾಡಬೇಕು ಎಂದು ಅಲ್ಲಿನ ಸಿಬ್ಬಂದಿ ಹೇಳುತ್ತಿದ್ದಾರೆ. ಬೇಡವಾದ ಖಾತೆ ಮುಚ್ಚಲು ಅಷ್ಟೊಂದು ಕಟ್ಟಬೇಕೇ? ಆ ಖಾತೆಯನ್ನು ಹಾಗೆಯೇ ಬಿಟ್ಟರೆ ಏನಾಗುತ್ತದೆ?

ಉತ್ತರ: ಸಾಮಾನ್ಯವಾಗಿ ಯಾವುದೇ ಬ್ಯಾಂಕ್, ಕನಿಷ್ಠ ಬ್ಯಾಲೆನ್ಸ್ ನಿರ್ವಹಿಸದಿದ್ದರೆ ವಿಧಿಸಬಹುದಾದ ಶುಲ್ಕಗಳನ್ನು ಪಾರದರ್ಶಕ ರೀತಿಯಲ್ಲಿ ತಮ್ಮ ಗ್ರಾಹಕರಿಗೆ ಖಾತೆ ತೆರೆಯುವ ಸಮಯದಲ್ಲಿ ತಿಳಿಸುತ್ತದೆ. ಅದೇ ರೀತಿ, ಖಾತೆ ತೆರೆದ ನಂತರದಲ್ಲಿ, ವಿಧಿಸಲಾಗುವ ಯಾವುದೇ ಹೊಸ ಶುಲ್ಕವನ್ನು ಪಾರದರ್ಶಕವಾಗಿ ಒಂದು ತಿಂಗಳು ಮುಂಚಿತವಾಗಿ ತಿಳಿಸಬೇಕು. ಕನಿಷ್ಠ ಬ್ಯಾಲೆನ್ಸ್ ಮೊತ್ತದಲ್ಲಿ ಬದಲಾವಣೆ ಮಾಡುವುದಿದ್ದರೆ ಮತ್ತು ಕನಿಷ್ಠ ಬ್ಯಾಲೆನ್ಸ್ ಉಳಿಸಿಕೊಳ್ಳದಿದ್ದರೆ ವಿಧಿಸಬಹುದಾದ ಶುಲ್ಕಗಳನ್ನು ಬ್ಯಾಂಕ್‌ಗಳು ಕನಿಷ್ಠ ಒಂದು ತಿಂಗಳು ಮುಂಚಿತವಾಗಿ ಖಾತೆದಾರರಿಗೆ ತಿಳಿಸಬೇಕು. 2014ರ ಮೇ 6ರಿಂದ ಜಾರಿಗೆ ಬಂದಿರುವ ನಿಯಮದ ಪ್ರಕಾರ ಯಾವುದೇ ನಿಷ್ಕ್ರಿಯ ಖಾತೆಯಲ್ಲಿ ಕನಿಷ್ಠ ಬ್ಯಾಲೆನ್ಸ್ ನಿರ್ವಹಿಸದಿದ್ದರೆ ಮೇಲೆ ಉಲ್ಲೇಖಿಸಿರುವ ದಂಡ ಶುಲ್ಕವನ್ನು ವಿಧಿಸಲು ಬ್ಯಾಂಕ್‌ಗಳಿಗೆ ಅನುಮತಿ ಇಲ್ಲ. ಇದಕ್ಕೆ ಸಂಬಂಧಿತ ಎಲ್ಲ ವಿವರಗಳು ಗ್ರಾಹಕ ಸೇವಾ ಸಂಬಂಧಿತ ಆರ್‌ಬಿಐ ಸುತ್ತೋಲೆಗಳಲ್ಲಿ ಇವೆ.

ಇನ್ನು ನಿಮ್ಮ ವಿಚಾರದಲ್ಲಿ, ನಿಮ್ಮ ಖಾತೆ ನಿಷ್ಕ್ರಿಯಗೊಂಡಿರದಿದ್ದಲ್ಲಿ, ನೀವು ಕನಿಷ್ಠ ಬ್ಯಾಲೆನ್ಸ್ ನಿರ್ವಹಿಸದಿದ್ದ ಕಾರಣಕ್ಕೆ ಶುಲ್ಕ ಭರಿಸಬೇಕಾಗಬಹುದು. ಆದರೆ, ಇಂದು ಹೆಚ್ಚಿನ ಬ್ಯಾಂಕ್‌ಗಳು ಗ್ರಾಹಕ ಕೇಂದ್ರಿತ ಸೇವೆಯನ್ನು ಕೊಡುವ ಕಾರಣ ಹಾಗೂ ಗ್ರಾಹಕರನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಪ್ರಯತ್ನಿಸುವ ಕಾರಣ, ನೀವು ಬ್ಯಾಂಕ್ ಅಧಿಕಾರಿಗಳಿಗೆ ಶುಲ್ಕ ಮನ್ನಾ ಮಾಡಬೇಕೆಂದು ಕೋರಿಕೆ ಪತ್ರವನ್ನು ಲಿಖಿತ ರೂಪದಲ್ಲಿ ಸಲ್ಲಿಸಬಹುದು. ಹೆಚ್ಚಿನ ಸಂದರ್ಭದಲ್ಲಿ ಗ್ರಾಹಕರ ಕೋರಿಕೆಯನ್ನು ಮಾನ್ಯ ಮಾಡಲಾಗುತ್ತದೆ. ಈ ಹಂತಕ್ಕೂ ಮುನ್ನ, ನೀವು ನಿಮ್ಮ ಖಾತೆಗೆ ಒಂದಿಷ್ಟು ಹಣ ಜಮಾ ಮಾಡಬೇಕೆನ್ನುವ ಬೇಡಿಕೆಯನ್ನು ಬ್ಯಾಂಕ್ ಮುಂದಿಡಬಹುದು. ನಿಮ್ಮ ಸಮಸ್ಯೆ ಬಗೆಹರಿಸಿಕೊಂಡ ನಂತರ ಖಾತೆಯನ್ನು ಕ್ರಮೇಣ ಮುಚ್ಚಬಹುದು. ನಿಮಗೆ ವ್ಯವಹಾರಕ್ಕೆ ಆ ಖಾತೆ ಅನಗತ್ಯವೆಂದಾದರೆ ನೀವು ಹಾಗೆಯೇ ಅದನ್ನು ಬಿಟ್ಟುಬಿಡಬಹುದು, ಆದರೆ ಎರಡು ವರ್ಷಗಳ ನಂತರ ಖಾತೆ ನಿಷ್ಕ್ರಿಯಗೊಳ್ಳುತ್ತದೆ. ಮುಂದೆ ಖಾತೆಯಲ್ಲಿ ವ್ಯವಹರಿಸಲು ಕೆವೈಸಿ ಇತ್ಯಾದಿ ಪ್ರಕ್ರಿಯೆ ಪೂರೈಸಬೇಕಾಗುತ್ತದೆ. ಹೀಗಾಗಿ ಮೇಲಿನ ಮಾಹಿತಿ ತಿಳಿದುಕೊಂಡು, ಖುದ್ದಾಗಿ ಬ್ಯಾಂಕ್ ಶಾಖೆಗೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಿಕೊಳ್ಳಿ.

ಸರಸ್ವತಿ ಎಲ್, ತುಮಕೂರು

- ಪ್ರಶ್ನೆ: ಬ್ಯಾಂಕ್‌ಗಳು ದಿವಾಳಿ ಆದ ಸಂದರ್ಭದಲ್ಲಿ ಅಲ್ಲಿ ಠೇವಣಿ ಇರಿಸಿದ ಹಣಕ್ಕೆ ವಿಮೆ ರಕ್ಷಣೆ ಇರುತ್ತದೆ ಎಂದು ಕೇಳಿದ್ದೇನೆ. ಆದರೆ ಈ ರಕ್ಷಣೆಯು ಸಹಕಾರ ಸಂಘಗಳಲ್ಲಿ ಇರಿಸಿದ ಹಣಕ್ಕೂ ಅನ್ವಯವಾಗುವುದೇ? ಇಲ್ಲವಾದರೆ, ಸಹಕಾರ ಸಂಘಗಳಲ್ಲಿ ಠೇವಣಿ ಇರಿಸಿದ ಹಣಕ್ಕೆ ಯಾವ ಖಾತರಿ?

ಉತ್ತರ: ಠೇವಣಿ ಇರಿಸಿದ ಹಣಕ್ಕೆ ಹೂಡಿಕೆದಾರರಿಗೆ ಭದ್ರತೆ ಬೇಕೇಬೇಕು. ಒಂದು ವೇಳೆ, ಹಣ ಇರಿಸಿದ ಸಂಸ್ಥೆಗೆ ಆರ್ಥಿಕ ಬಿಕ್ಕಟ್ಟು ಉಂಟಾದರೆ, ಹೂಡಿಕೆದಾರರ ಹಣ ಅವರ ಅಗತ್ಯಕ್ಕೆ ತಕ್ಕಂತೆ ಮರಳಿಸಲಾಗದ ದುಃಸ್ಥಿತಿ ಉಂಟಾದರೆ, ಅಂತಹ ಹೂಡಿಕೆಗಳು ಷೇರು ಮಾರುಕಟ್ಟೆಗಿಂತ ಅಪಾಯಕಾರಿ. ಅಂತಹ ಆತಂಕಕಾರಿ ಬೆಳವಣಿಗೆಗೆ ಕಾರಣವಾಗುವ ಸಂದರ್ಭಗಳು ಎಲ್ಲ ಗ್ರಾಹಕರಿಗೂ ತಿಳಿದಿರಬೇಕು. ಉದಾಹರಣೆಗೆ, ಯಾವುದೇ ಸಂಸ್ಥೆಗಳ ಅಧಿಕಾರಿಗಳು ತಮ್ಮ ಅಧಿಕಾರ ದುರ್ಬಳಕೆ ಮಾಡಿ ಹಣ ವಂಚನೆ ಮಾಡಿದಾಗ, ಗ್ರಾಹಕರ ವಿಶ್ವಾಸ ಗಣನೀಯವಾಗಿ ಕಳೆದುಕೊಂಡಾಗ, ನಷ್ಟದ ವ್ಯವಹಾರದಲ್ಲಿ ತೊಡಗಿದಾಗ, ಆಡಳಿತವನ್ನು ಅಸಮರ್ಥವಾಗಿ ನಿರ್ವಹಿಸಿದಾಗ... ಹೀಗೆ ಅನೇಕ ಪರಿಸ್ಥಿತಿಗಳಲ್ಲಿ ಹೂಡಿಕೆ ಮಾಡಿದ ಹಣವನ್ನು ಸರಿಯಾದ ಸಮಯಕ್ಕೆ ಹಿಂದಿರುಗಿಸಲಾಗದ ಪರಿಸ್ಥಿತಿ ನಿರ್ಮಾಣವಾಗಬಹುದು. ಗ್ರಾಹಕರು ಆತಂಕಕ್ಕೆ ಗುರಿಯಾಗಿ ತಮ್ಮ ಹೂಡಿಕೆಗಳನ್ನು ಒಮ್ಮಲೇ ಹಿಂಪಡೆಯುವ ಸ್ಥಿತಿ ಉಂಟಾಗಬಹುದು.

ಬ್ಯಾಂಕ್ ಆರ್ಥಿಕ ಸಂಕಷ್ಟಕ್ಕೀಡಾದಾಗ ಹಾಗೂ ಠೇವಣಿದಾರರ ಹಣ ಮರಳಿಸಲು ವಿಫಲವಾದಾಗ 'ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್' (ಡಿಐಸಿಜಿಸಿ) ಬ್ಯಾಂಕ್ ಗ್ರಾಹಕರಿಗೆ ₹ 5 ಲಕ್ಷದವರೆಗಿನ ಠೇವಣಿ ನಷ್ಟಕ್ಕೆ ವಿಮಾ ಭರ್ತಿಯ ನೆರವು ನೀಡುತ್ತದೆ. ಆದರೆ ಈ ವ್ಯವಸ್ಥೆ ಬ್ಯಾಂಕ್‌ಗಳಲ್ಲದ ಸಹಕಾರ ಕ್ಷೇತ್ರದ ಸೊಸೈಟಿಗಳಿಗಿಲ್ಲ. ಸಹಕಾರಿ ಕ್ರೆಡಿಟ್ ಸೊಸೈಟಿಗಳಲ್ಲಿ ಹೂಡಿಕೆ ಮಾಡಲಾದ ಠೇವಣಿಗಳು ಇಂತಹ ವಿಮಾ ರಕ್ಷಣೆಗೆ ಅರ್ಹವಲ್ಲ. ಭಾರತದಲ್ಲಿ ಕಾರ್ಯನಿರ್ವಹಿಸುವ ವಿದೇಶಿ ಬ್ಯಾಂಕ್‌ಗಳ ಶಾಖೆಗಳು, ಸ್ಥಳೀಯ ಬ್ಯಾಂಕ್‌ಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸೇರಿದಂತೆ ಎಲ್ಲ ವಾಣಿಜ್ಯ ಬ್ಯಾಂಕ್‌ಗಳು ಡಿಐಸಿಜಿಸಿಗೆ ವಿಮಾ ಕಂತು ಪಾವತಿಸಿ ಆ ಸೌಲಭ್ಯ ನೀಡುತ್ತವೆ. ಡಿಐಸಿಜಿಸಿಯು ಯಾವುದೇ ಸಂಸ್ಥೆಯನ್ನು ವಿಮೆ ಮಾಡಿಸಿದ ಸಂಸ್ಥೆಯಾಗಿ ನೋಂದಾಯಿಸುವಾಗ ವಿಮೆ ಮಾಡಿದ ಸಂಸ್ಥೆಗಳ ಠೇವಣಿದಾರರಿಗೆ ನಿಗಮವು ಒದಗಿಸುವ ರಕ್ಷಣೆಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಕಟಿಸುತ್ತದೆ. ಸಂದೇಹವಿದ್ದಲ್ಲಿ, ಠೇವಣಿದಾರರು ಈ ನಿಟ್ಟಿನಲ್ಲಿ ಶಾಖೆಯ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಬೇಕು. ಠೇವಣಿ ಇರಿಸುವ ಮುನ್ನ ಮಾಹಿತಿ ಪಡೆದುಕೊಂಡರೆ ಉತ್ತಮ.

ಯಾವುದೇ ಸಹಕಾರ ಸಂಘಗಳ ಆರ್ಥಿಕ ಸುರಕ್ಷತೆಯ ಬಗ್ಗೆ ಹೇಳುವುದಾದರೆ, ಗ್ರಾಹಕ ಆ ಸಂಘದ ಸದಸ್ಯನೂ ಆಗಿರುತ್ತಾನೆ. ಪ್ರತಿ ಸದಸ್ಯರಿಗೂ ಕೆಲವೆಲ್ಲ ಕರ್ತವ್ಯಗಳು ಹಾಗೂ ಅಧಿಕಾರಗಳಿರುತ್ತವೆ. ಇವನ್ನು ಉಪನಿಯಮಗಳಲ್ಲಿ ಉಲ್ಲೇಖಿಸಿರುತ್ತಾರೆ. ನೀವು ಸರ್ವ ಸದಸ್ಯರ ಸಭೆಗೆ ಹಾಜರಾಗಿ, ಆರ್ಥಿಕ ವಿಚಾರದಲ್ಲಿರುವ ನಿಮ್ಮ ಸಂದೇಹಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಅಥವಾ ಆಡಳಿತ ಮಂಡಳಿಯ ಪದಾಧಿಕಾರಿಗಳ ಮುಂದಿಟ್ಟು ಬಗೆಹರಿಸಿಕೊಳ್ಳುವ ಜಾಣತನ ತೋರಿಸಬೇಕು. ಸಂಘದ ಪ್ರತಿ ವರ್ಷದ ಆರ್ಥಿಕ ವ್ಯವಹಾರ ತಖ್ತೆ ಹಾಗೂ ಲಾಭ–ನಷ್ಟ ವ್ಯವಹಾರ ಖಾತೆಯನ್ನು ಅರ್ಥ ಮಾಡಿಕೊಳ್ಳಬೇಕು. ಅದರಲ್ಲಿ ನೀಡಲಾಗುವ ಅಂಕಿ ಅಂಶಗಳ ಬಗ್ಗೆ ಕನಿಷ್ಠ ಪರಾಮರ್ಶೆ ನಡೆಸಿ ವ್ಯವಹರಿಸುವುದೊಳಿತು.


ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ದಾನಿಗಳ ಪಟ್ಟಿಯಲ್ಲಿ ಅದಾನಿ, ನಾಡರ್, ಸೂಟ


ಗೌತಮ್ ಅದಾನಿ


ಶಿವ ನಾಡಾರ್


ಅಶೋಕ್ ಸೂಟ

ಸಿಂಗಪುರ (ಪಿಟಿಐ): ಫೋಬ್ಸ್ ಏಷ್ಯಾ ಸಿದ್ಧಪಡಿಸಿರುವ ದಾನಿಗಳ ಪಟ್ಟಿಯಲ್ಲಿ ಭಾರತದ ಉದ್ಯಮಿಗಳಾದ ಗೌತಮ್ ಅದಾನಿ, ಶಿವ ನಾಡರ್ ಮತ್ತು ಅಶೋಕ್ ಸೂಟ ಸ್ಥಾನ ಪಡೆದಿದ್ದಾರೆ. ಭಾರತ ಮೂಲದ ಮಲೇಷ್ಯಾ ಉದ್ಯಮಿ ಬ್ರಹ್ಮಲ್ ವಾಸುದೇವನ್ ಮತ್ತು ಅವರ ಪತ್ನಿ ಶಾಂತಿ ಕಂದಯ್ಯ ಅವರೂ ಈ ಪಟ್ಟಿಯಲ್ಲಿ ಇದ್ದಾರೆ.

ಏಷ್ಯಾ-ಪ್ಯಾಸಿಫಿಕ್ ವಲಯದಲ್ಲಿ ದಾನ ಕಾರ್ಯದಲ್ಲಿ ವೈಯಕ್ತಿಕ ಬದ್ಧತೆಯನ್ನು ತೋರಿಸಿರುವವರ ಹೆಸರನ್ನು ಈ ಪಟ್ಟಿ ಒಳಗೊಂಡಿದೆ ಎಂದು ಫೋಬ್ಸ್ ಪ್ರಕಟಣೆ ತಿಳಿಸಿದೆ.

ಅದಾನಿ ಅವರು ಜೂನ್‌ನಲ್ಲಿ ತಮಗೆ 60 ವರ್ಷ ತುಂಬಿದಾಗ ₹ 60 ಸಾವಿರ ಕೋಟಿಯನ್ನು ದಾನವಾಗಿ ನೀಡುವುದಾಗಿ ಹೇಳಿದ್ದಾರೆ. ಈ ಘೋಷಣೆಯು ಅವರನ್ನು ಭಾರತದ ಅತಿದೊಡ್ಡ ದಾನಿಗಳ ಪೈಕಿ ಒಬ್ಬರನ್ನಾಗಿಸಿದೆ ಎಂದು ಫೋಬ್ಸ್ ಹೇಳಿದೆ.

ಶಿವ ನಾಡರ್ ಅವರು ತಮ್ಮ ಶಿವ ನಾಡರ್ ಪ್ರತಿಷ್ಠಾನಕ್ಕೆ ಈ ವರ್ಷ ₹ 11,600 ಕೋಟಿ ದಾನ ಮಾಡಿದ್ದಾರೆ. ಅಶೋಕ್ ಸೂಟ ಅವರು ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆಗಳಿಗಾಗಿ ₹ 600 ಕೋಟಿ ನೀಡುವುದಾಗಿ ಹೇಳಿದ್ದಾರೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹141
ಆರ್‌ಎಸ್‌ಎಸ್-5	₹133
ಗುಡ್ ಲಾಟ್	₹126

(ಪ್ರತಿ ಕೆ.ಜಿಗೆ)

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಕಾರ್ಕಳ	
ಹೊಸತು	25000-37500
ಹಳತು	40000-54500
ಮಡಿಕೇರಿ	
ಹಸಿ	45145-45145
ಪುತ್ತೂರು	
ಹೊಸತು	32000-38000
ಸಾಗರ	
ಕೆಂಪುಗೋಟು	33899-33899
ರಾಶಿ	41689-42819
ಸಿಪ್ಪೆಗೋಟು	19265-19479
ಶಿವಮೊಗ್ಗ	
ಬೆಟ್ಟೆ	47009-51599
ಗೊರಬಲು	17000-33599
ಹೊಸತು	39099-43299
ರಾಶಿ	40009-44159
ಸಿದ್ದಾಪುರ	
ಬಿಳಿಗೋಟು	29619-34109
ಚಾಲಿ	36099-39739
ಕೋಕ	26899-30119
ರಾಶಿ	42989-43900
ತಟ್ಟಿಬೆಟ್ಟೆ	33191-33191
ತುಮಕೂರು	
ರಾಶಿ	43900-45100
ಯಲ್ಲಾಪುರ	
ಬಿಳಿಗೋಟು	24899-35899
ಚಾಲಿ	36020-40666
ಕೋಕ	18899-28212
ಕೆಂಪುಗೋಟು	26577-32699
ರಾಶಿ	43002-50998
ತಟ್ಟಿಬೆಟ್ಟೆ	37500-42599

ಕಾಫಿ (50 ಕೆ.ಜಿಗೆ ₹ಗಳಲ್ಲಿ)

ಮೂಡಿಗೆರೆ	ಹಾಸನ
	ಮುದ್ರೆಮನೆ
ಎಪಿ	13100
ಎಸಿ	6720
ಆರ್‌ಪಿ	8500
ಆರ್‌ಸಿ	4530

ಮುಂಬೈ ಧಾರಣೆ

ಶೇಂಗಾ 6-12-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525(1525)
ಒಂದು ವಾರದ ಡೆಲಿವರಿ	1520(1520)
ಸೋಯಾ ಕಚ್ಚಾ	1180(1200)
ಪಾಮ್ ವಾರದ ಡೆಲಿವರಿ	943(938)
ಸೂರ್ಯಕಾಂತಿ ಎಣ್ಣೆ ಕಚ್ಚಾ	-

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53400(53650)
ಬೆಳ್ಳಿ ಕೆ.ಜಿ 64600(65800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

'ಪ್ರಭಾವಿ ಮಹಿಳೆ'ಯರ ಪಟ್ಟಿಯಲ್ಲಿ ನಾಲ್ವರು ಭಾರತೀಯರು

ಲಂಡನ್ (ಪಿಟಿಐ): ಬಿಬಿಸಿಯು ಪ್ರಸಕ್ತ ವರ್ಷದ '100 ಪ್ರಭಾವಿ ಮಹಿಳೆ'ಯರ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ನಟಿ ಹಾಗೂ ನಿರ್ಮಾಪಕಿ ಪ್ರಿಯಾಂಕಾ ಚೋಪ್ರಾ ಜೋನಸ್ ಸೇರಿ ನಾಲ್ವರು ಭಾರತೀಯರು ಈ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.


ಪ್ರಿಯಾಂಕಾ ಚೋಪ್ರಾ

ಏರೋನಾಟಿಕಲ್ ಎಂಜಿನಿಯರ್ ಶಿರಿಷಾ ಬಂಡ್ಲಾ, ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಗೀತಾಂಜಲಿಶ್ರೀ ಹಾಗೂ ಸಮಾಜ ಸೇವಕಿ ಸ್ನೇಹಾ ಜವಳೆ, ಈ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತೀಯರಾಗಿದ್ದಾರೆ.

ಪತ್ರಕರ್ತ ಷರೀಫ್ ಹತ್ಯೆ: ಎಫ್‌ಐಆರ್‌ಗೆ 'ಸುಪ್ರೀಂ' ಸೂಚನೆ

ಇಸ್ಲಾಮಾಬಾದ್: ಕೀನ್ಯಾದಲ್ಲಿ ನಡೆದ ಪತ್ರಕರ್ತ ಅರ್ಷದ್ ಷರೀಫ್ ಅವರ ಹತ್ಯೆಗೆ ಸಂಬಂಧಿಸಿ ಎಫ್‌ಐಆರ್ ದಾಖಲಿಸುವಂತೆ ಸರ್ಕಾರಕ್ಕೆ ಪಾಕಿಸ್ತಾನದ ಸುಪ್ರೀಂಕೋರ್ಟ್ ಮಂಗಳವಾರ ನಿರ್ದೇಶಿಸಿದೆ.

ಹತ್ಯೆ ಕುರಿತು ತನಿಖೆ ನಡೆಸಿರುವ ಸಮಿತಿಯ ವರದಿಯನ್ನು ಸಲ್ಲಿಸುವಂತೆಯೂ ಸೂಚಿಸಿದೆ.

49 ವರ್ಷದ ಷರೀಫ್ ಅವರು ಎಆರ್‌ವೈ ಟಿವಿ ಚಾನೆಲ್‌ನಲ್ಲಿ ಆ್ಯಂಕರ್ ಆಗಿದ್ದರು. ನೈರೋಬಿ ಬಳಿಯ ಪೊಲೀಸ್ ಚೆಕ್‌ಪೋಸ್ಟ್‌ನಲ್ಲಿ ಅಕ್ಟೋಬರ್ 23ರಂದು ಗುಂಡಿಕ್ಕಿ ಅವರನ್ನು ಹತ್ಯೆ ಮಾಡಲಾಗಿತ್ತು.

ಸಿನಿಮಾ ವೀಕ್ಷಿಸಿದ್ದಕ್ಕೆ ಗಲ್ಲು

ನವದೆಹಲಿ: ದಕ್ಷಿಣ ಕೊರಿಯಾ ಹಾಗೂ ಅಮೆರಿಕದ ಸಿನಿಮಾಗಳನ್ನು ವೀಕ್ಷಿಸಿದ್ದಕ್ಕಾಗಿ ಉತ್ತರ ಕೊರಿಯಾ ಸರ್ಕಾರವು ಪ್ರೌಢಶಾಲೆಯ ಇಬ್ಬರು ಬಾಲಕರನ್ನು ಗಲ್ಲಿಗೇರಿಸಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ದಕ್ಷಿಣ ಕೊರಿಯಾ ಸಿನಿಮಾಗಳ (ಕೆ-ಡ್ರಾಮಾ) ವೀಕ್ಷಣೆ ಅಥವಾ ವಿತರಣೆಯನ್ನು ಉತ್ತರ ಕೊರಿಯಾ ಸರ್ಕಾರ ನಿಷೇಧಿಸಿದೆ.

'ಅಕ್ಟೋಬರ್‌ನಲ್ಲೇ ಬಾಲಕರನ್ನು ಗಲ್ಲಿಗೇರಿಸಲಾಗಿತ್ತು. ಈ ಸುದ್ದಿ ಈಚೆಗೆ ಬೆಳಕಿಗೆ ಬಂದಿದೆ.

ಇರಾನ್: ಐವರಿಗೆ ಮರಣ ದಂಡನೆ

ಟೆಹರಾನ್ (ಎಎಫ್‌ಪಿ): ವಸ್ತ್ರಸಂಹಿತೆ ವಿರೋಧಿಸಿ ದೇಶದಾದ್ಯಂತ ನಡೆದ ಪ್ರತಿಭಟನೆಗಳ ಸಂದರ್ಭದಲ್ಲಿ ಅರೆಸೇನಾಪಡೆಯ ಯೋಧನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಐದು ಜನರಿಗೆ ಮರಣ ದಂಡನೆ ವಿಧಿಸಲಾಗಿದೆ ಎಂದು ಇರಾನ್‌ನ ನ್ಯಾಯಾಂಗ ಇಲಾಖೆ ಮಂಗಳವಾರ ತಿಳಿಸಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿ, ಮೂವರು ಮಕ್ಕಳು ಸೇರಿ ಇತರ 11 ಜನರಿಗೆ ಜೈಲು ಶಿಕ್ಷೆ ವಿಧಿಸಲಾಗಿದೆ.

ಬಾಲಕಿಯರಿಗೆ ಶಿಕ್ಷಣ: ತಾಲಿಬಾನ್ ಅನುಮತಿ

ಇಸ್ಲಾಮಾಬಾದ್ (ಎಪಿ): ಅಫ್ಗಾನಿಸ್ತಾನದ ಬಾಲಕಿಯರು ಬುಧವಾರ ನಡೆಯಲಿರುವ ಪ್ರೌಢ ಶಿಕ್ಷಣದ ಪರೀಕ್ಷೆಗೆ ಹಾಜರಾಗಬಹುದು ಎಂದು ತಾಲಿಬಾನ್ ಸರ್ಕಾರ ಮಂಗಳವಾರ ತಿಳಿಸಿದೆ. ಕಳೆದ ವರ್ಷ ತಾಲಿಬಾನ್ ಬಂಡುಕೋರರು ದೇಶವನ್ನು ವಶಪಡಿಸಿಕೊಂಡ ನಂತರ ಬಾಲಕಿಯರು ತರಗತಿಗೆ ತೆರಳುವುದನ್ನು ನಿಷೇಧಿಸಲಾಗಿತ್ತು.

ನೀರವ್ ಹಸ್ತಾಂತರ: ಪ್ರತಿಕ್ರಿಯೆ ಸಲ್ಲಿಸಿದ ಭಾರತ

ಲಂಡನ್ (ಪಿಟಿಐ): ತನ್ನ ಹಸ್ತಾಂತರಕ್ಕೆ ಸಂಬಂಧಿಸಿ ಬ್ರಿಟನ್ ಸುಪ್ರೀಂಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಅನುಮತಿ ಕೋರಿ ದೇಶಭ್ರಷ್ಟ ವಜ್ರ ವ್ಯಾಪಾರಿ ನೀರವ್ ಮೋದಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ಭಾರತದ ಅಧಿಕಾರಿಗಳು ತಮ್ಮ ಪ್ರತಿಕ್ರಿಯೆ ಸಲ್ಲಿಸಿದ್ದಾರೆ.

'ಡಿ.5ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸಲು ಗಡುವು ನೀಡಲಾಗಿತ್ತು. ಈ ಗಡುವಿನೊಳಗೇ ಪ್ರತಿಕ್ರಿಯೆ ಸಲ್ಲಿಸಲಾಗಿದೆ' ಎಂದು ಭಾರತದ ಪರ ವಾದ ಮಂಡಿಸುತ್ತಿರುವ ಕ್ರೌನ್ ಪ್ರಾಸಿಕ್ಯೂಷನ್ ಸರ್ವೀಸ್ (ಸಿಪಿಸಿ) ಹೇಳಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪವನ್ನು ನೀರವ್ ಮೋದಿ ಎದುರಿಸುತ್ತಿದ್ದಾರೆ.

ಕುರ್ಸ್ಕ್ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ

ಕೀವ್ (ಎಪಿ): ರಷ್ಯಾದ ದಕ್ಷಿಣ ಕುರ್ಸ್ಕ್ ಪ್ರದೇಶದ ವಿಮಾನ ನಿಲ್ದಾಣದ ಮೇಲೆ ಉಕ್ರೇನ್ ಪಡೆಗಳಿಂದ ಡ್ರೋನ್ ದಾಳಿ ನಡೆದಿದ್ದು ಇದರಿಂದ ಮಂಗಳವಾರ ನಸುಕಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ. 2 ವಾಯುನೆಲೆಗಳ ಮೇಲೆ ಡ್ರೋನ್ ದಾಳಿಯಾಗಿದೆ ಎಂದು ರಷ್ಯಾ ಆರೋಪಿಸಿದ ಮರು ದಿನವೇ ಈ ಬೆಂಕಿ ಅವಘಡವನ್ನು ಸ್ಥಳೀಯಾಡಳಿತ ದೃಢಪಡಿಸಿದೆ.

'ಉಕ್ರೇನಿನ 2 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ. ರಷ್ಯಾದ ಮೂವರು ಸೈನಿಕರು ಸಾವನ್ನಪ್ಪಿದ್ದಾರೆ ಎಂದು ರಷ್ಯಾ ಹೇಳಿದೆ.

ಪೆನಾಲ್ಟಿಯಲ್ಲಿ ನೇಮರ್ ಗೋಲು; 4–1ರಿಂದ ಜಯ: ಎಂಟರಘಟ್ಟದಲ್ಲಿ ಕ್ರೊವೇಷ್ಯಾ ಸವಾಲು

ಬ್ರೆಜಿಲ್ ಆಟಕ್ಕೆ ಬೆದರಿದ ಕೊರಿಯಾ

ದೋಹಾ (ರಾಯಿಟರ್ಸ್): ಮೂವತ್ತು ನಿಮಿಷಗಳ ಅಂತರದಲ್ಲಿ ನಾಲ್ಕು ಗೋಲುಗಳನ್ನು ಗಳಿಸಿದ ಬ್ರೆಜಿಲ್ ತಂಡದ ಆಕ್ರಮಣಕಾರಿ ಆಟದ ಮುಂದೆ ದಕ್ಷಿಣ ಕೊರಿಯಾ ತಂಡ ನಲುಗಿತು.

‘ಸ್ಟೇಡಿಯಂ 974’ ಕ್ರೀಡಾಂಗಣದಲ್ಲಿ ಸೋಮವಾರ ತಡರಾತ್ರಿ ನಡೆದ 16ರ ಘಟ್ಟದ ಪಂದ್ಯದಲ್ಲಿ ಕಾಲ್ಚಳಕದ ಮೋಡಿ ಮಾಡಿದ ಬ್ರೆಜಿಲ್ 4–1 ಗೋಲುಗಳ ಗೆಲುವು ಪಡೆದು ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಚೆಂಡಿನ ಮೇಲೆ ಅದ್ಭುತ ನಿಯಂತ್ರಣ, ನಿಖರ ಪಾಸ್‌ಗಳು ಮತ್ತು ವೇಗದ ಆಟದಿಂದ ಬ್ರೆಜಿಲ್ ತಂಡ ಅಭಿಮಾನಿಗಳನ್ನು ರಂಜಿಸಿತು. ಗಾಯದಿಂದ ಚೇತರಿಸಿಕೊಂಡು ಬಂದ ನೇಮರ್, ಪೆನಾಲ್ಟಿ ಅವಕಾಶದಲ್ಲಿ ಗೋಲು ಗಳಿಸಿದರೆ, ಇತರ ಗೋಲುಗಳನ್ನು ವಿನೀಸಿಯಸ್ ಜೂನಿಯರ್, ಲುಕಾಸ್ ಪಕೇಟಾ ಮತ್ತು ರಿಚಾರ್ಲಿಸನ್ ತಂದಿತ್ತರು. ಬ್ರೆಜಿಲ್ ತಂಡ ಈ ಟೂರ್ನಿಯಲ್ಲಿ ಇದುವರೆಗೆ ಆಡಿದ ಪಂದ್ಯಗಳಲ್ಲಿ ಪ್ರಥಮಾರ್ಧದಲ್ಲಿ ಗೋಲು ಗಳಿಸಿಯೇ ಇರಲಿಲ್ಲ. ಆ ಕೊರತೆ ಸೋಮವಾರ ರಾತ್ರಿ ನೀಗಿತು. ನಾಲ್ಕೂ ಗೋಲುಗಳನ್ನು ಮೊದಲ ಅವಧಿಯಲ್ಲೇ ಗಳಿಸಿತು.

ಮೊದಲ ಗೋಲು ಏಳನೇ ನಿಮಿಷದಲ್ಲಿ ಬಂತು. ರಫೀನಿಯಾ ನೀಡಿದ ಕ್ರಾಸ್‌ನಲ್ಲಿ ವಿನೀಸಿಯಸ್ ಅವರು ಎದುರಾಳಿ ಡಿಫೆಂಡರ್‌ಗಳು ಮತ್ತು ಗೋಲ್‌ಕೀಪರ್ ಅವರನ್ನು ತಪ್ಪಿಸಿ ಚೆಂಡನ್ನು ಗುರಿ ಸೇರಿಸಿದರು.ಇದಾದ 5 ನಿಮಿಷಗಳ ಬಳಿಕ ರಿಚಾರ್ಲಿಸನ್ ಅವರನ್ನು ಕೊರಿಯಾ ಡಿಫೆಂಡರ್ ಪೆನಾಲ್ಟಿ ಆವರಣದಲ್ಲಿ ಬೀಳಿಸಿದರು. ರೆಫರಿ ಬ್ರೆಜಿಲ್‌ಗೆ ಪೆನಾಲ್ಟಿ ಕಿಕ್ ಅವಕಾಶ ನೀಡಿದರು. ನೇಮರ್ ಅವರು ಈ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸುವಲ್ಲಿ ಯಾವುದೇ ತಪ್ಪು ಮಾಡಲಿಲ್ಲ. ಇದು ಬ್ರೆಜಿಲ್ ಪರ ಅವರು ಗಳಿಸಿದ 76ನೇ ಗೋಲು ಆಗಿತ್ತು. ದಿಗ್ಗಜ ಆಟಗಾರ ಪೆಲೆ (77 ಗೋಲು) ಹೆಸರಲ್ಲಿರುವ ದಾಖಲೆ ಸರಿಗಟ್ಟಲು ಅವರಿಗೆ ಇನ್ನೊಂದು ಗೋಲು ಅಗತ್ಯವಿದೆ.

29ನೇ ನಿಮಿಷದಲ್ಲಿ ರಿಚಾರ್ಲಿಸನ್ ಸೊಗಸಾದ ಗೋಲು ಗಳಿಸಿದರು. ಲುಕಾಸ್ ಪಕೇಟಾ 36ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ 4–0 ಮುನ್ನಡೆ ತಂದಿತ್ತರು. 2ನೇ ಅವಧಿಯಲ್ಲಿ ಬ್ರೆಜಿಲ್ ಆಕ್ರಮಣಕಾರಿ ಆಟ ಮುಂದುವರಿಸಿದರೂ ಗೋಲುಗಳು ಬರಲಿಲ್ಲ. ದಕ್ಷಿಣ ಕೊರಿಯಾ ತಂಡದ ಏಕೈಕ ಗೋಲನ್ನು ಪಾಯಿಕ್ ಸುಂಗ್ ಹೊ ಅವರು 76ನೇ ನಿಮಿಷದಲ್ಲಿ ಗಳಿಸಿದರು. ಶುಕ್ರವಾರ ನಡೆಯಲಿರುವ ಕ್ವಾರ್ಟರ್ ಫೈನಲ್‌ನಲ್ಲಿ ಬ್ರೆಜಿಲ್ ತಂಡ, ಕ್ರೊವೇಷ್ಯಾ ತಂಡವನ್ನು ಎದುರಿಸಲಿದೆ.



ಬ್ರೆಜಿಲ್‌ನ ವಿನೀಸಿಯಸ್ ಜೂನಿಯರ್, ರಫೀನಿಯಾ, ಲುಕಾಸ್ ಪಕೇಟಾ ಹಾಗೂ ನೇಮರ್ ಅವರ ಸಂಭ್ರಮ –ಎಎಫ್‌ಪಿ ಚಿತ್ರ

ಪಂದ್ಯ ವೀಕ್ಷಿಸಿದ ಪೆಲೆ

ಸಾವೊಪೌಲೊ (ಎಎಫ್‌ಪಿ): ಕರುಳಿನ ಕ್ಯಾನ್ಸರ್‌ಗೆ ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಫುಟ್‌ಬಾಲ್ ದಿಗ್ಗಜ ಪೆಲೆ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ ಎಂದು ವೈದ್ಯರು ಮಂಗಳವಾರ ತಿಳಿಸಿದ್ದಾರೆ.

ಸೋಮವಾರ ನಡೆದ ಬ್ರೆಜಿಲ್– ದಕ್ಷಿಣ ಕೊರಿಯಾ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯವನ್ನು ಅವರು ವೀಕ್ಷಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಏಷ್ಯಾದ ಸವಾಲು ಅಂತ್ಯ

ಬ್ರೆಜಿಲ್ ತಂಡದ ಎದುರು ದಕ್ಷಿಣ ಕೊರಿಯಾ ಸೋಲು ಅನುಭವಿಸುವುದರೊಂದಿಗೆ ವಿಶ್ವಕಪ್ ಟೂರ್ನಿಯಲ್ಲಿ ಏಷ್ಯಾದ ತಂಡಗಳ ಸವಾಲಿಗೆ ತೆರೆಬಿದ್ದಿದೆ. ನಾಕೌಟ್ ಹಂತ ಪ್ರವೇಶಿಸಿದ್ದ ಏಷ್ಯಾದ ಇನ್ನೊಂದು ತಂಡ ಜಪಾನ್, ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಕ್ರೊವೇಷ್ಯಾ ಎದುರು ಸೋತಿತ್ತು. ಇರಾನ್, ಸೌದಿ ಅರೇಬಿಯಾ ಮತ್ತು ಅತಿಥೇಯ ಕತಾರ್ ತಂಡಗಳು ಲೀಗ್ ಹಂತದಲ್ಲೇ ಹೊರಬಿದ್ದಿದ್ದವು.

ಗೋಲು ವಿವರ

ಬ್ರೆಜಿಲ್ 4
- ವಿನೀಸಿಯಸ್ ಜೂನಿಯರ್ (7ನೇ ನಿ.)
- ನೇಮರ್ (13ನೇ ನಿ.)
- ರಿಚಾರ್ಲಿಸನ್ (29ನೇ ನಿ.)
- ಲುಕಾಸ್ ಪಕೇಟಾ (36ನೇ ನಿ.)

ದಕ್ಷಿಣ ಕೊರಿಯಾ 1
- ಪಾಯಿಕ್ ಸುಂಗ್ ಹೊ (76ನೇ ನಿ.)

ಮೊರೊಕ್ಕೊ ಚಾರಿತ್ರಿಕ ಸಾಧನೆ

ಸ್ಪೇನ್ ತಂಡಕ್ಕೆ ಸೋಲುಣಿಸಿ ಕ್ವಾರ್ಟರ್‌ಫೈನಲ್‌ಗೆ ಲಗ್ಗೆ

ಅಲ್ ರಯಾನ್ (ರಾಯಿಟರ್ಸ್): ಮೊರೊಕ್ಕೊ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ ಸ್ಪೇನ್ ತಂಡಕ್ಕೆ ಆಘಾತ ನೀಡಿ ವಿಶ್ವಕಪ್ ಟೂರ್ನಿಯ ಎಂಟರಘಟ್ಟಕ್ಕೆ ಲಗ್ಗೆಯಿಟ್ಟಿತು. ಇದೇ ಮೊದಲ ಬಾರಿ ಕ್ವಾರ್ಟರ್‌ಫೈನಲ್ ತಲುಪಿದ ಸಾಧನೆ ಮಾಡಿತು. ಈ ಶ್ರೇಯ ಗಳಿಸಿದ ಮೊದಲ ಅರಬ್ ದೇಶ ಎಂಬ ಹಿರಿಮೆಗೂ ಪಾತ್ರವಾಯಿತು.

ಇಲ್ಲಿಯ ಎಜುಕೇಶನ್ ಸಿಟಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮೊರೊಕ್ಕೊ 3–0ಯಿಂದ ಸ್ಪೇನ್ ತಂಡವನ್ನು ಸೋಲಿಸಿತು.

ಜಿದ್ದಾಜಿದ್ದಿ ಪೈಪೋಟಿ ನಡೆದ ಪಂದ್ಯದ ನಿಗದಿತ ಮತ್ತು ಹೆಚ್ಚುವರಿ ಅವಧಿಯಲ್ಲಿ ಯಾವುದೇ ಗೋಲು ದಾಖಲಾಗಲಿಲ್ಲ. 2010ರ ಆವೃತ್ತಿಯ ಚಾಂಪಿಯನ್ ಸ್ಪೇನ್, ಹಲವು ಅವಕಾಶಗಳನ್ನು ಸೃಷ್ಟಿಸಿಕೊಂಡರೂ ಅವುಗಳನ್ನು ಗೋಲುಗಳಲ್ಲಿ ಪರಿವರ್ತಿಸಲು ಸಾಧ್ಯವಾಗಲಿಲ್ಲ.

ಅಶ್ರಫ್ ಹಕೀಮಿ, ಹಕೀಂ ಜಿಯೆಚ್ ಮತ್ತು ಅಬ್ದೆಲ್ ಹಮೀದ್ ಅವರು ಮೊರೊಕ್ಕೊ ಪರ ಶೂಟೌಟ್‌ನಲ್ಲಿ ಯಶಸ್ಸು ಕಂಡರು. ಮೊರೊಕ್ಕೊ ಗೋಲ್‌ಕೀಪರ್ ಯಾಸಿನ್ ಬೌನೊ ಅವರು ಶೂಟೌಟ್‌ನಲ್ಲಿ ಎದುರಾಳಿ ತಂಡದ ಎರಡು ಗೋಲುಗಳನ್ನು ತಡೆದು ಗೆಲುವಿನಲ್ಲಿ ಮಿಂಚಿದರು. ಸ್ಪೇನ್ ತಂಡದ ಪ್ಯಾಬ್ಲೊ ಸರಾಬಿಯಾ ಒದ್ದ ಚೆಂಡು ಗೋಲುಕಂಬಕ್ಕೆ ಬಡಿದರೆ, ಕಾರ್ಲೋಸ್ ಸೋಲೆರ್, ಸೆರ್ಜಿಯೊ ಬಸ್ಕೆಟ್ಸ್ ಅವರ ಪ್ರಯತ್ನಗಳನ್ನು ಯಾಸಿನ್ ತಡೆದರು.

ಎಂಟರಘಟ್ಟದಲ್ಲಿ ಮೊರೊಕ್ಕೊ ತಂಡವು ಸ್ವಿಟ್ಜರ್ಲೆಂಡ್ ಅಥವಾ ಪೋರ್ಚುಗಲ್‌ಅನ್ನು ಎದುರಿಸಲಿದೆ.



ಮೊರೊಕ್ಕೊ ತಂಡದ ಅಶ್ರಫ್ ಹಕೀಮಿ (ಎಡದಿಂದ ಮೂರನೆಯವರು) ಅವರು ಸಹ ಆಟಗಾರರೊಡನೆ ಸಂಭ್ರಮಿಸಿದರು– ಎಎಫ್‌ಪಿ ಚಿತ್ರ

ರಣಜಿ: ಸಂಭವನೀಯರಲ್ಲಿ ಕರುಣ್, ನಿಕಿನ್

ಬೆಂಗಳೂರು: ಅನುಭವಿ ಆಟಗಾರ ಕರುಣ್ ನಾಯರ್ ಮತ್ತು ಹೊಸ ಪ್ರತಿಭೆ ನಿಕಿನ್ ಜೋಸ್ ಅವರಿಗೆ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕದ ಸಂಭವನೀಯರ ತಂಡದಲ್ಲಿ ಸ್ಥಾನ ನೀಡಲಾಗಿದೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಮಂಗಳವಾರ 32 ಆಟಗಾರರ ಸಂಭವನೀಯ ತಂಡವನ್ನು ಪ್ರಕಟಿಸಿದೆ.

ಈಚೆಗೆ ನಡೆದ ವಿಜಯ್ ಹಜಾರೆ ಏಕದಿನ ಹಾಗೂ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಿದ್ದ ಕರ್ನಾಟಕ ತಂಡದಿಂದ ಕರುಣ್ ನಾಯರ್ ಅವರನ್ನು ಕೈಬಿಡಲಾಗಿತ್ತು. ಏಕದಿನ ಟೂರ್ನಿಯಲ್ಲಿ ಪದಾರ್ಪಣೆ ಮಾಡಿದ್ದ ನಿಕಿನ್ ಜೋಸ್ ಉತ್ತಮವಾಗಿ ಆಡಿದ್ದರು. ನಾಲ್ಕುನೂರಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿದ್ದರು.

ಮಧ್ಯಮವೇಗಿ ವಿದ್ಯಾಧರ ಪಾಟೀಲ, ಎಂ. ವೆಂಕಟೇಶ್ ಹಾಗೂ ವಿದ್ವತ್ ಕಾವೇರಪ್ಪ ಅವರಿಗೆ ಅವಕಾಶ ನೀಡಲಾಗಿದೆ. ಅನುಭವಿಗಳಾದ ರೋನಿತ್ ಮೋರೆ, ವಿ. ಕೌಶಿಕ್ ಮತ್ತು ಪ್ರಸಿದ್ಧ ಕೃಷ್ಣ ತಂಡದಲ್ಲಿದ್ದಾರೆ. ಭಾರತ ತಂಡದಲ್ಲಿ ಆಡುತ್ತಿರುವ ಕೆ.ಎಲ್. ರಾಹುಲ್ ಹೆಸರು ಕೂಡ ಪಟ್ಟಿಯಲ್ಲಿದೆ.

ಕರ್ನಾಟಕ ತಂಡವು ಸರ್ವಿಸಸ್ (ಡಿ.13–16. ಬೆಂಗಳೂರು), ಪುದುಚೇರಿ (ಡಿ. 20–23. ಬೆಂಗಳೂರು), ಗೋವಾ (ಡಿ 27–30; ಪೋರ್ವರಿಮ್), ಛತ್ತೀಸಗಢ (ಜ.3–6, ರಾಯಪುರ್), ರಾಜಸ್ಥಾನ (ಜ.10ರಿಂದ 13; ಬೆಂಗಳೂರು), ಕೇರಳ (ಜ. 17–20; ತಿರುವನಂತಪುರ) ಮತ್ತು ಜಾರ್ಖಂಡ್ (ಜ. 24–27; ರಾಂಚಿ) ತಂಡಗಳನ್ನು ಎದುರಿಸಲಿದೆ.

ಅಂಧರ ಟಿ20 ವಿಶ್ವಕಪ್ ಭಾರತಕ್ಕೆ ಭರ್ಜರಿ ಆರಂಭ

ನವದೆಹಲಿ: ಕರ್ನಾಟಕದ ಸುನಿಲ್ ರಮೇಶ್ ಮತ್ತು ದೀಪಕ್ ಮಲಿಕ್ ಗಳಿಸಿದ ಶತಕಗಳ ಬಲದಿಂದ ಭಾರತ ಅಂಧರ ಕ್ರಿಕೆಟ್ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಫರೀದಾಬಾದ್‌ನ ಸ್ಲೆಡ್ಜ್ ಹ್ಯಾಮರ್ ಕ್ರಿಕೆಟ್ ಅಕಾಡೆಮಿ ಅಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಭಾರತ 274 ರನ್‌ಗಳಿಂದ ನೇಪಾಳ ತಂಡಕ್ಕೆ ಸೋಲುಣಿಸಿತು. ಮೊದಲು ಬ್ಯಾಟ್ ಮಾಡಿದ ಭಾರತ 2 ವಿಕೆಟ್‌ಗೆ 382 ರನ್ ಗಳಿಸಿತು. ನೇಪಾಳ 9 ವಿಕೆಟ್ ಕಳೆದುಕೊಂಡು 108 ರನ್ ಮಾತ್ರ ಗಳಿಸಿತು.

ಸುನಿಲ್ 106 ರನ್ ಮತ್ತು ದೀಪಕ್ ಔಟಾಗದೆ 113 ರನ್ ಗಳಿಸಿ ಗೆಲುವಿಗೆ ಕಾರಣರಾದರು.

ಇನ್ನುಳಿದ ಪಂದ್ಯಗಳಲ್ಲಿ ಬಾಂಗ್ಲಾದೇಶ 99 ರನ್‌ಗಳಿಂದ ದಕ್ಷಿಣ ಆಫ್ರಿಕಾ ಎದುರು, ಶ್ರೀಲಂಕಾ 7 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ವಿರುದ್ಧ ಗೆದ್ದಿತು.

ಪಾಕಿಸ್ತಾನ ತಂಡಕ್ಕೆ ವೀಸಾ: ಟೂರ್ನಿಯಲ್ಲಿ ಭಾಗವಹಿಸಬೇಕಿದ್ದ ಪಾಕಿಸ್ತಾನ ತಂಡಕ್ಕೆ ಭಾರತದ ವೀಸಾ ಲಭಿಸಿದೆ.

ಭಾರತ ವಿದೇಶಾಂಗ ಸಚಿವಾಲಯದಿಂದ ಅನುಮತಿ ಸಿಕ್ಕಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 2ಕ್ಕೆ 382 (ಸುನಿಲ್ ರಮೇಶ್ 106, ದೀಪಕ್ ಮಲಿಕ್ ಔಟಾಗದೆ 113, ವೆಂಕಟೇಶ್ವರ ರಾವ್ ಔಟಾಗದೆ 67). ನೇಪಾಳ: 20 ಓವರ್‌ಗಳಲ್ಲಿ 9ಕ್ಕೆ 108 (ಖೇಮಾನಂದ ಘಾತ್ರೆ 38; ಸುನಿಲ್ ರಮೇಶ್ 7ಕ್ಕೆ 1, ದೀಪಕ್ ಮಲಿಕ್ 27ಕ್ಕೆ 1).

ಗುಣರಂಜನ್ ಅಧ್ಯಕ್ಷ



ಗುಣರಂಜನ್

ಬೆಂಗಳೂರು: ಬಿ.ಗುಣರಂಜನ್ ಶೆಟ್ಟಿ, ಕರ್ನಾಟಕ ಕುಸ್ತಿ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆಯಾದರು. ಅಡ್‌ಹಾಕ್ ಸಮಿತಿಯ ಉಸ್ತುವಾರಿಯಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಮುಂದಿನ 4 ವರ್ಷಕ್ಕೆ ಪದಾಧಿಕಾರಿಗಳ ಆಯ್ಕೆ ನಡೆಯಿತು ಎಂದು ಪ್ರಕಟಣೆ ತಿಳಿಸಿದೆ.

ಪದಾಧಿಕಾರಿಗಳು: ಬಿ.ಗುಣರಂಜನ್ ಶೆಟ್ಟಿ (ಅಧ್ಯಕ್ಷ), ಜಿ.ಎಸ್.ನ್ಯಾಮಗೌಡ (ಹಿರಿಯ ಉಪಾಧ್ಯಕ್ಷ), ಪ್ರಸಾದ್ ಶೆಟ್ಟಿ, ಸಹಜ್ ಜೆ. ರೈ, ವೀರೇಶ್ ಕೆ.ಎಂ, ಪ್ರಕಾಶ್ ಟಿ., ಯಶವಂತ ಯಮನಪ್ಪನವರ್ (ಉಪಾಧ್ಯಕ್ಷರು), ಶ್ರೀನಿವಾಸ ಜೆ. (ಪ್ರಧಾನ ಕಾರ್ಯದರ್ಶಿ), ಶ್ರೀನಿವಾಸ ಅಂಗರಕೋಡಿ (ಖಜಾಂಚಿ), ವಿನೋದ್ ಕುಮಾರ್, ಉಮೇಶ್, ಕುಮಾರ್ (ಜಂಟಿ ಕಾರ್ಯದರ್ಶಿ), ಸಂಜಯ್ ನಾಯಕ್, ವಿಶ್ವನಾಥ ಪಾಟೀಲ್, ಮಿಥುನ್ ದೇವಾಡಿಗ (ಕಾರ್ಯಕಾರಿ ಸಮಿತಿ ಸದಸ್ಯರು)

ಟೆನಿಸ್: ಕ್ವಾರ್ಟರ್‌ಗೆ ಸುಹಾಸ್

ಬೆಂಗಳೂರು: ಎರಡನೇ ಶ್ರೇಯಾಂಕದ ಅದಿತೀಯ ಸಿಂಗ್ ಅವರಿಗೆ ಸೋಲುಣಿಸಿದ ಸುಹಾಸ್ ಸೋಮ ಅವರು ಏಷ್ಯನ್ ಜೂನಿಯರ್ ಟೂರ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದರು.

ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕರ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸುಹಾಸ್ 6-2, 6-1ರಿಂದ ಅದಿತೀಯ ಎದುರು ಗೆದ್ದರು. ಬಾಲಕರ ವಿಭಾಗದ ಇನ್ನುಳಿದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಆರಾಧ್ಯ ಕ್ಷಿತಿಜ್ 6-4, 7-5ರಿಂದ ಶ್ರೀಕರ್ ದೋನಿ ಎದುರು, ಕೆವಿನ್ ಟೈಟಸ್ 6-2, 6-4ರಿಂದ ರೂರಿಕ್ ರಜಿನಿ ಎದುರು, ಎಂ. ದಿಗಂತ್ 6-2, 6-2ರಿಂದ ಕ್ರಿಸ್ಟೊ ಬಾಬು ವಿರುದ್ಧ, ಪ್ರಕಾಶ್ ಸರನ್ 7-6 (7), 6-3ರಿಂದ ಆಹಿಲ್ ಅಯಾಜ್ ಎದುರು, ನಿಶಿತ್ ಅರಿಮಿಲಿ 3-6, 7-5, 6-3ರಿಂದ ರುದ್ರ ಬಾತಮ್ ಎದುರು, ಪಿ. ಲೋಗನಾಥನ್ 6-0, 3-0ರಿಂದ ರಾಹುಲ್ ಲೋಕೇಶ್ (ಗಾಯಗೊಂಡು ನಿವೃತ್ತಿ), ವಿರುದ್ಧ ಗೆದ್ದರು.

ಬಾಲಕಿಯರ ವಿಭಾಗದ 16ರಘಟ್ಟದ ಪಂದ್ಯಗಳಲ್ಲಿ ಜಯಾ ಕಪೂರ್ 6-0, 6-2ರಿಂದ ಕೇಶ್ಮೆಯ ವಿ. ಎದುರು, ಎಂಜೆಲ್ ಪಟೇಲ್ 7-5, 6-3ರಿಂದ ಕೌರ್ ಸಿಧು ವಿರುದ್ಧ, ಕೃಷ್ಣಾ ರಾಜ್ 6-2, 6-1ರಿಂದ ವಿ. ಗಾರುಗುಪತಿ ಎದುರು, ಹರ್ಷಿಣಿ ನಾಗರಾಜ್ 7-6 (6), 6-2ರಿಂದ ಸೆಜಲ್ ಗೋಪಾಲ್ ಭುತದಾ ಎದುರು, ಹರಿತಾ ವೆಂಕಟೇಶ್ 5-7, 6-2, 7-6ರಿಂದ ಅನ್ವಿ ಪುನಗಂಟಿ ಎದುರು ಗೆದ್ದರು.

ಹರ್ಷ ಹ್ಯಾಟ್ರಿಕ್

ಬೆಂಗಳೂರು:ಹರ್ಷ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಸಂದೀಪ್ ಹಾಕಿ ಕ್ಲಬ್ ತಂಡವು ರಾಜ್ಯ ಬಿ ಡಿವಿಷನ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಜಯ ಗಳಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಸಂದೀಪ್ ಎಚ್‌ಸಿ 7–1ರಿಂದ ಗುಲ್ಬರ್ಗ ಎಚ್‌ಸಿ ವಿರುದ್ಧ ಗೆದ್ದಿತು. ಹರ್ಷ 18, 21 ಮತ್ತು 28ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಸುಂದರ್ (10ನೇ ನಿ.), ನಿಖಿಲ್ (20ನೇ ನಿ.), ಬಸವರಾಜ್ (34ನೇ ನಿ.) ಮತ್ತು ನಾಗರಾಜ್ (46ನೇ ನಿ.) ವಿಜೇತ ತಂಡಕ್ಕಾಗಿ ಗೋಲು ಗಳಿಸಿದರು. ಗುಲ್ಬರ್ಗಾ ಪರ ಕಾರ್ತಿಕ್ (2ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ರಾಯಲ್ ಎಚ್‌ಸಿ 3–2ರಿಂದ ಹನುಮಾನ್ ಬ್ಲೆಸಿಂಗ್ಸ್ ಹಾಕಿ ಕ್ಲಬ್, ಗದಗ ವಿರುದ್ಧ ಗೆದ್ದಿತು.

ಮೈಸೂರು ರೇಸ್

ಓ ಹನ್ನಿನಿ ಗೆಲ್ಲುವ ನಿರೀಕ್ಷೆ

ನಾಗಾರ್ಜುನಸಾಗರ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಓ ಹನ್ನಿನಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡತಿದೆ;

1ನೇ ರೇಸ್: ಶಿವಾಲಿಕ್ ಎಂಪರರ್ 2, ವಿಜಯ ಸುರಭಿ 8, ಸ್ಕಾರ್ಲೆಟ್ ಪ್ರಿನ್ಸೆಸ್ 7
2ನೇ ರೇಸ್: ವಿಂಡ್ ವಿಸ್ಲರ್ 2, ವಂದನ್ 10, ಪರ್ಸಿವೇಲ್ 4
3ನೇ ರೇಸ್: ರಾಯಲ್ ಕಮಾಂಡ್ 1, ಕಮ್ ಅಲೈವ್ 4, ಫಿಫ್ಟಿ ಗ್ರ್ಯಾಂಡ್ 9
4ನೇ ರೇಸ್: ಡ್ಯಾಡೀಸ್ ಗರ್ಲ್ 6, ಮಿಸ್ಟಿಕ್ ಮೌಂಟೇನ್ 7, ಡಾಮಿಟಿಯಾ 15
5ನೇ ರೇಸ್: ಬಯೊಮೆಟ್ರಿಕ್ 1, ಕ್ಯಾಪಿಟಲ್ ಗೈನ್ 6, ಕ್ರಿಮ್‌ಸನ್ ಫೈರ್ 2
6ನೇ ರೇಸ್: ಓ ಹನ್ನಿನಿ 15, ಮೊಘಲ್ 1, ವೈಲ್ಡ್ ಸ್ಟೇಲ್ 6
7ನೇ ರೇಸ್: ಅಮೆಜೋನಿಯಾ 5, ಟಿಯಾ ಮಾರಿಯಾ 7, ಇಂಪೀರಿಯಸ್ 10
8ನೇ ರೇಸ್: ವಿಜಯ ಫಾಲ್ಕನ್ 2, ಮಿಸ್ಟಿಕ್ ಡಿವೈನ್ 1, ಐ ದಿ ಮೈಂಡ್ 6

ಅತ್ಯುತ್ತಮ ಬೆಟ್: ಬಯೋಮೆಟ್ರಿಕ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಮಥುರಾದ ಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ಮಸೀದಿ

ಜಲಾಭಿಷೇಕಕ್ಕೆ ಯತ್ನ, ಬಂಧನ

ಪ್ರಜಾವಾಣಿ ವಾರ್ತೆ

ಲಖನೌ: ಧಾರ್ಮಿಕ ಕ್ಷೇತ್ರ ಮಥುರಾದಲ್ಲಿ ಶ್ರೀಕೃಷ್ಣ ಜನ್ಮಭೂಮಿ ಸಂಕೀರ್ಣಕ್ಕೆ ಹೊಂದಿಕೊಂಡಿರುವ ಶಾಹಿ ಈದ್ಗಾ ಮಸೀದಿಯಲ್ಲಿ ‘ಜಲಾಭಿಷೇಕ’ ಮಾಡಲು ಮುಂದಾಗಿದ್ದ ಹಿಂದೂ ಸಂಘಟನೆ ಮುಖಂಡನೊಬ್ಬನನ್ನು ಪೊಲೀಸರು ಸೋಮವಾರ ಬಂಧಿಸಿದರು.

ಮಸೀದಿ ಸಂಕೀರ್ಣದ ಒಳಗೆ ಕೃಷ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಿ, ‘ಹನುಮಾನ್ ಚಾಲೀಸಾ ಪಠಿಸುತ್ತೇವೆ’ ಎಂದು ಘೋಷಿಸಿದ್ದ ಅಖಿಲ ಭಾರತ ಹಿಂದೂ ಮಹಾಸಭಾದ ನಾಲ್ವರು ಮುಖಂಡರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಲಾಭಿಷೇಕ ಮಾಡಲು ಮುಂದಾಗಿದ್ದ ಮಹಾಸಭಾದ ಆಗ್ರಾ ಜಿಲ್ಲಾ ಘಟಕದ ಅಧ್ಯಕ್ಷ ಸೌರವ್ ಶರ್ಮಾ ಅವರನ್ನು ಬಂಧಿಸಲಾಗಿದೆ. ಇನ್ನು ಕೆಲ ಮುಖಂಡರು ಬಂಧನ ಭೀತಿಯಿಂದ ತಲೆಮರೆಸಿಕೊಂಡಿದ್ದು, ಅವರಿಗಾಗಿ ಶೋಧ ನಡೆದಿದೆ ಎಂದು ತಿಳಿಸಿದ್ದಾರೆ.

ವಿವಾದಿತ ಸ್ಥಳಕ್ಕೆ ತೆರಳುತ್ತಿದ್ದ ಇನ್ನೂ ಕೆಲ ಮುಖಂಡರನ್ನು ಬಂಧಿಸಿದ್ದು, ಗೃಹಬಂಧನದಲ್ಲಿ ಇರಿಸಲಾಗಿದೆ. ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ಮಸೀದಿ ಸಂಕೀರ್ಣಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ಮಾರ್ಗಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ ಎಂದಿದ್ದಾರೆ.

ವಿವಾದಿತ ಸ್ಥಳದ ಮಾಲೀತ್ವ ತಮಗೇ ಸೇರಬೇಕು ಎಂದು ಕೋರಿ ಮಥುರಾದ ಜಿಲ್ಲಾ ಕೋರ್ಟ್‌ಗೆ ಎಂಟು ಅರ್ಜಿಗಳು ಸಲ್ಲಿಕೆಯಾಗಿವೆ. ಎಲ್ಲವನ್ನು ಹಿಂದೂ ಸಂಘಟನೆಗಳೇ ಸಲ್ಲಿಸಿವೆ. ವಿವಾದಿತ ಸಂಕೀರ್ಣ ಒಳಗೊಂಡು 13.37 ಎಕರೆ ಭೂಮಿ ನಮಗೆ ಸೇರಬೇಕು ಎಂಬುದು ಅರ್ಜಿದಾರರ ವಾದ. ಮಸೀದಿ ಸಮಿತಿ ಮತ್ತು ಜನ್ಮಭೂಮಿ ಟ್ರಸ್ಟ್ ನಡುವಣ ಒಪ್ಪಂದದ ಸಿಂಧುತ್ವವನ್ನೂ ಪ್ರಶ್ನಿಸಲಾಗಿದೆ.

ರಾಮಮಂದಿರ ಅಭಿಯಾನ ವ್ಯಾಪಿಸಲು ಕಾರಣವಾಗಿದ್ದ ವಿಶ್ವಹಿಂದೂ ಪರಿಷತ್ (ವಿಎಚ್‌ಪಿ) 2024ರಲ್ಲಿ ಶ್ರೀಕೃಷ್ಣ ಜನ್ಮಭೂಮಿ ವಿಷಯವನ್ನು ಹೋರಾಟಕ್ಕೆ ಎತ್ತಿಕೊಳ್ಳಲಾಗುವುದು ಎಂದು ಈಗಾಗಲೇ ಘೋಷಿಸಿದೆ.

ದೇಶದ ಕಟ್ಟಕಡೆಯ ವ್ಯಕ್ತಿಗೂ ಆಹಾರಧಾನ್ಯ ತಲುಪಬೇಕು: ಕೇಂದ್ರಕ್ಕೆ ‘ಸುಪ್ರೀಂ’ ನಿರ್ದೇಶನ

‘ಖಾಲಿ ಹೊಟ್ಟೆಯಲ್ಲಿ ಯಾರೂ ಮಲಗುವಂತಾಗಬಾರದು’

ನವದೆಹಲಿ (ಪಿಟಿಐ): ‘ಯಾರೊಬ್ಬರೂ ಖಾಲಿ ಹೊಟ್ಟೆಯಲ್ಲಿ ಮಲಗಕೂಡದು. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ (ಎನ್‌ಎಫ್‌ಎಸ್‌ಎ) ಅನುಸಾರ ದೇಶದ ಕಟ್ಟಕಡೆಯ ವ್ಯಕ್ತಿಗೂ ಆಹಾರ ಧಾನ್ಯ ತಲುಪುವಂತೆ ನೋಡಿಕೊಳ್ಳುವುದು ಕೇಂದ್ರ ಸರ್ಕಾರದ ಕರ್ತವ್ಯ’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ದ್ವಿಸದಸ್ಯ ಪೀಠ, ಇ-ಶ್ರಮ್ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿಕೊಂಡಿರುವ ವಲಸಿಗರು ಹಾಗೂ ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ಎಷ್ಟು ಎಂಬುದರ ಕುರಿತ ಪಟ್ಟಿಯನ್ನು ಹೊಸದಾಗಿ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತು.

‘ಕೇಂದ್ರ ಸರ್ಕಾರ ಏನೂ ಮಾಡುತ್ತಿಲ್ಲ ಎಂದು ನಾವು ಹೇಳುತ್ತಿಲ್ಲ. ಕೋವಿಡ್ ಸಮಯದಲ್ಲಿ ಕೇಂದ್ರವು ನಾಗರಿಕರಿಗೆ ಆಹಾರ ಧಾನ್ಯ ಪೂರೈಸುವ ಕೆಲಸ ಮಾಡಿದೆ. ಈ ಕಾರ್ಯ ಮುಂದುವರಿಯಬೇಕು. ಯಾರೂ ಖಾಲಿ ಹೊಟ್ಟೆಯಲ್ಲಿ ಮಲಗಬಾರದು. ಅದು ನಮ್ಮ ಸಂಸ್ಕೃತಿ’ ಎಂದು ನ್ಯಾಯಪೀಠ ತಿಳಿಸಿದೆ.

‘2011ರ ಜನಗಣತಿ ವೇಳೆ ಗುರುತಿಸಲಾಗಿರುವ ಜನರಿಗಷ್ಟೇ ಎನ್‌ಎಫ್‌ಎಸ್‌ಎ ಪ್ರಯೋಜನ ಸೀಮಿತವಾಗಬಾರದು. ಅಗತ್ಯವಿರುವ ಇನ್ನಷ್ಟು ಮಂದಿಗೆ ಈ ಕಾಯ್ದೆಯಡಿ ನೆರವು ಒದಗಿಸಬೇಕು. ಆಹಾರದ ಹಕ್ಕು ಮೂಲಭೂತವಾದುದು. ಸಂವಿಧಾನದ ವಿಧಿ 21ರ ಅಡಿ ಇದನ್ನು ನೀಡಲಾಗಿದೆ’ ಎಂದು ನ್ಯಾಯಪೀಠ ಕೇಂದ್ರ ಸರ್ಕಾರಕ್ಕೆ ಸೂಚಿಸಿತು.



ಸಾಮಾಜಿಕ ಕಾರ್ಯಕರ್ತರಾದ ಅಂಜಲಿ ಭಾರದ್ವಾಜ್, ಹರ್ಷ ಮಂದೇರ್ ಮತ್ತು ಜಗದೀಪ್ ಚೋಕರ್ ಅವರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಪ್ರಶಾಂತ್ ಭೂಷಣ್, ‘2011ರ ಜನಗಣತಿ ಬಳಿಕ ದೇಶದ ಜನಸಂಖ್ಯೆ ಹೆಚ್ಚಾಗಿದೆ. ಎನ್‌ಎಫ್‌ಎಸ್‌ಎ ಅನ್ನು ಕಡ್ಡಾಯವಾಗಿ ಜಾರಿಗೊಳಿಸದೆ ಇದ್ದರೆ ಅರ್ಹ ಮತ್ತು ಅಗತ್ಯವುಳ್ಳ ಫಲಾನುಭವಿಗಳು ಇದರ ಪ್ರಯೋಜನದಿಂದ ವಂಚಿತರಾಗುತ್ತಾರೆ’ ಎಂದು ನ್ಯಾಯಪೀಠದ ಎದುರು ಕಳವಳ ವ್ಯಕ್ತಪಡಿಸಿದರು.

‘ಇತ್ತೀಚಿನ ವರ್ಷಗಳಲ್ಲಿ ನಾಗರಿಕರ ತಲಾ ಆದಾಯ ಏರಿಕೆಯಾಗಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತ ಕುಸಿತ ಕಾಣುತ್ತಿದೆ’ ಎಂದರು.

ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ, ‘ಒಟ್ಟು 81.35 ಕೋಟಿ ಫಲಾನುಭವಿಗಳು ಎನ್‌ಎಫ್‌ಎಸ್‌ಎ ವ್ಯಾಪ್ತಿಗೆ ಒಳಪಡುತ್ತಾರೆ. ಭಾರತದ ಮಟ್ಟಿಗೆ ಇದು ಬಹುದೊಡ್ಡ ಸಂಖ್ಯೆ’ ಎಂದು ತಿಳಿಸಿದರು.

‘ಸರ್ಕಾರವು ಫಲಾನುಭವಿಗಳ ಸಂಖ್ಯೆಯನ್ನು 2011ರ ಜನಗಣತಿ ವೇಳೆ ಗುರುತಿಸಲಾಗಿದ್ದ ಸಂಖ್ಯೆಗೆ ಸೀಮಿತಗೊಳಿಸಿಲ್ಲ. ಈ ಪಟ್ಟಿಗೆ ಮತ್ತಷ್ಟು ಮಂದಿಯನ್ನು ಸೇರ್ಪಡೆ ಮಾಡುತ್ತಲೇ ಇದೆ. ಹೀಗಾಗಿ ಈ ಪಟ್ಟಿ ಬೆಳೆಯುತ್ತಲೇ ಇದೆ’ ಎಂದರು.

ಈ ವೇಳೆ ಮಧ್ಯಪ್ರವೇಶಿಸಿದ ಪ್ರಶಾಂತ್ ಭೂಷಣ್, ‘ತಮ್ಮ ಪಾಲಿನ ಆಹಾರ ಧಾನ್ಯಗಳು ಖಾಲಿಯಾಗಿರುವುದಾಗಿ ಒಟ್ಟು 14 ರಾಜ್ಯಗಳು ಅಫಿಡವಿಟ್ ಸಲ್ಲಿಸಿವೆ’ ಎಂದು ಹೇಳಿದರು.

‘ಹಿಂದಿನ ಎಂಟು ವರ್ಷಗಳಲ್ಲಿ ದೇಶದ ನಾಗರಿಕರ ತಲಾ ಆದಾಯವು ಶೇ 33.4ರಷ್ಟು ಏರಿಕೆಯಾಗಿದೆ. ಇದರಿಂದಾಗಿ ಬಹುತೇಕ ಕುಟುಂಬಗಳು ಅಧಿಕ ಆದಾಯದ ವರ್ಗಕ್ಕೆ ಸೇರ್ಪಡೆಯಾಗಿವೆ. ಈ ಕುಟುಂಬಗಳು 2013–14ರಲ್ಲಿದ್ದಷ್ಟು ದಯನೀಯ ಸ್ಥಿತಿಯಲ್ಲಿ ಈಗ ಇಲ್ಲ’ ಎಂದು ಕೇಂದ್ರವು ತನ್ನ ಅಫಿಡವಿಟ್‌ನಲ್ಲಿ ತಿಳಿಸಿದೆ.

ಉಭಯ ಬಣಗಳ ವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿದೆ.

ಇಡಬ್ಲ್ಯುಎಸ್ ಮೀಸಲಾತಿ ಕುರಿತು ಚರ್ಚೆಗೆ ವಿಪಕ್ಷಗಳ ಒತ್ತಾಯ

ಸಂಸತ್ ಅಧಿವೇಶನ ಇಂದಿನಿಂದ

ನವದೆಹಲಿ (ಪಿಟಿಐ): ಬೆಲೆ ಏರಿಕೆ, ನಿರುದ್ಯೋಗ, ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಮೀಸಲಾತಿ ಮತ್ತು ಭಾರತ–ಚೀನಾ ಗಡಿ ಸಂಘರ್ಷ ಕುರಿತು ಬುಧವಾರ ಆರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ನಡೆಸಲು ವಿರೋಧ ಪಕ್ಷಗಳು ಸಿದ್ಧತೆ ನಡೆಸಿವೆ. ಈ ಅಧಿವೇಶನದಲ್ಲಿ ಈ ವಿಚಾರಗಳನ್ನು ಚರ್ಚೆಗೆ ಎತ್ತಿಕೊಳ್ಳಬೇಕು ಎಂದು ವಿರೋಧ ಪಕ್ಷಗಳು ಮಂಗಳವಾರ ನಡೆದ ಸರ್ವಪಕ್ಷ ಸಭೆಯಲ್ಲಿ ಹೇಳಿವೆ.

ಸಂಸತ್ತಿನ ನೀತಿ–ನಿಯಮಗಳಿಗನುಸಾರವಾಗಿ ಈ ವಿಷಯಗಳ ಚರ್ಚೆಗೆ ಅವಕಾಶ ಮಾಡಿಕೊಡಲಾಗುತ್ತದೆ. ಎಲ್ಲಾ ಪಕ್ಷಗಳು ಸಹಕಾರ ನೀಡಬೇಕು ಎಂದು ಸರ್ಕಾರವು ಸರ್ವಪಕ್ಷಗಳ ಸಭೆಯಲ್ಲಿ ಕೋರಿದೆ. 30ಕ್ಕೂ ಹೆಚ್ಚು ಪಕ್ಷಗಳು ಈ ಸಭೆಯಲ್ಲಿ ಭಾಗಿಯಾಗಿದ್ದವು.

ಮಹಿಳಾ ಮೀಸಲಾತಿ ಮಸೂದೆಯನ್ನು ಈ ಅಧಿವೇಶನದಲ್ಲಿ ಅಂಗೀಕರಿಸಬೇಕು ಎಂದು ಬಿಜೆಡಿ ಹೇಳಿದೆ. ಜನಸಂಖ್ಯಾ ನಿಯಂತ್ರಣ ಮಸೂದೆಯನ್ನು ಅಂಗೀಕರಿಸಬೇಕು ಎಂದು ಶಿವಸೇನಾ (ಏಕನಾಥ ಶಿಂದೆ ಬಣ) ಒತ್ತಾಯಿಸಿದೆ.

ಸಭೆಯಲ್ಲಿ ಭಾಗಿಯಾಗಿದ್ದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಈ ಅಧಿವೇಶನದಲ್ಲಿ ಮಂಡಿಸಲು ಸಿದ್ಧಮಾಡಿಕೊಂಡಿರುವ ಮಸೂದೆಗಳ ಪಟ್ಟಿಯನ್ನು ಸಭೆಯ ಮುಂದಿಟ್ಟರು. ಆಗ, ಲೋಕಸಭೆಯಲ್ಲಿನ ಕಾಂಗ್ರೆಸ್ ನಾಯಕ ಅಧಿರ್ ರಂಜನ್ ಚೌಧರಿ ಅವರು, ಬೆಲೆ ಏರಿಕೆ, ನಿರುದ್ಯೋಗ ಮತ್ತು ತನಿಖಾ ಸಂಸ್ಥೆಗಳ ದುರ್ಬಳಕೆಯ ವಿಚಾರಗಳನ್ನು ಚರ್ಚೆಗೆ ಎತ್ತಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಜತೆಗೆ, ಭಾರತ–ಚೀನಾ ಗಡಿ ಸಂಘರ್ಷದ ಬಗ್ಗೆ ಸರ್ಕಾರವು ನಿಖರವಾದ ಮಾಹಿತಿ ನೀಡುತ್ತಿಲ್ಲ. ಹೀಗಾಗಿ ಈ ವಿಚಾರದ ಬಗ್ಗೆ ಸದನದಲ್ಲಿ ವಿಸ್ತೃವಾದ ಚರ್ಚೆ ನಡೆಯಬೇಕು. ಕಾಶ್ಮೀರಿ ಪಂಡಿತರ ಹತ್ಯೆ ಕುರಿತೂ ಚರ್ಚೆ ನಡೆಯಬೇಕು’ ಎಂದು ಒತ್ತಾಯಿಸಿದರು.



ಸರ್ವಪಕ್ಷ ಸಭೆಯ ನಂತರ ಸಂಸದೀಯ ಸಚಿವ ಪ್ರಲ್ಹಾದ ಜೋಶಿ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಸಚಿವ ಪೀಯೂಷ್ ಗೋಯಲ್ ಇದ್ದರು – ಪಿಟಿಐ ಚಿತ್ರ

ಮುಖ್ಯಾಂಶಗಳು

- ಚರ್ಚಿಸಲು 17 ವಿಷಯಗಳನ್ನು ಮುಂದಿಟ್ಟ ವಿಪಕ್ಷಗಳು
- ಮತದಾರರ ಪಟ್ಟಿ ಪರಿಷ್ಕರಣೆ ಅಕ್ರಮ ಕುರಿತು ಚರ್ಚೆಗೆ ಆಗ್ರಹ

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸುವ ಮತ್ತು ಹಳೆಯ ಪಿಂಚಣಿ ವ್ಯವಸ್ಥೆ ಮರುಜಾರಿ ಮಾಡುವ ಬಗ್ಗೆ ಚರ್ಚೆ ನಡೆಯಬೇಕು
ಸಂಜಯ್ ಸಿಂಗ್, ಎಎಪಿ ಸಂಸದ

ಒಂದೇ ದಿನದ ಅವಧಿಯಲ್ಲಿ ಚುನಾವಣಾ ಆಯುಕ್ತರ ನೇಮಕ ಮತ್ತು ಇಡಬ್ಲ್ಯುಎಸ್ ಮೀಸಲಾತಿ ಕುರಿತು ಸದನದಲ್ಲಿ ಚರ್ಚೆ ನಡೆಯಬೇಕು
ನಾಸಿರ್ ಹುಸೇನ್, ಕಾಂಗ್ರೆಸ್ ಸಂಸದ

ದೆಹಲಿ ಏಮ್ಸ್ ಸೇರಿದಂತೆ ದೇಶದ ಪ್ರಮುಖ ಆಸ್ಪತ್ರೆಗಳ ಮೇಲೆ ಸೈಬರ್ ದಾಳಿ ನಡೆದಿದೆ. ಈ ದಾಳಿಗಳ ಹಿಂದಿನ ಕಾರಣ ಮತ್ತು ಉದ್ದೇಶ ಹಾಗೂ ವೈಫಲ್ಯಗಳನ್ನೂ ಚರ್ಚಿಸಬೇಕು
ಕಾಂಗ್ರೆಸ್

ವಿಪಕ್ಷಗಳ ಬೇಡಿಕೆಗಳನ್ನು ಪಟ್ಟಿಮಾಡಿಕೊಂಡಿದ್ದೇವೆ. ನಿಯಮಾನುಸಾರ ಈ ವಿಷಯಗಳನ್ನು ಕಲಾಪದ ಪಟ್ಟಿಯಲ್ಲಿ ಸೇರಿಸಲಾಗುತ್ತದೆ
ಪ್ರಲ್ಹಾದ ಜೋಶಿ, ಸಂಸದೀಯ ವ್ಯವಹಾರಗಳ ಸಚಿವ

ಸಂಕ್ಷಿಪ್ತ ಸುದ್ದಿ

‘ಜಾಲತಾಣಗಳಲ್ಲಿನ ನಕಲಿ ಪ್ರಚಾರವೇ ಸವಾಲು’

ನವದೆಹಲಿ (ಪಿಟಿಐ): ‘ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚುತ್ತಿರುವ ಸುಳ್ಳು ಪ್ರಚಾರ ಕಾರ್ಯಗಳು ನ್ಯಾಯಸಮ್ಮತವಾಗಿ ಚುನಾವಣೆ ನಡೆಸುವುದರ ಮೇಲೂ ಪರಿಣಾಮ ಬೀರುತ್ತಿವೆ’ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಹೇಳಿದ್ದಾರೆ.

ಜರ್ಮನಿ ವಿದೇಶಾಂಗ ಸಚಿವೆ ಅನ್ನಲೀನಾ ಬೇರ್ಬಾಕ್ ನೇತೃತ್ವದ ನಿಯೋಗವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಈ ಪ್ರವೃತ್ತಿ ಚುನಾವಣೆ ನಿರ್ವಹಣೆ ಕುರಿತು ಯಾವುದೇ ಸಂಸ್ಥೆಗೆ ಸಾಮಾನ್ಯ ಸವಾಲಾಗಿದೆ’ ಎಂದಿದ್ದಾರು.

ನಿಯೋಗಕ್ಕೆ ಭಾರತದ ಚುನಾವಣಾ ವ್ಯವಸ್ಥೆಯ ಚಿತ್ರಣವನ್ನು ರಾಜೀವ್‌ಕುಮಾರ್ ನೀಡಿದರು.

ಚುನಾವಣಾ ಆಯೋಗವು ಈ ಕುರಿತ ಹೇಳಿಕೆಯಲ್ಲಿ ‘ಸಾಗಣೆ, ಸಂಚಾರದ ಸವಾಲಿನ ಜೊತೆಗೆ ಜಾಲತಾಣಗಳಲ್ಲಿ ನಡೆಯುವ ನಕಲಿ ಪ್ರಚಾರಗಳು ಆಯೋಗಕ್ಕೆ ಇತ್ತೀಚೆಗೆ ಎದುರಾಗುತ್ತಿರುವ ಸಾಮಾನ್ಯ ಸವಾಲಾಗಿವೆ ಎಂದು ಆಯುಕ್ತರು ತಿಳಿಸಿದರು’ ಎಂದಿದೆ.

ವಿದ್ಯುನ್ಮಾನ ಮತಯಂತ್ರದ ಬಳಕೆ ಕುರಿತು ನಿಯೋಗಕ್ಕೆ ಪ್ರಾತ್ಯಕ್ಷಿಕೆ ನೀಡಲಾಯಿತು.

ನ್ಯಾಯಾಂಗ ನಿಂದನೆ ಅಗ್ನಿಹೋತ್ರಿ ಕ್ಷಮೆ

ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಎಸ್. ಮುರಳೀಧರ್ (ಪ್ರಸ್ತುತ ಒರಿಸ್ಸಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ) ಅವರನ್ನು ಟೀಕಿಸಿ ಹೇಳಿಕೆ ನೀಡಿದ್ದ ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಮಂಗಳವಾರ ದೆಹಲಿ ಹೈಕೋರ್ಟ್‌ನ ಕ್ಷಮೆಯಾಚಿಸಿದ್ದಾರೆ.

ಅಗ್ನಿಹೋತ್ರಿ ಪ್ರಮಾಣ ಪತ್ರದ ಮೂಲಕ ಬೇಷರತ್ ಕ್ಷಮೆಯಾಚಿಸಿದ್ದರು. ಇದಕ್ಕೆ ಅಸಮಾಧಾನ ಸೂಚಿಸಿದ ನ್ಯಾಯಮೂರ್ತಿಗಳಾದ ಸಿದ್ಧಾರ್ಥ್ ಮೃದುಲ್ ಮತ್ತು ತಲ್ವಂತ್ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠವು, ‘ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಆಪಾದಿತರು ನ್ಯಾಯಾಲಯದಲ್ಲಿ ಹಾಜರಿರುವಂತೆ ಸೂಚಿಸುತ್ತಿದ್ದೇವೆ. ಖುದ್ದು ಹಾಜರಾಗಿ ಪಶ್ಚಾತ್ತಾಪ ವ್ಯಕ್ತಪಡಿಸಲು ಅವರಿಗೇನಾದರೂ ತೊಂದರೆ ಇದೆಯೇ? ಪಶ್ಚಾತ್ತಾಪವನ್ನು ಯಾವಾಗಲೂ ಪ್ರಮಾಣ ಪತ್ರದ ಮೂಲಕ ವ್ಯಕ್ತಪಡಿಸಲಾಗದು’ ಎಂದು ಕಿಡಿಕಾರಿತು.

ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಾಖಾ ಅವರಿಗೆ ನ್ಯಾಯಮೂರ್ತಿ ಮುರಳೀಧರ್ ಅವರು ಜಾಮೀನು ನೀಡುವ ಮೂಲಕ ಪಕ್ಷಪಾತ ಎಸಗಿದ್ದಾರೆ ಎಂದು ವಿವೇಕ್ ಅಗ್ನಿಹೋತ್ರಿ ಟ್ವೀಟ್ ಮಾಡಿದ್ದರು. ಈ ಸಂಬಂಧ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಾಗಿತ್ತು.

‘ಹೆಲಿಕಾಪ್ಟರ್ ಹಗರಣ: ಜೇಮ್ಸ್ ಎಲ್ಲಿವರೆಗೆ ಇರಿಸಿಕೊಳ್ಳುತ್ತೀರಿ?’

ನವದೆಹಲಿ (ಪಿಟಿಐ): ಅತೀ ಗಣ್ಯರ ಪ್ರಯಾಣದ ಅಗಸ್ಟಾವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಖರೀದಿ ಹಗರಣದಲ್ಲಿ ಮಧ್ಯವರ್ತಿ ಆರೋಪಿ ಕ್ರಿಶ್ಚಿಯನ್ ಮಿಷೆಲ್ ಜೇಮ್ಸ್‌ನನ್ನು ಎಲ್ಲಿಯವರೆಗೆ ವಶದಲ್ಲಿರಿಸಿಕೊಳ್ಳುತ್ತೀರಿ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠವು,‘ಆತ ಭಾರತೀಯ ಪ್ರಜೆಯಲ್ಲವೆಂಬ ಕಾರಣಕ್ಕೆ ಇದು ಸಮರ್ಥನೀಯವಲ್ಲ, ಇದು ಆತನ ಸಂಪೂರ್ಣ ಸ್ವಾತಂತ್ರ್ಯದ ಹರಣವಲ್ಲವೇ’ ಎಂದು ಸಿಬಿಐ ಮತ್ತು ಇ.ಡಿ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್. ವಿ. ರಾಜು ಅವರನ್ನು ಪ್ರಶ್ನಿಸಿತು.

‘ಆರೋಪಿ ಭಾರತೀಯನಾಗಿದ್ದು, ಗರಿಷ್ಠ ಐದು ವರ್ಷ ಶಿಕ್ಷೆ ವಿಧಿಸಬಹುದಾದ ಅಪರಾಧ ಆತನ ಮೇಲಿದ್ದು, ನಾಲ್ಕು ವರ್ಷಗಳಿಗಿಂತ ಹೆಚ್ಚು ಕಾಲ ಆತ ಬಂಧನದಲ್ಲಿದ್ದರೆ ಜಾಮೀನು ನೀಡಲಾಗುತ್ತಿತ್ತು’ ಎಂದು ಪೀಠ ಹೇಳಿದೆ.

ಬಿಜೆಪಿ ಕಚೇರಿಯತ್ತ ರಾಹುಲ್ ಗಾಂಧಿ ಫ್ಲೈಯಿಂಗ್ ಕಿಸ್!

ಝಾಲವಾಡ (ರಾಜಸ್ಥಾನ) (ಪಿಟಿಐ): ‘ಭಾರತ್ ಜೋಡೊ ಯಾತ್ರೆ’ಯನ್ನು ಇಲ್ಲಿನ ಬಿಜೆಪಿ ಕಚೇರಿ ಕಟ್ಟಡದ ತಾರಸಿ ಮೇಲೆ ನಿಂತು ನೋಡುತ್ತಿದ್ದವರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಗಾಳಿಯಲ್ಲಿ ಮುತ್ತು ತೇಲಿಬಿಟ್ಟು (ಫ್ಲೈಯಿಂಗ್ ಕಿಸ್) ಗಮನ ಸೆಳೆದರು.

ಬಿಜೆಪಿ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರನ್ನು ಗುರಿಯಾಗಿಸಿಕೊಂಡು, ಅವರೇಕೆ ‘ಜೈ ಶ್ರೀರಾಮ್’ ಮತ್ತು ‘ಹೇ ರಾಮ್’ ಎಂದು ಘೋಷಣೆ ಕೂಗುತ್ತಿಲ್ಲವೆಂದು ಪ್ರಶ್ನಿಸಿದ್ದ ರಾಹುಲ್ ಅವರು ಮರು ದಿನ ಈ ರೀತಿ ಪ್ರತಿಕ್ರಿಯಿಸಿದರು.

ಯಾತ್ರೆಯನ್ನು ಸೋಮವಾರ ರಾತ್ರಿ ಖೇಲ್ ಸಂಕುಲ್‌ನಲ್ಲಿ ಕೊನೆಗೊಳಿಸಲಾಗಿತ್ತು. ಬೆಳಿಗ್ಗೆ ಇಲ್ಲಿಂದಲೇ ಯಾತ್ರೆಯನ್ನು ಪುನರಾರಂಭಿಸಲಾಯಿತು. ರಾಹುಲ್ ಜತೆಗೆ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್, ಪಕ್ಷದ ರಾಜ್ಯ ಘಟಕ ಅಧ್ಯಕ್ಷ ಗೋವಿಂದ್ ಸಿಂಗ್ ದೋತಾಸ್ರ ಪಾಲ್ಗೊಂಡರು.

ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್

ಪವನ್ ಧನಂಜಯ್, ಅದಿತಿ ಮಿಂಚು

ಪ್ರಜಾವಾಣಿ ವಾರ್ತೆ

ಮಂಡ್ಯ: ಬಸವನಗುಡಿ ಈಜುಕೇಂದ್ರದ ಪವನ್ ಧನಂಜಯ ಮತ್ತು ಅದಿತಿ ಎನ್.ಎಂ, ಇಲ್ಲಿ ಆರಂಭವಾದ ಕರ್ನಾಟಕ ರಾಜ್ಯ ಈಜು ಸಂಸ್ಥೆ ಆಶ್ರಯದ ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಗಮನ ಸೆಳೆದರು.

ಪಿಇಟಿ ಈಜು ಕೇಂದ್ರದಲ್ಲಿ ಮಂಗಳವಾರ ನಡೆದ ಬಾಲಕರ ಗುಂಪು 1ರ 1,500 ಮೀ.ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಪವನ್ ಅಗ್ರಸ್ಥಾನ ಪಡೆದರು. ಬಾಲಕಿಯರ ಇದೇ ವಿಭಾಗದ ಸ್ಪರ್ಧೆಯಲ್ಲಿ ಅದಿತಿ ಅವರು ಮೊದಲಿಗರಾಗಿ ಗುರಿ ತಲುಪಿದರು.

ಮೊದಲ ದಿನದ ಫಲಿತಾಂಶ: ಬಾಲಕರ ವಿಭಾಗ: ಗುಂಪು 1: 1,500 ಮೀ. ಫ್ರೀಸ್ಟೈಲ್: ಪವನ್ ಧನಂಜಯ (ಬಿಎಸಿ, ಕಾಲ: 16 ನಿ. 32.26 ಸೆ.)–1, ಸಾಹಿಲ್ ದಲಾಲ್ (ಬಿಎಸಿ)–2, ಅನಿಕೇತ್ ಭಟ್ (ಡಾಲ್ಫಿನ್ ಅಕ್ವಟಿಕ್ ಸೆಂಟರ್)–3.

400 ಮೀ. ಫ್ರೀಸ್ಟೈಲ್: ಪವನ್ ಧನಂಜಯ (ಬಿಎಸಿ, ಕಾಲ: 4 ನಿ. 14.78 ಸೆ.)–1, ಸಂಜಿತ್ ಜೆ. (ಬಿಎಸಿ)–2, ಸಾಹಿಲ್ ದಲಾಲ್ (ಬಿಎಸಿ)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಬಾಸಿತ್ ಅಹಮದ್ (ಬಿಎಸ್‌ಸಿ ಎಂಇಜಿ, 1 ನಿ. 6.15 ಸೆ.)–1, ಸೂರ್ಯ ಜೋಯಪ್ಪ (ಬಿಎಸಿ)–2, ಸುಯೋಗ್ ಎಲ್.ಗೌಡ (ನೆಟ್ಟಕಲ್ಲಪ್ಪ ಈಜು ಕೇಂದ್ರ)–3. 200 ಮೀ. ಬಟರ್‌ಫ್ಲೈ: ನೀಲೇಶ್ ದಾಸ್ (ಬಿಎಸಿ, ಕಾಲ: 2 ನಿ. 12.48 ಸೆ.)–1, ಶ್ರೇಯಸ್ ವೆಂಕಟೇಶ್ (ಬಿಎಸಿ)–2, ಆದಿತ್ಯ ಪ್ರಭು (ಬಿಎಸಿ)–3. ಗುಂಪು 2: 1,500 ಮೀ. ಫ್ರೀಸ್ಟೈಲ್: ರೇಣುಕಾಚಾರ್ಯ ಹಾದಿಮನಿ (ಬಿಎಸಿ, 16 ನಿ. 59.43 ಸೆ.)–1, ಎಸ್.ದಕ್ಷಣ್ (ಬಿಎಸಿ)–2, ಆಯುಷ್ ಕಣ್ಣನ್ ದತ್ತಾ (ಡಾಲ್ಫಿನ್)–3. 400 ಮೀ. ಫ್ರೀಸ್ಟೈಲ್: ದಕ್ಷಣ್ ಎಸ್. (4 ನಿ. 19.54 ಸೆ.)–1, ರೇಣುಕಾಚಾರ್ಯ–2, ಯಶ್‌ರಾಜ್ ಎಸ್. (ಡಾಲ್ಫಿನ್)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ವಿಶಾಖನ್ ಸರವಣನ್ (ಬಿಎಸಿ, 1 ನಿ.11.78)–1, ರಾಘವ್ ಸ್ವಚ್ಛಂದಮ್ (ನೆಟ್ಟಕಲ್ಲಪ್ಪ ಈಜು ಕೇಂದ್ರ)–2, ಅನ್ಮುಲ್ ಕುಮಾರ್ ನಿಶಾದ್ (ಬಿಎಸ್‌ಇ ಎಂಇಜಿ)–3. 200 ಮೀ. ಬಟರ್‌ಫ್ಲೈ: ಅಕ್ಷಜ್ ಠಾಕೂರಿಯಾ (ಡಾಲ್ಫಿನ್, 2 ನಿ. 15.11 ಸೆ.)–1, ಆರ್ಯನ್ ಪಾಟೀಲ್ (ಅಬಾ ಸ್ಪೋರ್ಟ್ಸ್ ಕ್ಲಬ್)–2, ತನವ್ ಭಾರದ್ವಾಜ್ (ಬಿಎಸಿ)–3

ಬಾಲಕಿಯರ ವಿಭಾಗ: ಗುಂಪು 1: 1,500 ಫ್ರೀಸ್ಟೈಲ್: ಅದಿತಿ ಎನ್.ಎಂ. (ಬಿಎಸಿ, ಕಾಲ: 18 ನಿ. .46 ಸೆ.)–1, ಸಿಂಥಿಯಾ ಚೌಧರಿ (ಬಿಎಸಿ)–2, ಸಿಂಧು (ಬಿಎಸಿ)–3. 400 ಮೀ. ಫ್ರೀಸ್ಟೈಲ್: ಅದಿತಿ ಎನ್. (ಕಾಲ: 4 ನಿ. 39.71 ಸೆ.)–1, ಸಿಂಥಿಯಾ ಚೌಧರಿ–2, ಆಶ್ನಾ ಎ. ಎಂ. (ಬಿಎಸಿ)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಮೇಘಾಂಜಲಿ (ಗ್ಲೋಬಲ್ ಸ್ವಿಮ್ ಸೆಂಟರ್, ಕಾಲ: 1 ನಿ. 18.66 ಸೆ.)–1, ಹಿತೈಶಿ ವಿ. (ವಿಜಯನಗರ ಈಜು ಕೇಂದ್ರ)–2, ಆರಾಧನಾ (ಡಾಲ್ಫಿನ್)–3. 200 ಮೀ. ಬಟರ್‌ಫ್ಲೈ: ಸಿಂಥಿಯಾ ಚೌಧರಿ (ಕಾಲ: 2 ನಿ. 31.15 ಸೆ.)–1, ಅದಿತಿ ಎನ್.ಎಂ.–2, ಸಿಂಧು– 3

ಗುಂಪು2: 1,500 ಮೀ. ಫ್ರೀಸ್ಟೈಲ್: ಚಾರಣಿ ತುಮು (ಗ್ಲೋಬಲ್ ಸ್ವಿಮ್ ಸೆಂಟರ್, ಕಾಲ: 18 ನಿ. 19.07 ಸೆ.)–1, ತನಿಷಾ ವಿನಯ್ (ಬಿಎಸಿ)–2, ಸಬಾ ಸುಹಾನಾ (ಡಾಲ್ಫಿನ್)–3. 400 ಮೀ. ಫ್ರೀಸ್ಟೈಲ್: ಆರ್ನ ಎಂ.ಪಿ. (ಬಿಎಸಿ, ಕಾಲ: 4 ನಿ. 36.64 ಸೆ.)–1, ನೈಶಾ (ಬಿಎಸಿ)–2, ಚಾರಣಿ–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ರಿಯಾನಾ ಧೃತಿ ಫೆರ್ನಾಂಡಿಸ್ (ಡಾಲ್ಫಿನ್, ಕಾಲ: 1 ನಿ. 16.63 ಸೆ.)–1, ತಾನ್ಯಾ ಎಸ್. (ಡಾಲ್ಫಿನ್)–2, ಹಿಯಾ ಮಂಚಂಡ (ಡಾಲ್ಫಿನ್)–3. 200 ಮೀ. ಬಟರ್‌ಫ್ಲೈ: ಸುಹಾಸಿನಿ ಘೋಷ್ (ಡಾಲ್ಫಿನ್; ಕಾಲ: 2 ನಿ. 25.18 ಸೆ.)–1, ತನಿಷಾ–2, ಸಬಾ–3



ಈಜು ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಗಳು ಈಜಲು ಸಜ್ಜಾದ ಕ್ಷಣ

ಪ್ರೊ ಕಬಡ್ಡಿ ಲೀಗ್: ಡೆಲ್ಲಿಗೆ ಜಯ

ಹೈದರಾಬಾದ್ (ಪಿಟಿಐ): ದಬಾಂಗ್ ಡೆಲ್ಲಿ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಗೆದ್ದಿತು. ಗಚಿಬೌಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ದಬಾಂಗ್ 41–24ರಲ್ಲಿ ಯು ಮುಂಬಾ ತಂಡವನ್ನು ಮಣಿಸಿತು. ದಬಾಂಗ್ ತಂಡದ ಅಮಿತ್ ಏಳು ಪಾಯಿಂಟ್ಸ್ ಗಳಿಸಿದರು. ದಿನದ ಎರಡನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 44–30 ರಲ್ಲಿ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯಗಳು: ಪಟ್ನಾ ಪೈರೇಟ್ಸ್–ಬೆಂಗಳೂರು ಬುಲ್ಸ್. ತಮಿಳ್ ತಲೈವಾಸ್– ಯು.ಪಿ. ಯೋಧಾಸ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಜೈಪುರ	21	15	6	0	79
ಪುಣೇರಿ	21	14	5	2	79
ಬೆಂಗಳೂರು	20	12	7	1	68
ಯುಪಿ	20	11	7	2	66
ತಲೈವಾಸ್	20	9	7	4	61
ಡೆಲ್ಲಿ	21	10	10	1	60

ಬ್ಯಾಡ್ಮಿಂಟನ್: ಪ್ರಣಯ್ ಮೇಲೆ ಭರವಸೆ

ಬ್ಯಾಂಕಾಕ್ (ಪಿಟಿಐ): ಪ್ರತಿಭಾನ್ವಿತ ಆಟಗಾರ ಎಚ್.ಎಸ್. ಪ್ರಣಯ್ ಬುಧವಾರದಿಂದ ಆರಂಭವಾಗಲಿರುವ ವಿಶ್ವ ಬ್ಯಾಡ್ಮಿಂಟನ್ ಟೂರ್ ಫೈನಲ್ಸ್‌ನಲ್ಲಿ ಭಾರತದ ಭರವಸೆಯಾಗಿದ್ದಾರೆ.

ಒಲಿಂಪಿಯನ್ ಪಿ.ವಿ. ಸಿಂಧು ಅವರು ಗಾಯಗೊಂಡಿರುವುದರಿಂದ ಈ ಟೂರ್ನಿಯಲ್ಲಿ ಆಡುತ್ತಿಲ್ಲ.

ಅಂತರ ವಿವಿ ಕಬಡ್ಡಿ ಇಂದಿನಿಂದ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಹಯೋಗದಲ್ಲಿ ದಕ್ಷಿಣ ವಲಯ ಅಂತರ ವಿವಿ ಪುರುಷರ ಕಬಡ್ಡಿ ಚಾಂಪಿಯನ್‌ಷಿಪ್ ಡಿ. 7ರಿಂದ ನಡೆಯಲಿದೆ. ಕೋರಮಂಗಲದ ಸೇಂಟ್ ಫ್ರಾನ್ಸಿಸ್ ಕಾಲೇಜಿನಲ್ಲಿ ಡಿ. 10ರವರೆಗೆ ಕಬಡ್ಡಿ ಚಾಂಪಿಯನ್‌ಷಿಪ್‌ಅನ್ನು ಆಯೋಜಿಸಲಿದೆ ಎಂದು ಬೆಂಗಳೂರು ವಿವಿ ರೆಜಿಸ್ಟ್ರಾರ್ ಸಿ.ಎನ್. ಶ್ರೀಧರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

11ರಿಂದ ಹಾಕಿ: ಅಂತರ ವಿವಿ ಪುರುಷರ ಹಾಕಿ ಚಾಂಪಿಯನ್‌ಷಿಪ್ ಡಿ. 11ರಿಂದ ಅಕ್ಕಿತಿಮ್ಮನಹಳ್ಳಿಯ ಕರ್ನಾಟಕ ಹಾಕಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಎನ್‌ಸಿಎಗೆ ರಮೇಶ್ ಪೊವಾರ್



ರಮೇಶ್

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಮೇಶ್ ಪೊವಾರ್ ಅವರನ್ನು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಗೆ 'ವರ್ಗಾವಣೆ' ಮಾಡಿದೆ.

ಇನ್ನೆರಡು ತಿಂಗಳುಗಳ ನಂತರ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಮಹಿಳಾ ತಂಡಕ್ಕೆ ಮುಖ್ಯ ಕೋಚ್ ಸ್ಥಾನಕ್ಕೆ ಯಾರನ್ನೂ ಹೆಸರಿಸಿಲ್ಲ. ಆದರೆ, ಮಾಜಿ ಕ್ರಿಕೆಟಿಗ ಹೃಷಿಕೇಶ್ ಕಾನಿಟ್ಕರ್ ಅವರನ್ನು ಬ್ಯಾಟಿಂಗ್ ಕೋಚ್ ಆಗಿ ನೇಮಕ ಮಾಡಲಾಗಿದೆ.

'ರಮೇಶ್ ಪೊವಾರ್ ಅವರು ಎನ್‌ಸಿಎನಲ್ಲಿ ಸ್ಪಿನ್ ಬೌಲಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸುವರು. ಅಕಾಡೆಮಿಯ ಸಿಬ್ಬಂದಿ ಮರುರಚನೆ ಯೋಜನೆ ಮಾಡಲಾಗಿದೆ.' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಣಕ್ಕಿಳಿಯಲಿದ್ದಾರೆ ವೃಂದಾ, ಜನನಿ ಹಾಗೂ ಗಾಯತ್ರಿ

ರಣಜಿಗೆ ಮಹಿಳಾ ಅಂಪೈರ್‌ಗಳು

ನವದೆಹಲಿ(ಪಿಟಿಐ): ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಮಹಿಳಾ ಅಂಪೈರ್‌ಗಳು ಕಾರ್ಯನಿರ್ವಹಿಸಲಿದ್ದಾರೆ.

ವೃಂದಾ ರಾಠಿ, ಜನನಿ ನಾರಾಯಣ ಮತ್ತು ಗಾಯತ್ರಿ ವೇಣುಗೋಪಾಲನ್ ಅವರು ಕಾರ್ಯನಿರ್ವಹಿಸುವರು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮಂಗಳವಾರ ತಿಳಿಸಿದೆ.

ಚೆನ್ನೈನ ಜನನಿ ಹಾಗೂ ಮುಂಬೈನ ವೃಂದಾ ಅವರು 2018ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಡೆವಲಪ್‌ಮೆಂಟ್ ಅಂಪೈರ್ ಪ್ಯಾನೆಲ್‌ಗೆ ಸೇರ್ಪಡೆಯಾಗಿದ್ದರು. ದೆಹಲಿಯ ಗಾಯತ್ರಿ ಅವರು ಬಿಸಿಸಿಐ ಪ್ಯಾನೆಲ್‌ನಲ್ಲಿದ್ದಾರೆ.

32 ವರ್ಷದ ವೃಂದಾ ಮುಂಬೈನಲ್ಲಿ ಕ್ರಿಕೆಟ್ ಆಡುತ್ತ ಬೆಳೆದವರು. ಅಲ್ಲಿಯ ಪಂದ್ಯಗಳಲ್ಲಿಯೇ ಅಂಪೈರಿಂಗ್ ಆರಂಭಿಸಿದರು. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ 36 ವರ್ಷದ ಜನನಿ ಅವರು ಅಂಪೈರಿಂಗ್‌ಗಾಗಿ ಉತ್ತಮ ಸಂಬಳ ಪಡೆಯುತ್ತಿದ್ದ ಉದ್ಯೋಗವನ್ನು ಬಿಟ್ಟಿದ್ದಾರೆ. 43 ವರ್ಷದ ಗಾಯತ್ರಿ ಅವರು 2019ರಲ್ಲಿ ಬಿಸಿಸಿಐ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಂಪೈರಿಂಗ್ ಮಾಡುತ್ತಿದ್ದಾರೆ.

ಟೂರ್ನಿಯ ಕೆಲವು ಪಂದ್ಯಗಳಲ್ಲಿ ಅವರಿಗೆ ಕಾರ್ಯನಿರ್ವಹಿಸುವ ಅವಕಾಶ ಸಿಗುವ ಸಾಧ್ಯತೆ ಇದೆ.

'ಪುರುಷರ ಕ್ರಿಕೆಟ್ ಪಂದ್ಯಗಳಲ್ಲಿ ಮಹಿಳೆಯರು ಅಂಪೈರಿಂಗ್ ಮಾಡುವುದು ಸ್ವಲ್ಪ ಕಠಿಣ ಸವಾಲಾಗಲಿದೆ. ರಣಜಿ ಪಂದ್ಯಗಳಲ್ಲಿ ಸ್ಪರ್ಧೆ ಉನ್ನತಮಟ್ಟದ್ದಾಗಿರುತ್ತದೆ. ಅಲ್ಲದೇ ಪ್ರತಿಯೊಂದು ನಿರ್ಣಯವೂ ಮಹತ್ವದ್ದಾಗಿರುತ್ತದೆ. ಆದ್ದರಿಂದ ಮೃದು ಧೋರಣೆ ಸಲ್ಲದು. ಆಟಗಾರರೊಂದಿಗೆ ಸಮರ್ಥವಾಗಿ ಸಂವಹನ ನಡೆಸುವ ಕಲೆ ಮುಖ್ಯ. ಮೂವರು ಮಹಿಳಾ ಅಂಪೈರ್‌ಗಳೂ ಇಲ್ಲಿಯವರೆಗೆ ತಮಗೆ ಸಿಕ್ಕ ಅವಕಾಶಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ಅವರಿಗೆ ಅನುಭವ ಇದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಪುರುಷರ ಪಂದ್ಯಗಳಲ್ಲಿ ಮಹಿಳಾ ಅಂಪೈರ್‌ಗಳು ಕಾರ್ಯನಿರ್ವಹಿಸಿದ್ದಾರೆ. ಬಿಸಿಸಿಐನಲ್ಲಿ 150 ನೋಂದಾಯಿತ ಅಂಪೈರ್‌ಗಳಲ್ಲಿ ಮೂವರು ಮಹಿಳೆಯರಿದ್ದಾರೆ.

'ಅಂಪೈರಿಂಗ್‌ನಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿಸುವ ಗುರಿ ಇದೆ. ಅದರಲ್ಲೂ ಪುರುಷರ ಕ್ರಿಕೆಟ್‌ನಲ್ಲಿಯೂ ಮಹಿಳಾ ಅಂಪೈರ್‌ಗಳು ಕಾರ್ಯನಿರ್ವಹಿಸುವ ಅವಕಾಶಗಳನ್ನು ಹೆಚ್ಚಿಸುವುದು ನಮ್ಮ ಉದ್ದೇಶ' ಎಂದೂ ಬಿಸಿಸಿಐ ಅಧಿಕಾರಿ ಹೇಳಿದ್ದಾರೆ.

ಈ ಬಾರಿಯ ಟೂರ್ನಿಯು ಡಿಸೆಂಬರ್13ರಿಂದಆರಂಭವಾಗಲಿದೆ.

ಕ್ರಿಕೆಟ್: ಭಾರತ–ಬಾಂಗ್ಲಾದೇಶ ಎರಡನೇ ಪಂದ್ಯ ಇಂದು

ಒತ್ತಡದಲ್ಲಿ ರೋಹಿತ್ ಬಳಗ



ಶಿಖರ್ ಧವನ್ ಮತ್ತು ವಾಷಿಂಗ್ಟನ್ ಸುಂದರ್

ಮೀರ್‌ಪುರ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ಹಾಗೂ ಫೀಲ್ಡಿಂಗ್ ವೈಫಲ್ಯಗಳಿಂದ ಹೊರಬರುವ ಒತ್ತಡದಲ್ಲಿರುವ ಭಾರತ ತಂಡವು ಬುಧವಾರ ಬಾಂಗ್ಲಾದೇಶದ ವಿರುದ್ಧ ಎರಡನೇ ಏಕದಿನ ಪಂದ್ಯ ಆಡಲಿದೆ.

ಮೊದಲ ಪಂದ್ಯದಲ್ಲಿ ಒಂದು ವಿಕೆಟ್ ಅಂತರದಿಂದ ಭಾರತ ತಂಡವು ಸೋತಿತ್ತು. ಬಾಂಗ್ಲಾ ತಂಡದ ಗೆಲುವಿಗೆ ಇನ್ನೂ 50ಕ್ಕೂ ಹೆಚ್ಚು ರನ್‌ಗಳ ಅಗತ್ಯವಿದ್ದಾಗಲೇ 9 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆದರೆ, ಕೊನೆಯ ವಿಕೆಟ್ ಜೊತೆಯಾಟದಲ್ಲಿ ಮೆಹದಿ ಹಸನ್ ಮಿರಾಜ್ ಮತ್ತು ಮುಸ್ತಫಿಜುರ್ ರೆಹಮಾನ್ ತಮ್ಮ ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದರು.

ಅದಕ್ಕೆ ಕಾರಣ ಕೈಬಿಟ್ಟ ಕ್ಯಾಚ್‌ಗಳು ಮತ್ತು ಬೌಲರ್‌ಗಳ ಸತ್ವರಹಿತ ಬೌಲಿಂಗ್ ಕೂಡ ಕಾರಣವಾಗಿತ್ತು. ಆದರೆ, ಆ ಪಂದ್ಯದಲ್ಲಿ ಪ್ರಮುಖವಾಗಿ ಅಗ್ರ ಶ್ರೇಣಿಯ ಬ್ಯಾಟರ್‌ಗಳಾದ ನಾಯಕ ರೋಹಿತ್ ಶರ್ಮಾ, ಶಿಖರ್ ಧವನ್, ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್ ದೊಡ್ಡ ಇನಿಂಗ್ಸ್ ಕಟ್ಟುವಲ್ಲಿ ವಿಫಲರಾಗಿದ್ದರು. ಐದನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದ ಕೆ.ಎಲ್. ರಾಹುಲ್ ಒಬ್ಬರೇ ಅರ್ಧಶತಕ ಗಳಿಸಿದ್ದರು. ರಾಹುಲ್ ಕೀಪಿಂಗ್‌ನಲ್ಲಿ ಮಾಡಿದ ಕೆಲವು ಲೋಪಗಳು ದುಬಾರಿಯಾಗಿದ್ದವು. ಈ ಎಲ್ಲ ತಪ್ಪುಗಳನ್ನು ತಿದ್ದಿಕೊಳ್ಳದಿದ್ದರೆ ಸರಣಿಯನ್ನು ಕೈಚೆಲ್ಲುವ ಆತಂಕ ಭಾರತ ತಂಡಕ್ಕೆ ಇದೆ. ಮೂರು ಪಂದ್ಯಗಳ ಸರಣಿಯ 2ನೇ ಪಂದ್ಯ ಭಾರತ ಜಯಿಸಿದರೆ ಮಾತ್ರ ಸರಣಿ ಜಯದ ಆಸೆ ಜೀವಂತವಾಗುಳಿಯಲಿದೆ. 2015ರಲ್ಲಿ ಮಹೇಂದ್ರಸಿಂಗ್ ಧೋನಿ ಬಳಗವು 1–2ರಿಂದ ಏಕದಿನ ಸರಣಿಯನ್ನು ಬಾಂಗ್ಲಾದಲ್ಲಿ ಸೋತಿತ್ತು. ಆತಿಥೇಯ ತಂಡದ ಆಲ್‌ರೌಂಡರ್ ಶಕೀಬ್ ಅಲ್ ಹಸನ್, ಮಿರಾಜ್, ಲಿಟನ್ ದಾಸ್ ಮತ್ತು ಬೌಲಿಂಗ್‌ನಲ್ಲಿ ಮುಸ್ತಫಿಜುರ್ ರೆಹಮಾನ್ ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 11.30
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಸಂಕ್ಷಿಪ್ತ ಸುದ್ದಿ

ಪ್ಯಾರಾ ಬ್ಯಾಡ್ಮಿಂಟನ್: ಮಂದೀಪ್, ನೇಹಲ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಮಂದೀಪ್ ಕೌರ್ ಮತ್ತು ನೇಹಲ್ ಗುಪ್ತಾ ಅವರು ಪೆರುವಿನ ಲಿಮಾದಲ್ಲಿ ನಡೆದ ಪೆರು ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಿನ್ನ ಗೆದ್ದರು.

ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಮಂದೀಪ್ ಅವರು 21–11, 21–11 ರಲ್ಲಿ ವಿಶ್ವ ಉಕ್ರೇನ್‌ನ ಆಟಗಾರ್ತಿ ವಿಶ್ವ ಚಾಂಪಿಯನ್ ಆಗಿರುವ ಒಕ್ಸಾನಾ ಕೊಜಿನಾ ಅವರಿಗೆ ಆಘಾತ ನೀಡಿದರು.

ನೇಹಲ್ ಅವರು ಪುರುಷರ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದಲ್ಲಿ ಚಿನ್ನ ಗೆದ್ದರು.

ಆದಿತ್ಯ ಮಿತ್ತಲ್ ಭಾರತದ 77ನೇ ಜಿಎಂ

ಚೆನ್ನೈ (ಪಿಟಿಐ): ಮುಂಬೈನ ಆದಿತ್ಯ ಮಿತ್ತಲ್ ಅವರು ಭಾರತದ 77ನೇ ಚೆಸ್ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡರು. 16 ವರ್ಷದ ಅವರು ಸ್ಪೇನ್‌ನಲ್ಲಿ ನಡೆಯುತ್ತಿರುವ ಎಲೊಬ್ರೆಗಟ್ ಓಪನ್ ಟೂರ್ನಿಯ ವೇಳೆ ಈ ಸಾಧನೆ ಮಾಡಿದರು. ಮೂರು ಜಿಎಂ ನಾರ್ಮ್‌ಗಳನ್ನು ಪಡೆದಿದ್ದ ಆದಿತ್ಯ, ಎಲೊಬ್ರೆಗಟ್ ಟೂರ್ನಿಯ ಆರನೇ ಸುತ್ತಿನ ಬಳಿಕ 2,500 ಎಲೊ ಪಾಯಿಂಟ್ಸ್ ಗಡಿ ತಲುಪಲು ಯಶಸ್ವಿಯಾದರು. ಆರನೇ ಸುತ್ತಿನಲ್ಲಿ ಅವರು ಸ್ಪೇನ್‌ನ ಅಗ್ರ ರ‍್ಯಾಂಕ್‌ನ ಆಟಗಾರ ಫ್ರಾನ್ಸಿಸ್ಕೊ ವಲೆಜೊ ಜತೆ ಡ್ರಾ ಸಾಧಿಸಿದರು.

ಮಿತ್ತಲ್ ತಮ್ಮ ಚೊಚ್ಚಲ ಜಿಎಂ ನಾರ್ಮ್‌ಅನ್ನು 2021ರ ಸರ್ಬಿಯಾ ಮಾಸ್ಟರ್ಸ್ ಟೂರ್ನಿಯ ವೇಳೆ ಗಳಿಸಿದ್ದರು. 2021ರ ಎಲೊಬ್ರೆಗಟ್ ಓಪನ್ ಟೂರ್ನಿಯಲ್ಲಿ ಎರಡನೇ ಜಿಎಂ ನಾರ್ಮ್ ಹಾಗೂ 2022ರ ಸರ್ಬಿಯಾ ಮಾಸ್ಟರ್ಸ್‌ನಲ್ಲಿ ಮೂರನೇ ಜಿಎಂ ನಾರ್ಮ್ ಪಡೆದುಕೊಂಡಿದ್ದರು.

ಕೊಕ್ಕೊ: ಸೆಮಿಗೆ ಸಿದ್ದಗಂಗಾ ಶಾಲೆ

ಬೆಂಗಳೂರು: ಆತಿಥೇಯ ಸಿದ್ಧಗಂಗಾ ಪಬ್ಲಿಕ್ ಶಾಲೆ ತಂಡ ಇಲ್ಲಿ ನಡೆಯುತ್ತಿರುವ ಸಿಬಿಎಸ್‌ಸಿ ಶಾಲೆಗಳ ಕ್ಲಸ್ಟರ್–8 ಕೊಕ್ಕೊ ಟೂರ್ನಿಯ ಬಾಲಕರ ವಿಭಾಗದ ಸೆಮಿಫೈನಲ್ ಪ್ರವೇಶಿಸಿತು.

ಚಂದ್ರಾ ಬಡಾವಣೆಗೆಯಲ್ಲಿರುವ ಶಾಲೆಯ ಅಂಗಳದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಸಿದ್ದಗಂಗಾ ಶಾಲಾ ತಂಡ 14–12 ರಲ್ಲಿ ರವಿಶಂಕರ್ ವಿದ್ಯಾಮಂದಿರ ವಿರುದ್ಧ ಗೆದ್ದಿತು.

ಬಾಲಕರ ವಿಭಾಗದ ಇತರ ಪಂದ್ಯಗಳಲ್ಲಿ ಮೈಸೂರಿನ ಶಿಕ್ಷಕರ್ಣಿ ಸೆಂಟ್ರಲ್ ಶಾಲೆ 17–12 ರಲ್ಲಿ ಬೆಂಗಳೂರಿನ ಪ್ರಾರ್ಥನಾ ಶಾಲೆ ವಿರುದ್ಧ; ಮೈಸೂರಿನ ಹರಿ ವಿದ್ಯಾಲಯ 11–6 ರಲ್ಲಿ ಕೊಪ್ಪಳದ ಶ್ರೀ ವಿದ್ಯಾನಿಕೇತನ ಶಾಲೆಯ ವಿರುದ್ಧ, ಆದರ್ಶ ಸೆಂಟ್ರಲ್ ಶಾಲೆ, ಬ್ಯಾಡಗಿ ತಂಡವು 11–7 ರಲ್ಲಿ ದಾವಣಗೆರೆಯ ಬಾಪೂಜಿ ಹೈಯರ್ ಪ್ರೈಮರಿ ಸ್ಕೂಲ್ ವಿರುದ್ಧ ಗೆದ್ದವು.

ಬಾಲಕಿಯರ ವಿಭಾಗದಲ್ಲಿ ಸಿದ್ಧಗಂಗಾ ಪಬ್ಲಿಕ್ ಶಾಲೆ 9–4 ರಲ್ಲಿ ರವಿಶಂಕರ್ ವಿದ್ಯಾ ಮಂದಿರ, ಬೆಂಗಳೂರು ಉತ್ತರದ ವಿರುದ್ಧ ಗೆದ್ದರೆ, ಶಿಕ್ಷಕರ್ಣಿ ಮೈಸೂರು ತಂಡವು 14–1 ರಲ್ಲಿ ಡೆಲ್ಲಿ ಪಬ್ಲಿಕ್ ಸ್ಕೂಲ್ ಬೆಂಗಳೂರು ತಂಡವನ್ನು ಮಣಿಸಿತು.